ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 27 ಮಂಗಳವಾರ 2024


₹4

ಸಂಪುಟ: 44 | ಸಂಚಿಕೆ: 310 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಫೆ.29ರಂದು ವಿಶೇಷ ಸ್ವಾತಿ ಪೂಜೆ



ಮೈಸೂರು, ಫೆ.26–ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಫೆ.29ರಂದು ಗುರುವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾ ಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ.

ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ಕೊಡುಗೈ ದಾನಿ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9342188323, 7598832271 ಸಂಪರ್ಕಿಸಬಹುದು.

ನಿನಾದ ಗೃಹ ಸಂಗೀತ ಸರಣಿಯ 13ನೇ ಕಾರ್ಯಕ್ರಮ

ಮಾ.3, ಸಾರಂಗ್ ಫಾಗ್ರೆ ಹಿಂದೂಸ್ತಾನಿ ಗಾಯನ

ಮೈಸೂರು, ಫೆ.26– ನಗರದ ಕೇರ್ಗಳ್ಳಿಯಲ್ಲಿ 'ನಿನಾದ ಗೃಹ ಸಂಗೀತ' ಸರಣಿಯ 13ನೇ ಕಾರ್ಯಕ್ರಮ ಮಾರ್ಚ್ 3ರಂದು ಸಂಜೆ 6 ಗಂಟೆಗೆ 'ನಿನಾದ'ದಲ್ಲಿ ನಡೆಯಲಿದ್ದು, ಭೋಪಾಲ್‌ನ ಶ್ರೀ ಸಾರಂಗ್ ಫಾಗ್ರೆ ಅವರು ಹಿಂದೂಸ್ತಾನಿ ಗಾಯನ ನಡೆಸಿಕೊಡಲಿದ್ದಾರೆ.



'ನಿನಾದ'ದ ಕಾರ್ಯಕ್ರಮದಲ್ಲಿ ಅವರೊಂದಿಗೆ ತಬಲಾದಲ್ಲಿ ಶ್ರೀ ಸಾಗರ್ ಭರತ್‌ರಾಜ್ ಮತ್ತು ಹಾರ್ಮೋನಿಯಂನಲ್ಲಿ ಶ್ರೀ ತೇಜಸ್ ಕಾಟೋಟಿ ಸಾಥ್ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 9449676014 ಸಂಪರ್ಕಿಸಬಹುದು.

ಸಂಗೀತದ ಮನೆತನದಲ್ಲಿ ಹುಟ್ಟಿದ ಫಾಗ್ರೆ ಅವರು ತಮ್ಮ ಹೆತ್ತವರಿಂದ ಕಲೆಯ ಅಭಿರುಚಿ ಬೆಳೆಸಿಕೊಂಡರು. ಬಾಲ್ಯದಲ್ಲಿ ಶ್ರೀ ಮಕರಂದ್ ಹಳ್ವೆ ಅವರ ಬಳಿ ತಬಲಾ ಅಭ್ಯಾಸ ಆರಂಭಿಸಿ ಮುಂದೆ ಸುಮಾರು 10 ವರ್ಷಗಳ ಕಾಲ ಮುಂದುವರೆಸಿದರು. ಬಳಿಕ ಗಾಯನದೆಡೆಗೆ ಆಕರ್ಷಿತರಾದ ಸಾರಂಗ್ ಫಾಗ್ರೆ, ದಿ. ವಿದುಷಿ ಮೀರಾ ವಿ ರಾವ್ ಅವರ ಬಳಿ ಕಲಿಕೆ ಆರಂಭಿಸಿದರು. ಮುಂದೆ ಪಂ.ವಿಜಯ್ ಸರದೇಶ್‌ಮುಖ್ ಅವರ ಶಿಷ್ಯತ್ವವೂ ದೊರಕಿತು. ತಮ್ಮ ತಂದೆ ಶ್ರೀ ಅಭಯ್ ಫಾಗ್ರೆ ಅವರ ನಿರಂತರ ಮಾರ್ಗದರ್ಶನವನ್ನೂ ಪಡೆದು ಸದ್ಯ ಪಂ.ಅರುಣ್ ಕಶಾಲಕರ್ ಅವರ ಶಿಷ್ಯರಾದ ಶ್ರೀ ವಿಶಾಲ್ ಮೋಘೆ ಅವರ ಬಳಿ ಅಭ್ಯಾಸ ನಿರತರಾಗಿದ್ದಾರೆ. ಸಾರಂಗ್ ಅವರು ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದ ವಿದ್ಯಾರ್ಥಿವೇತನ ಪಡೆದಿದ್ದಾರೆ. ಆಕಾಶವಾಣಿಯ ಬಿ–ಹೈ ಗ್ರೇಡ್ ಕಲಾವಿದರಾದ ಇವರ ಸಂಗೀತದ ಸಂವೇದನೆಗಳು ಸಂಗೀತ ತಜ್ಞರ, ಸಂಗೀತ ಪ್ರೇಮಿಗಳ ಹಾಗೂ ಸಹೃದಯಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದೆ.



ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ 2024ರ ಅಂತರ ಕಾಲೇಜು ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಎಂಎಂಕೆ ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕೀರ್ತನ ಶಾಸ್ತ್ರೀಯ ನೃತ್ಯದಲ್ಲಿ ದ್ವಿತೀಯ, ಸ್ವಪ್ನ ಇಂಗ್ಲಿಷ್ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ. ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು ಅಭಿನಂದಿಸಿದರು.

ಯೋಗ ಚಾಂಪಿಯನ್ ಕವೀಶ್‌ಗೆ ಪ್ರಶಸ್ತಿ



ಮೈಸೂರು,ಫೆ.26–ಮೈಸೂರಿನ ವಿಜಯನಗರದ ಮೈಸೂರು ವಿವೇಕಾನಂದ ಯೋಗ ಫೌಂಡೇಶನ್ ಮತ್ತು ಯೋಗ ಸಂಶೋಧನಾ ಸಂಸ್ಥೆಯ ಸಂಸ್ಥಾಪಕರು ಹಾಗೂ ಯೋಗಾಚಾರ್ಯ ಡಾ.ಗಣೇಶ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಯೋಗ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕರಿಗೆ ಪ್ರಶಸ್ತಿ ಪುರಸ್ಕಾರ ಸಮಾರಂಭ ಏರ್ಪಡಿಸಲಾಗಿತ್ತು. ಈ ವೇಳೆ ಅನಂತಗೀತ ವಿದ್ಯಾಲಯದಲ್ಲಿ 10ನೇ ತರಗತಿಯಲ್ಲಿ ಓದುತ್ತಿರುವ ಕವೀಶ್‌ಗೆ ಯೋಗ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆ ಗುರುತಿಸಿ 'ವಿವೇಕ ರತ್ನ ಸದ್ಭಾವನಾ ಪ್ರಶಸ್ತಿ' ನೀಡಲಾಯಿತು. ಈ ವೇಳೆ ಶಾಲೆಯ ಪ್ರಾಂಶುಪಾಲ ಶ್ರೀಕಾಂತ್, ಉಪಪ್ರಾಂಶುಪಾಲ ಹೆಚ್.ಪಿ. ಲೋಕೇಶ್, ದೈಹಿಕ ಶಿಕ್ಷಕ ಬಿಳಿಗಿರಿ ರಂಗಯ್ಯ, ಶಿಕ್ಷಕರು ಉಪಸ್ಥಿತರಿದ್ದರು.

ಪೊಲೀಸ್ ಸಹಕಾರ ಸಂಘದ ಪದಾಧಿಕಾರಿಗಳು

ಮೈಸೂರು,ಫೆ.26(ಎಸ್‌ಬಿಡಿ)–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಪೊಲೀಸ್ ಸಹಕಾರ ಸಂಘದ ಆಡಳಿತ ಮಂಡಳಿಗೆ ನೂತನ ನಿರ್ದೇಶಕರು ಆಯ್ಕೆಯಾಗಿದ್ದಾರೆ. ಭಾನುವಾರ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಕಾಳಪ್ಪನಾಯಕ, ಎಂ.ಜಿ. ರಘು, ಆರ್.ದಿನೇಶ್, ಚೇತನ್, ಮರಪ್ಪ ದಾದಾಫೀರ್, ಜನಾರ್ಧನಜೆಟ್ಟಿ, ಎಸ್.ಬಸಪ್ಪ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ನಂದಕುಮಾರ್, ಪರಿಶಿಷ್ಟ ಪಂಗಡದಿಂದ ಪ್ರಸನ್ನನಾಯಕ, ಪ್ರವರ್ಗ–ಎ ಕ್ಷೇತ್ರದಿಂದ ಸಿ.ಬಿ.ಭೈರೇಗೌಡ, ಪ್ರವರ್ಗ–ಬಿ ಕ್ಷೇತ್ರದಿಂದ ಧನಂಜಯ, ಮಹಿಳಾ ಮೀಸಲು ಕ್ಷೇತ್ರದಿಂದ ಎನ್.ಶೀಲಾ ಹಾಗೂ ಕೆ.ಎನ್.ವಿದ್ಯಾರಾಣಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಿ.ಅನುಸೂಯ ತಿಳಿಸಿದ್ದಾರೆ.



ಮೈಸೂರು ನಗರ ಪರಿಶಿಷ್ಟ ಪಂಗಡ (ಎಸ್‌ಟಿ) ವಿಭಾಗದಿಂದ ಭಾನುವಾರ ನಿಧನರಾದ ಸುರಪುರದ ಶಾಸಕ ರಾಜಾ ವೆಂಕಟಪ್ಪ ನಾಯಕರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ವೇಳೆ ನಗರಾಧ್ಯಕ್ಷ ಎಸ್.ರೋಹಿತ್, ಮುಖಂಡರಾದ ದೇವಪ್ಪನಾಯಕ, ಶಿವಲಿಂಗಯ್ಯ, ರಮೇಶ್ ನಾಯಕ್, ರವಿ ನಾಯಕ್, ಸುನಿಲ್, ನಾರಾಯಣ್ ಇತರರಿದ್ದರು.

ನಿಧನ

ಪಿ.ಜಿ. ಶಿವಶಂಕರ್



ಮೈಸೂರು,ಫೆ.26–ಮೈಸೂರಿನ ಚಾಮರಾಜ ಮೊಹಲ್ಲಾದ ಡಿ. ಸುಬ್ಬಯ್ಯ ರಸ್ತೆ ನಿವಾಸಿ ಪಿ.ಜಿ.ಶಿವಶಂಕರ್ (74) ಸೋಮವಾರ ಬೆಳಗ್ಗೆ ನಿಧನರಾದರು. ಅವಿವಾಹಿತರಾದ ಇವರು, ಸಹೋದರರಾದ ಪಿ.ಜಿ. ಸತ್ಯನಾರಾಯಣ (ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಕಾರ್ಯದರ್ಶಿ) ಮತ್ತು ಪಿ.ಜಿ.ಚಂದ್ರಶೇಖರ್ (ಸ್ಟಾರ್ ಆಫ್ ಮೈಸೂರ್ ರೇಸಿಂಗ್ ಕರೆಸ್ಪಾಂಡೆಂಟ್) ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೇನಂಡ ಜಿ.ದೇವಕ್ಕಿ



ಮೈಸೂರಿನ ಕುವೆಂಪುನಗರದ ನಿವಾಸಿ ಸಿ.ಬಿ.ಗಣಪತಿ ಅವರ ಪತ್ನಿ ಚೇನಂಡ ಜಿ.ದೇವಕ್ಕಿ (ಮುಕ್ಕಾಟೀರ–ಕಡಂಗಾದಲ್) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್ಚುವರಿ ಮತವಿದ್ದರೂ ಜೆಡಿಎಸ್‌ಗೆ ಪೂರ್ಣ ವಿಶ್ವಾಸ ಮೂಡಿಸದ ದೋಸ್ತಿ



ಬೆಂಗಳೂರು: ಭಾರಿ ಕುತೂಹಲಕ್ಕೆ ಕಾರಣವಾಗಿರುವ ರಾಜ್ಯಸಭಾ ಚುನಾವಣೆಗೆ ಕ್ಷಣಗಣನೆ ಆರಂಭವಾಗಿದೆ. ನಾಳೆ (ಫೆ.27) ಚುನಾವಣೆ ನಡೆಯಲಿದ್ದು, ಐದು ಜನ ಅಭ್ಯರ್ಥಿಗಳ ಹಣೆಬರಹ ನಾಳೆಯೇ ನಿರ್ಧಾರವಾಗಲಿದೆ. ನಾಲ್ಕು ಜನ ವಿಜೇತರಾಗಲಿದ್ದಾರೆ. ಕಾಂಗ್ರೆಸ್‌ಗಿಂತ ಹೆಚ್ಚಾಗಿ ಬಿಜೆಪಿ ಮತ್ತು ಜೆಡಿಎಸ್‌ಗೆ ಅಡ್ಡಮತದಾನದ ಭೀತಿ ಎದುರಾಗಿದೆ.

ಹಾಲಿ ವಿಧಾನಸಭೆಯ 224 ಕ್ಷೇತ್ರಗಳ ಪೈಕಿ ಸುರಪುರದ ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯಕ್ ಅವರ ಅಕಾಲಿಕ ನಿಧನದಿಂದಾಗಿ 223 ಶಾಸಕರು ಮತ ಚಲಾಯಿಸಬೇಕಾಗಿದೆ. ಸದ್ಯ ಕಾಂಗ್ರೆಸ್ಸಿನ 134, ಬಿಜೆಪಿಯ 66, ಜೆಡಿಎಸ್‌ನ 19 ಮತ್ತು ನಾಲ್ವರು ಪಕ್ಷೇತರ ಶಾಸಕರಿದ್ದಾರೆ. ನಾಲ್ವರು ಪಕ್ಷೇತರರಲ್ಲಿ ದರ್ಶನ್ ಪುಟ್ಟಣ್ಣಯ್ಯ, ಪುಟ್ಟಸ್ವಾಮಿಗೌಡ ಈಗಾಗಲೇ ಕಾಂಗ್ರೆಸ್ಸಿಗೆ ಬಹಿರಂಗವಾಗಿ ಬೆಂಬಲ ಸೂಚಿಸಿದ್ದಾರೆ.

ಜನಾರ್ಧನ ರೆಡ್ಡಿಯವರು ಸಿಎಂ ಮತ್ತು ಡಿಸಿಎಂ ಅವರನ್ನು ಭೇಟಿಯಾಗಿದ್ದಾರೆ. ಬಹುತೇಕ ಅವರ ಮತವು ಕಾಂಗ್ರೆಸ್ ಅಭ್ಯರ್ಥಿಗೆ ಚಲಾವಣೆಯಾಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ. ಒಬ್ಬ ಅಭ್ಯರ್ಥಿಗೆ ಚುನಾವಣೆ ಗೆಲ್ಲಲು 45 ಮತಗಳು ಬೇಕಾಗುತ್ತದೆ. ಆ ಲೆಕ್ಕಾಚಾರದಲ್ಲಿ ಕಾಂಗ್ರೆಸ್‌ಗೆ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ಒಟ್ಟು 135 ಮತಗಳು ಬೇಕಿವೆ. ನಾಲ್ಕು ಜನ ಪಕ್ಷೇತರರು ಸೇರಿ ಈಗಾಗಲೇ ನಮ್ಮ ಸಂಖ್ಯೆ 139 ಇದೆ, ನಮ್ಮ ಅಭ್ಯರ್ಥಿಗಳು ನಿರಾಯಾಸವಾಗಿ ಗೆಲ್ಲಲಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಭಾರಿ ಆತ್ಮವಿಶ್ವಾಸದಲ್ಲಿ ಹೇಳಿದ್ದಾರೆ.

ಬಿಜೆಪಿ ಸಂಖ್ಯಾಬಲ 66 ಇದ್ದರೂ, ತಮ್ಮ ಅಭ್ಯರ್ಥಿಗೆ ಮತ ಚಲಾಯಿಸಿದ ನಂತರ ಹೆಚ್ಚುವರಿಯಾಗಿ 21 ಮತ ಉಳಿಯಲಿದೆ. ಜನಾರ್ದನ ರೆಡ್ಡಿಯವರ ಮತ ಸಿಕ್ಕುವ ಭರವಸೆ ಇಲ್ಲದೇ ಇರುವುದು ಒಂದು ಕಡೆಯಾದರೆ, ಇಬ್ಬರು ಹಾಲೀ ಬಿಜೆಪಿ ಶಾಸಕರ ನಡೆ (ಎಸ್.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್) ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಹಾಗಾಗಿ, ಜೆಡಿಎಸ್ ನಿರೀಕ್ಷಿಸಿದಷ್ಟು ಮತಗಳು ಬಿಜೆಪಿಯಿಂದ ಬರುವ ಸಾಧ್ಯತೆ ಕಮ್ಮಿ.

ಒಂದು ವೇಳೆ ಇಬ್ಬರು ಬಿಜೆಪಿ ಶಾಸಕರು ಕ್ರಾಸ್ ವೋಟಿಂಗ್ ಮಾಡಿದರೆ ಅಥವಾ ಖಾಲಿ ಬ್ಯಾಲೆಟ್ ಅನ್ನು ಮತ ಪೆಟ್ಟಿಗೆಗೆ ಹಾಕಿದರೆ, ಬಿಜೆಪಿಗೆ ಹೆಚ್ಚುವರಿಯಾಗಿ ಉಳಿಯುವುದು 19 ಮತಗಳು. ಅದರಲ್ಲಿ ಚಲಾವಣೆಗೊಂಡ ಮತಗಳು ಒಂದು ವೇಳೆ ಅನೂರ್ಜಿತಗೊಂಡರೆ ಎನ್ನುವ ಮುಂದಾಲೋಚನೆಯಿಂದಾಗಿ ಹೆಚ್ಚುವರಿಯಾಗಿ ಕನಿಷ್ಠ ಇಬ್ಬರು ಅಥವಾ ಮೂವರಿಗೆ ತಮ್ಮ ಅಭ್ಯರ್ಥಿಯ ಪರವಾಗಿಯೇ ಮತ ಚಲಾಯಿಸಲು ಬಿಜೆಪಿ ಸೂಚಿಸಿದೆ. ಇದು, ಜೆಡಿಎಸ್ ಗೆಲುವಿನ ಆಸೆಗೆ ತಣ್ಣೀರು ಎರಚಿದಂತಾಗಿದೆ.

ಬಿಜೆಪಿಯ ಈ ನಿರ್ಧಾರದಿಂದಾಗಿ, ಜೆಡಿಎಸ್‌ಗೆ 15–16 ಮತಗಳು ಮಾತ್ರ ಬಿಜೆಪಿ ಕಡೆಯಿಂದ ಬೀಳಬಹುದು. ಬಿಜೆಪಿಯ ಈ ಮತಗಳು ಮತ್ತು ತಮ್ಮ ಸಂಖ್ಯಾಬಲವನ್ನು ಸೇರಿಸಿದರೆ ಜೆಡಿಎಸ್‌ಗೆ 35–36 ಮತಗಳು ಬೀಳಬಹುದು. ಒಂದು ವೇಳೆ ಜೆಡಿಎಸ್‌ನಲ್ಲಿ ಅಡ್ಡ ಮತದಾನ ನಡೆದರೆ ಅಥವಾ ಬಿಜೆಪಿಯ ಶಾಸಕರಿಗೆ, ಜೆಡಿಎಸ್ ಪಕ್ಷಕ್ಕೆ ಮತಚಲಾಯಿಸಲು ಆತ್ಮಸಾಕ್ಷಿ ಒಪ್ಪದೇ ಇದ್ದ ಪಕ್ಷದಲ್ಲಿ ಈ ಸಂಖ್ಯೆ ಇನ್ನಷ್ಟು ಕಮ್ಮಿಯಾಗುವುದಂತೂ ಖಂಡಿತ.

ಎಸ್.ಟಿ.ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರು ತಮ್ಮ ಮತವನ್ನು ಜೆಡಿಎಸ್ ಅಭ್ಯರ್ಥಿಗೆ ನೀಡುವುದಿಲ್ಲ ಎಂದು ಈಗಾಗಲೇ ಬಿಜೆಪಿ ನಾಯಕರಿಗೆ ಸ್ಪಷ್ಟಪಡಿಸಿದ್ದಾರೆ. ಅವರಿಬ್ಬರ ಮತವನ್ನು ಬಿಜೆಪಿ ಅಭ್ಯರ್ಥಿ ನಾರಾಯಣ ಸಾ ಭಾಂಡ ಅವರಿಗೆ ಹಂಚಿಕೆ ಮಾಡಲಾಗಿದೆ. ಆದರೂ ಒಂದು ವೇಳೆ ಅವರಿಂದ ಎಡವಟ್ಟಾದರೆ ಎನ್ನುವ ಮುಂದಾಲೋಚನೆಯಿಂದ ಬಿಜೆಪಿ ತಮ್ಮ ಶಾಸಕರಿಂದ ಮೊದಲ ಪ್ರಾಶಸ್ತ್ಯದ ಹೆಚ್ಚುವರಿ ಮತವನ್ನು ತಮ್ಮ ಅಭ್ಯರ್ಥಿಗೇ ಹಾಕಿಸಿಕೊಳ್ಳುವ ನಿರ್ಧಾರಕ್ಕೆ ಬಂದಿದೆ. ಇದು ಜೆಡಿಎಸ್‌ಗೆ ಭಾರಿ ಹಿನ್ನಡೆಯಾಗಿದೆ. ಮೇಲ್ನೋಟಕ್ಕೆ ಪವಾಡ ನಡೆದರೆ ಮಾತ್ರ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಗೆಲುವು ಸಾಧಿಸಲು ಸಾಧ್ಯ. ಕಣದಲ್ಲಿ ಕಾಂಗ್ರೆಸ್‌ನಿಂದ ಅಜಯ್ ಮೇಕನ್, ಜಿ.ಸಿ.ಚಂದ್ರಶೇಖರ್, ಡಾ.ಸೈಯದ್ ನಾಸೀರ್ ಹುಸೇನ್, ಬಿಜೆಪಿಯಿಂದ ನಾರಾಯಣ ಎಸ್‌ಭಾಂಡಗೆ, ಮೈತ್ರಿ ಅಭ್ಯರ್ಥಿಯಾಗಿ ಡಿ.ಕುಪೇಂದ್ರ ರೆಡ್ಡಿ ಕಣದಲ್ಲಿದ್ದಾರೆ. ನಾಳೆ ಸಂಜೆ 6 ಗಂಟೆ ಮೇಲೆ ಫಲಿತಾಂಶ ಹೊರಬೀಳಬಹುದು.



ವಿಧಾನಸೌಧದಲ್ಲಿ ರಾಜ್ಯಸಭೆ ಚುನಾವಣೆಗೆ ಸಿದ್ಧತೆ ನಡೆಯುತ್ತಿರುವುದು.

ನಿರೀಕ್ಷೆಗಿಂತ ಜಾಸ್ತಿ ಮತಗಳು ಬರಲಿವೆ

ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ನಿರೀಕ್ಷೆಗಿಂತ ಜಾಸ್ತಿ ಮತಗಳು ಕಾಂಗ್ರೆಸ್ ಪಕ್ಷಕ್ಕೆ ಬರಲಿವೆ ಎಂದು ಸಚಿವ ಎಂಬಿ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.



ವಿಧಾನಸೌಧದಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಅಡ್ಡ ಮತದಾನದ ವಿಚಾರವಾಗಿ ನಮಗೆ ಯಾವುದೇ ಭಯ ಇಲ್ಲ ಎಂದರು. ಶಾಸಕರು ಎಲ್ಲರು ಒಟ್ಟಿಗೆ ಇರಬೇಕು ಎಂದು ರೆಸಾರ್ಟ್‌ನಲ್ಲಿ ಇವತ್ತು ಸೇರುತ್ತಿದ್ದೇವೆ. ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕೂಡ ಇದೆ. ಒಟ್ಟಾಗಿ ಬಂದು ಮತದಾನ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ ಎಂದರು.

ಶಾಸಕರು ರಾಜ್ಯಸಭಾ ಚುನಾವಣೆಯಲ್ಲಿ ಮತ ಹಾಕುವಾಗ ತೋರಿಸಬೇಕು. ಅಡ್ಡ ಮತದಾನ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಪಕ್ಷ ಬಿಟ್ಟು ಹೋಗುವ ನಿರ್ಧಾರ ಮಾಡಿರುವಂತವರು ಅಡ್ಡ ಮತದಾನದ ನಿರ್ಧಾರ ಮಾಡುತ್ತಾರೆ. ಅಂತವರು ನಮ್ಮ ಪಕ್ಷದಲ್ಲಿ ಯಾರೂ ಇಲ್ಲ ಎಂದರು. ಬೇರೆ ಪಕ್ಷದವರು ನಮ್ಮ ಪಕ್ಷಕ್ಕೆ ಬರಬೇಕೆಂಬ ಕಾತುರದಲ್ಲಿದ್ದಾರೆ. ನಮ್ಮ ಅಭ್ಯರ್ಥಿಗಳು ನಿರಾಯಾಸವಾಗಿ ನಿರೀಕ್ಷೆಗಿಂತ ಹೆಚ್ಚಿನ ಮತ ಪಡೆದು ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾ.3, ಮೈಸೂರು ವಿವಿ 104ನೇ ಘಟಿಕೋತ್ಸವ



ಮೈಸೂರು, ಫೆ. 26– ಮೈಸೂರು ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವವನ್ನು ಮಾ.3ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಲಾಗಿದೆ. ಕರ್ನಾಟಕ ರಾಜ್ಯದ ರಾಜ್ಯಪಾಲ ಹಾಗೂ ಮೈಸೂರು ವಿವಿ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವಿಶ್ರಾಂತ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಹಾಗೂ ಮೈಸೂರು ವಿವಿ ಸಮಕುಲಾಧಿಪತಿ ಡಾ.ಎಂ.ಸಿ. ಸುಧಾಕರ್ ಉಪಸ್ಥಿತರಿರುವರು.

ಬಿ.ಸಹನಾಗೆ ಚಿನ್ನದ ಪದಕ



ಮೈಸೂರು,ಫೆ.26–ಮೈಸೂರಿನ ಜಯಚಾಮರಾಜೇಂದ್ರ ತಾಂತ್ರಿಕ ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಎಲೆಕ್ಟ್ರಿಕಲ್ಸ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಟೆಕ್ ವಿಭಾಗದಲ್ಲಿ ಬಿ. ಸಹನಾ ಚಿನ್ನದ ಪದಕದೊಂದಿಗೆ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ. ಕಾಲೇಜಿನಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಿನ್ನದ ಪದಕ ವಿತರಿಸಿದರು. ಈಕೆ ಟಿ.ಕೆ. ಲೇಔಟ್ ನಿವಾಸಿ ಎಂ.ಬಿ.ಗಿರಿ ಹಾಗೂ ಶ್ರೀಮತಿ ರಾಜಲಕ್ಷ್ಮಿ ಅವರ ಪುತ್ರಿ.

ಅನಂತಕುಮಾರ್ ಹೆಗಡೆ ಅವರಿಗೆ ನಾಲಿಗೆ ಮೇಲೆ ಹಿಡಿತವಿಲ್ಲ

ಮೈಸೂರು: ಸಂಸದ ಅನಂತಕುಮಾರ್ ಹೆಗಡೆ ಅವರಿಗೆ ನಾಲಿಗೆ ಮೇಲೆ ಹಿಡಿತವಿಲ್ಲ. ರಾಜ್ಯದ ಮುಖ್ಯಮಂತ್ರಿ ವಿರುದ್ಧ ಮನಬಂದಂತೆ ಮಾತನಾಡುತ್ತಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ವಾಗ್ದಾಳಿ ನಡೆಸಿದ್ದಾರೆ.



ಬಿ.ಸುಬ್ರಹ್ಮಣ್ಯ

ಕಳೆದ ಚುನಾವಣೆಯಲ್ಲಿ ಗೆದ್ದ ನಂತರ ಅನಂತಕುಮಾರ್ ಹೆಗಡೆ ಅವರು ಕ್ಷೇತ್ರದಲ್ಲೇ ಕಾಣಿಸಿಕೊಳ್ಳಲಿಲ್ಲ. ಎಲ್ಲಿ ಅವಿತಿದ್ದರೂ ಅನ್ನೋದು ಗೊತ್ತಿಲ್ಲ. ಈಗ ಚುನಾವಣೆ ಹತ್ತಿರ ಬರುತ್ತಿದ್ದಂತೆ ಅವರಿಗೆ ವೀರಾವೇಶ ಬಂದುಬಿಟ್ಟಿದೆ. ರಾಜ್ಯದ ಜನರ ಪರವಾಗಿ ದನಿ ಎತ್ತದ ನೀವು ಯಾವ ನೈತಿಕತೆಯಿಂದ ಮುಖ್ಯಮಂತ್ರಿಗಳನ್ನು ಪ್ರಶ್ನೆ ಮಾಡ್ತೀರಿ ಎಂದು ಬಿ.ಸುಬ್ರಹ್ಮಣ್ಯ ಪ್ರಶ್ನಿಸಿದ್ದಾರೆ.

ಕೇಂದ್ರದ ಹಣವೇನು ನಿಮ್ಮಪ್ಪನ ಮನೆ ಆಸ್ತಿನಾ ಎಂದು ಮುಖ್ಯಮಂತ್ರಿಗಳನ್ನು ಪ್ರಶ್ನೆ ಮಾಡ್ತೀರಿ. ನಿಮಗೆ ತಾಕತ್ತಿದ್ದರೇ ರಾಜ್ಯದ ತೆರಿಗೆಯ ಲೆಕ್ಕ ಕೊಡಿ ಅಂತ ಕೇಂದ್ರ ಸರ್ಕಾರಕ್ಕೆ ಕೇಳಿ ನೋಡೋಣ. ಕೇಂದ್ರದ ಹಣ, ಈ ದೇಶದ ಪ್ರತಿಯೊಬ್ಬ ಪ್ರಜೆಯ ತೆರಿಗೆ ಹಣ. ಅದನ್ನು ಪ್ರಶ್ನೆ ಮಾಡುವ ಹಕ್ಕು ಎಲ್ಲರಿಗೂ ಇದೆ. ರಾಜ್ಯಕ್ಕೆ ಅನ್ಯಾಯವಾಗುತ್ತಿದ್ದರೂ ಅದನ್ನು ಸಮರ್ಥಿಸಿಕೊಳ್ಳುವ ನಿಮಗೆ ರಾಜ್ಯದ ಜನ ಮುಂದೆ ಉತ್ತರ ಕೊಡುತ್ತಾರೆ ಎಂದು ಎಚ್ಚರಿಸಿದ್ದಾರೆ. ಅಲ್ಲದೇ, ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರೋರು ರೈತರೇ ಅಲ್ಲ, ಖಲಿಸ್ತಾನಿಗಳು, ದೇಶದ್ರೋಹಿಗಳು ಅಂದಿದ್ದೀರಿ. ರಾಜ್ಯದ ರೈತರನ್ನು ಮಧ್ಯ ಪ್ರದೇಶದ ಪೊಲೀಸರು ವಶಕ್ಕೆ ಪಡೆದಾಗ ಒಂದು ದನಿ ಎತ್ತಲಿಲ್ಲ. ಈಗ ರೈತರನ್ನು ಅವಮಾನಿಸಿದ್ದೀರಿ. ಹೀಗೆ ಅವಮಾನಿಸುವವರು ರೈತರು ಬೆಳೆದ ಅಕ್ಕಿಯಲ್ಲೇ ಅನ್ನ ತಿನ್ನುತ್ತಿದ್ದೀರಿ ಅನ್ನೋದನ್ನ ಮರೆಯಬೇಡಿ. ಈ ಲೋಕಸಭಾ ಚುನಾವಣೆಯಲ್ಲಿ ರೈತರೂ ನಿಮಗೆ ತಕ್ಕ ಉತ್ತರ ಕೊಡ್ತಾರೆ ಎಂದು ಕಿಡಿಕಾರಿದ್ದಾರೆ.

ಮಾ.2, ಜಶ್ನೆ–ಇ–ಗಂಧದ ಉರುಸ್ ಷರೀಫ್ ಆಚರಣೆ

ಮೈಸೂರು,ಫೆ.26–ಮೈಸೂರಿನ ಕೃಷ್ಣವಿಲಾಸ ರಸ್ತೆ, ಲೋಕಾಯುಕ್ತ ಕಚೇರಿ ಪಕ್ಕ, ದೇವರಾಜ ಮೊಹಲ್ಲಾದಲ್ಲಿರುವ ಹಜ್ರತ್ ಇಮಾಮ್ ಷಾ ವಲಿ (ಆರ್.ಎ) ವತಿಯಿಂದ ಮಾ.2ರಂದು ಸಂಜೆ 7 ಗಂಟೆಗೆ ಜಶ್ನೆ–ಇ–ಗಂಧದ ಉರುಸ್ ಷರೀಫ್ ಕಾರ್ಯಕ್ರಮ ಆಚರಿಸಲಾಗುವುದು ಎಂದು ಮುತಾವಲಿ ದರ್ಗಾ ಓ ಸಜ್ಜದ್ ನಷೀನ್ ಮೊಹಮ್ಮದ್ ನಖೀಬುಲ್ಲಾ ಷಾ ಖಾದ್ರಿ ತಿಳಿಸಿದ್ದಾರೆ.



ಫತಾಖಾನಿ, ಗಂಧವನ್ನು ಲೇಪಿಸುವುದು, ಹೂವಿನ ಚಾದರ ಹರಡುವುದು, ದಾರುದ್–ಒ–ಸಲಾಂ ನೆರವೇರಿಸಲಾಗುವುದು ಹಾಗೂ ಭಾವನಾತ್ಮಕ ದುವಾ ಸಲ್ಲಿಸಲಾಗುವುದು. ಮಾ.1ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಶುಕ್ರವಾರದ ಪ್ರಾರ್ಥನೆ ನಂತರ, ಪ್ರವಾದಿ ಮುಹಮ್ಮದ್ (ಪಿಬಿಹೆಚ್‌ಯು) ಅವರ ಜನ್ಮದಿನದ ಅಂಗವಾಗಿ ಈದ್ ಮೀಲಾದ್ ಉನ್ ನಬಿ ಆಚರಿಸಲಾಗುವುದು. ಹೆಚ್ಚಿನ ವಿವರಗಳಿಗೆ ಮೊ.ಸಂ. : 9845302996 ಅನ್ನು ಸಂಪರ್ಕಿಸಬಹುದು.

ಔಷಧ ಬಳಕೆ, ಸೇವನೆ: ವಿಶೇಷ ಉಪನ್ಯಾಸ

ಮೈಸೂರು,ಫೆ.26–ಮೈಸೂರಿನ ಜಯಲಕ್ಷ್ಮಿಪುರಂನ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಮಾಸಿಕ ಉಪನ್ಯಾಸ ಸರಣಿಯ ಅಂಗವಾಗಿ ಜಯಲಕ್ಷ್ಮಿಪುರಂ ಮಂಡಳಿಯ ಸರಸ್ವತಿ ಸಮುದಾಯ ಭವನದಲ್ಲಿ ಮಾ.4ರಂದು ಸಂಜೆ 5 ಗಂಟೆಗೆ ಮಂಗಳೂರು ಕಸ್ತೂರಿ ಬಾ ಮೆಡಿಕಲ್ ಕಾಲೇಜು ವಿಶ್ರಾಂತ ಪ್ರಾಧ್ಯಾಪಕ ಡಾ.ಹೆಚ್.ಎನ್.ಗೋಪಾಲಕೃಷ್ಣ (ಔಷಧ ಸೇವನೆ ವಿಜ್ಞಾನ) ಅವರಿಂದ ಔಷಧ ಬಳಕೆ ಮತ್ತು ಸೇವನೆ ಕುರಿತು ಉಪನ್ಯಾಸ ಏರ್ಪಡಿಸಲಾಗಿದೆ. ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.



ಡಾ.ಗೋಪಾಲಕೃಷ್ಣ

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ



ಮೈಸೂರು,ಫೆ.26–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಫೆ.29ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.0821–4259259 ಸಂಪರ್ಕಿಸಬಹುದು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜಯಪ್ರಕಾಶ್‌ಗೆ ಬಿಜೆಪಿ ಟಿಕೆಟ್ ನೀಡಲು ಒತ್ತಾಯ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾಗ್ಯ ಮಾತನಾಡಿದರು.

ಮೈಸೂರು,ಫೆ.26(ಜಿಎ)–ಮೈಸೂರು ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ) ಅವರಿಗೆ ಟಿಕೆಟ್ ನೀಡಬೇಕೆಂದು ಬಿಜೆಪಿ ಕಾರ್ಯಕರ್ತರು ಮತ್ತು ಜಯಪ್ರಕಾಶ್ ಅಭಿಮಾನಿಗಳು ಮನವಿ ಮಾಡಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಕಾರ್ಯಕರ್ತೆ ಭಾಗ್ಯ, ಜಯಪ್ರಕಾಶ್ ಅವರು ವಿದ್ಯಾರ್ಥಿ ದೆಸೆಯಿಂದ ಸಂಘಟನೆ ಮೂಲಕ ಗುರುತಿಸಿಕೊಂಡಿದ್ದು, ಕೆಲವರ ಗೆಲುವಿಗೂ ಶ್ರಮಿಸಿದ್ದಾರೆ. ಈ ಬಾರಿ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ತಪ್ಪಲಿದೆ ಎಂಬ ಬಗ್ಗೆ ಸುದ್ದಿ ಇರುವುದರಿಂದ ಪ್ರತಾಪ್ ಸಿಂಹ ಅವರ ಪರ್ಯಾಯವಾಗಿ ಜಯಪ್ರಕಾಶ್ ಅವರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.

ಸಂಸದ ಪ್ರತಾಪ್ ಸಿಂಹ ಅವರು ಮೈಸೂರಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅವರಿಗೆ ಟಿಕೆಟ್ ನೀಡಬೇಕು. ಇಲ್ಲವಾದರೆ, ಪರ್ಯಾಯವಾಗಿ ಜಯಪ್ರಕಾಶ್ ಅವರಿಗೆ ಟಿಕೆಟ್ ನೀಡಬೇಕೆಂದ ಅವರು, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದರಿಂದ ಬಿಜೆಪಿ ಹೊರತುಪಡಿಸಿ, ಬೇರೆ ಪಕ್ಷದವರಿಗೆ ಟಿಕೆಟ್ ನೀಡಿದರೆ, ಅದಕ್ಕೆ ನಮ್ಮ ವಿರೋಧವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿದ್ದುವಳ್ಳಿ ಶಿವಕುಮಾರ್, ಮಂಜುಳಾ, ಟೈಗರ್ ಬಾಲಾಜಿ, ಪುಷ್ಪ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.2.2024 ಮಂಗಳವಾರ, ಮಳೆ ನಕ್ಷತ್ರ: ಶತಭಿಷ 20.2.2024ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು, ಯುವ ರೆಡ್‌ಕ್ರಾಸ್ ಘಟಕ, ಎನ್‌ಎಸ್‌ಎಸ್, ಐಕ್ಯೂಎಸಿ :** ಸಕಾರಾತ್ಮಕತೆಯ ಶಕ್ತಿ ಕುರಿತು ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ : ಟಿಟಿಎಲ್ ಪದವಿ ಕಾಲೇಜು ಪ್ರಾಂಶುಪಾಲ ಡಾ. ಬಿ.ವಿ. ಪ್ರಶಾಂತ್, ಸಂಪನ್ಮೂಲ ವ್ಯಕ್ತಿಗಳು : ಬ್ರಹ್ಮಕುಮಾರಿ ಬಿ.ಕೆ. ಮಂಜುಳಾ, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಕಾಲೇಜು ಪ್ರಾಂಶುಪಾಲರಾದ ಶ್ರೀಮತಿ ಭ್ರಮರಾಂಭ ಎಸ್., ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಜಿಲ್ಲಾ ಮೀನುಗಾರರ ಸಮಾವೇಶ ಹಾಗೂ ಮೈಸೂರು ಜಿಲ್ಲಾ ಕಾಂಗ್ರೆಸ್ ಮೀನುಗಾರರ ಘಟಕದ ನೂತನ ಅಧ್ಯಕ್ಷ ರಾಮನಹಳ್ಳಿ ಸಿದ್ದಯ್ಯ ಅವರ ಪದಗ್ರಹಣ ಸಮಾರಂಭ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಕಚೇರಿ, ಬೆಳಗ್ಗೆ 11ಕ್ಕೆ.

■ **ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ, ತೃತೀಯ ಹಸ್ತನಕ್ಷತ್ರ ಶ್ರೀಯವರಿಗೆ ಏಕದಶವಾರ ರುದ್ರಾಭಿಷೇಕ, ಪಂಚೋಪಚಾರ ಪೂಜೆ, ಮಹಾಮಂಗಳಾರತಿ, ಮ. 12.30ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನ, ಸರ್ಕಾರಿ ಉತ್ತನಹಳ್ಳಿ.

■ **ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಮದ್ರಾಜಯೋಗಿ ಶ್ರೀ ಶ್ರೀ ಶ್ರೀ ಚಿಕ್ಕಲಿಂಗಣ್ಣ ಸ್ವಾಮಿಗಳವರ 87ನೇ ವರ್ಷದ ಆರಾಧನಾ ಮಹೋತ್ಸವ, ಬೆಳಗ್ಗೆ 10ಕ್ಕೆ ವಿದುಷಿ ಶ್ರೀಮತಿ ನಾಗಲಕ್ಷ್ಮೀ ಚಂದ್ರಶೇಖರ್ ಅವರಿಂದ ಶ್ರೀದೇವಿ ಪೂಜೆ, ಸಂಜೆ 6.30 ರಿಂದ ವಿದ್ವಾನ್ ವಿ.ಎಸ್. ಶ್ರೀನಿವಾಸನ್ ಅವರಿಂದ ಶ್ರೀರಾಮನಾಮ ಮಹಿಮೆ ಪ್ರವಚನ, ಸ್ಥಳ: ಉಪ್ಪಿನಕೇರಿ, ಮಂಡಿಮೊಹಲ್ಲಾ.

■ **ಮೈಸೂರು ಸೈನ್ಸ್ ಫೌಂಡೇಷನ್ :** ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ರಾಷ್ಟ್ರ ಮಟ್ಟದ ವೆಬಿನಾರ್ ಸರಣಿ ಉಪನ್ಯಾಸ, ಚಾಮರಾಜನಗರ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಡಾ. ಪಿ.ಎಸ್. ಗುರುಪ್ರಸಾದ್ ಅವರಿಂದ ಹೋಮಿ ಜೆ. ಬಾಬಾ ಮತ್ತು ಸಂಶೋಧಕರು ಮತ್ತು ರಾಷ್ಟ್ರ ನಿರ್ಮಾಣಕಾರರಾಗಿ ಅವರ ದೂರದೃಷ್ಟಿ ಕುರಿತು ಉಪನ್ಯಾಸ, ವೆಬಿನಾರ್ : https://bit.ly/3www9EDk

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ–ಲೇಖನ ಮತ್ತು ಪ್ರಸ್ತುತಿ–ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ– ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ತಂಜಾವೂರು ಎಸ್. ಕಲ್ಯಾಣರಾಮನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಮಾಲತಿ ದಿವಾಕರ ಹೆಗಡೆ, 12.45 ಕವಿಯ ಕಾಳಜಿಯ ವಿಶ್ವ ಶಾಂತಿ ಕುರಿತು ಮಾತನಾಡುತ್ತಾರೆ ಡಾ.ಓ.ಎಲ್.ನಾಗಭೂಷಣ ಸ್ವಾಮಿ, 1.20 ಭಾವಗೀತೆಗಳು–ಶ್ರೀಮತಿದೇವಿ, 3.00 ಟಿ.ಹೆಚ್.ಸುಬ್ರಹ್ಮಣ್ಯಂ–ವಯೋಲಿನ್ ವಾದನ, 4.00 ಕಥಾ ಕಾಲಕ್ಷೇಪ–ಲವಕುಶ–ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ರೇಷ್ಮೆ ಸಿರಿ ಬಾನುಲಿ ಸರಣಿ–ರೇಷ್ಮೆ ಕ್ಲಸ್ಟರ್ ಅಭಿವೃದ್ಧಿ ಯೋಜನೆಗಳು ಕುರಿತು ಡಾ.ಆರ್.ಭಾಗ್ಯ ಅವರೊಂದಿಗೆ ಸಂದರ್ಶನ, 9.30 ಎನ್.ರವಿಕಿರಣ್–ಚಿತ್ರವೀಣಾವಾದನ, 10.00 ಗಮಕ ವ್ಯಾಖ್ಯಾನ, ವಾಚನ–ಲಲಿತಾ ಎಸ್.ಶೇಖರ್, ವ್ಯಾಖ್ಯಾನ–ಸುಮಾ ವಸಂತ್, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 27 ಮಂಗಳವಾರ 2024

ಸಂಪುಟ: 44 | ಸಂಚಿಕೆ: 310 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು–ಕೊಡಗಲ್ಲಿ ಪ್ರತಾಪ್ ಸಿಂಹ, ಚಾಮರಾಜನಗರದಲ್ಲಿ ಪ್ರಸಾದ್ ಅಳಿಯ ಡಾ.ಮೋಹನ್‌ರಿಗೆ ಬಿಜೆಪಿ ಟಿಕೆಟ್ ನೀಡಲು

ಶಿಫಾರಸು

- ರಾಜ್ಯ ಬಿಜೆಪಿ ಪ್ರಮುಖರ ಸಭೆಯಲ್ಲಿ ನಿರ್ಧಾರ
- ಸ್ಪರ್ಧೆಗೆ ಬಯಸದ ಸಂಸದರ ಹೊರತು ಉಳಿದಂತೆ ಎಲ್ಲಾ ಹಾಲಿ ಸಂಸದರ ಹೆಸರು ವರಿಷ್ಠರಿಗೆ ರವಾನೆ
- ಬೆಂಗಳೂರು ದಕ್ಷಿಣದಿಂದ ಕೇಂದ್ರ ವಿದೇಶಾಂಗ ಸಚಿವ ಎಸ್.ಜೈಶಂಕರ್, ಬೆಂಗಳೂರು ಕೇಂದ್ರದಿಂದ ನಿರ್ಮಲಾ ಸೀತಾರಾಮನ್ ಕಣಕ್ಕಿಳಿಸಲು ವರಿಷ್ಠರ ಆಸಕ್ತಿ; ಆದರೆ ತೇಜಸ್ವಿ ಸೂರ್ಯ, ಪಿ.ಸಿ.ಮೋಹನ್ ಹೆಸರು ಶಿಫಾರಸು


ಪ್ರತಾಪ್ ಸಿಂಹ


ಡಾ.ಮೋಹನ್

“ಮತ್ತೆ ನನ್ನ ಅಭ್ಯರ್ಥಿಯಾಗಿಸುವ ವಿಚಾರದಲ್ಲಿ ನಮ್ಮ ಕೇಂದ್ರ, ರಾಜ್ಯ ನಾಯಕರ ಬಗ್ಗೆ ನನಗೆ ಪೂರ್ಣ ವಿಶ್ವಾಸವಿದೆ ನನ್ನ ಕೆಲಸ ಕಾರ್ಯಗಳು, ಜನಾಭಿಪ್ರಾಯದ ಬಗ್ಗೆಯೂ ಅರಿವಿರುವುದರಿಂದ ನನಗೆ ಯಾವ ಆತಂಕವಿಲ್ಲ ನಮ್ಮ ಪಕ್ಷ ಮತ್ತು ನಾಯಕರ ವಿಶ್ವಾಸ, ಮಾರ್ಗದರ್ಶನದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ ಈಗಲೇ ನೀಲನಕ್ಷೆ ರೂಪಿಸಿಕೊಂಡಿದ್ದೇನೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಮಾಡಿಸಿದ ರೀತಿ ನೋಡಿದ ಜನ ಮೈಸೂರಲ್ಲಿ ಔಟರ್ ಪೆರಿಫೆರಲ್ ರಿಂಗ್ ರೋಡ್, ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ, ಮೆಟ್ರೋ ಬರಬೇಕೆಂದರೆ ಪ್ರತಾಪ್ ಸಿಂಹ ಸಂಸದರಾಗಿ ಇರಲೇ ಬೇಕೆಂಬುದು ಜನತೆಗೆ ಮನವರಿಕೆಯಾಗಿದೆ. ಹಾಗಾಗಿ ನನಗೆ ಯಾವುದೇ ಭಯವಿಲ್ಲ. –ಪ್ರತಾಪ್ ಸಿಂಹ.

“ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಹಲವಾರು ಆಕಾಂಕ್ಷಿಗಳು ಇದ್ದಾರೆ. ಅವರಲ್ಲಿ ನನ್ನ ಇಬ್ಬರು ಅಳಿಯಂದಿರೂ ಇದ್ದಾರೆ. ಪಕ್ಷದ ರಾಜ್ಯ ಘಟಕದಿಂದ ನನ್ನ ಅಳಿಯ ಡಾ. ಮೋಹನ್ ಅವರ ಹೆಸರು ಶಿಫಾರಸ್ಸಾಗಿರಬಹುದು ಎಂದು ಭಾವಿಸಿದ್ದೇನೆ. ನಾನೂ ಕೂಡ ಅವರ ಹೆಸರನ್ನೇ ಹೇಳಿದ್ದೇನೆ. ಅಂತಿಮವಾಗಿ ಪಕ್ಷದ ರಾಷ್ಟ್ರೀಯ ನಾಯಕರು ಅಭ್ಯರ್ಥಿಯನ್ನು ಘೋಷಿಸುತ್ತಾರೆ. ಅವರನ್ನು ಎಲ್ಲರೂ ಒಪ್ಪಿಕೊಂಡು ಅವರ ಗೆಲುವಿಗಾಗಿ ಶ್ರಮಿಸಬೇಕಾಗುತ್ತದೆ.



– ವಿ.ಶ್ರೀನಿವಾಸಪ್ರಸಾದ್, ಚಾಮರಾಜನಗರ ಸಂಸದರು.

“ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ರಾಜ್ಯ ಘಟಕದಿಂದ ನನ್ನ ಹೆಸರನ್ನು ಶಿಫಾರಸು ಮಾಡಲಾಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ, ಅದರ ಬಗ್ಗೆ ನನಗೆ ಅಧಿಕೃತವಾಗಿ ಏನೂ ಗೊತ್ತಿಲ್ಲ. ಬಹುಶಃ ರಾಜ್ಯ ಘಟಕದವರು ರಾಷ್ಟ್ರೀಯ ಘಟಕಕ್ಕೆ ಶಿಫಾರಸು ಮಾಡಿರುವ ಹೆಸರುಗಳನ್ನು ಬಹಿರಂಗಪಡಿಸುವುದಿಲ್ಲ ಎಂದು ಅಂದುಕೊಂಡಿದ್ದೇನೆ. ಆದರೆ, ನನ್ನ ಹೆಸರು ಶಿಫಾರಸ್ಸಾಗಿರಬಹುದು ಎಂಬ ವಿಶ್ವಾಸವೂ ನನಗಿದೆ.–ಡಾ.ಮೋಹನ್

ಬೆಂಗಳೂರು, ಫೆ.26(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸದ ಹಾಲಿ ಸಂಸದರನ್ನು ಹೊರತುಪಡಿಸಿ, ಉಳಿದಂತೆ ಎಲ್ಲ ಸಂಸದರಿಗೆ ಟಿಕೆಟ್ ನೀಡುವಂತೆ ರಾಜ್ಯ ಬಿಜೆಪಿಯ ಪ್ರಮುಖರು ಪಕ್ಷದ ವರಿಷ್ಠರಿಗೆ ಶಿಫಾರಸು ಮಾಡಿದ್ದಾರೆ.

ಇತ್ತೀಚೆಗೆ ನಗರದ ಕೇಶವಕೃಪಾದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನೀಡಲು ಶಿಫಾರಸು ಮಾಡಲಾಗಿದೆ. ರಾಜಧಾನಿ ಬೆಂಗಳೂರಿನ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಕೇಂದ್ರ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರನ್ನು ಕಣಕ್ಕಿಳಿಸಲು ವರಿಷ್ಠರು ಚಿಂತನೆ ಮಾಡಿದ್ದಾರೆ ಎಂಬ ಮಾಹಿತಿಗಳಿದ್ದರೂ, ಹಾಲಿ ಸಂಸದ ತೇಜಸ್ವಿ ಸೂರ್ಯ ಅವರಿಗೆ ಟಿಕೆಟ್ ನೀಡಲು ಶಿಫಾರಸು ಮಾಡಲಾಗಿದೆ.

ಇದೇ ರೀತಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಹಾಲಿ ಸಂಸದ ಪಿ.ಸಿ. ಮೋಹನ್ ಬದಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಕಣಕ್ಕಿಳಿಸಲು ವರಿಷ್ಠರು ಆಸಕ್ತಿ ತೋರಿದ್ದರೂ ಇಲ್ಲಿನ ಪ್ರಮುಖರು ಮಾತ್ರ ಹಾಲಿ ಸದಸ್ಯರನ್ನೇ ಮುಂದುವರಿಸಲು ನಿರ್ಧರಿಸಿದ್ದಾರೆ. ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಸ್ಪರ್ಧೆಗೆ ಆಸಕ್ತಿ ತೋರದ ಹಿನ್ನೆಲೆಯಲ್ಲಿ ಆ ಕ್ಷೇತ್ರದಿಂದ ಯಾರ ಹೆಸರನ್ನೂ ಶಿಫಾರಸು ಮಾಡಲಾಗಿಲ್ಲ. ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಹಾಲಿ ಸಂಸದ ಜಿ.ಎಂ.ಸಿದ್ದೇಶ್ವರ್ ನಿರಾಸಕ್ತಿ ತೋರಿಸಿರುವ ಹಿನ್ನೆಲೆಯಲ್ಲಿ ಅವರ ಕುಟುಂಬದವರಿಗೆ ಟಿಕೆಟ್ ನೀಡುವಂತೆ ಶಿಫಾರಸು ಮಾಡಲಾಗಿದೆ. ಚಾಮರಾಜನಗರ ಕ್ಷೇತ್ರದಿಂದ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಸ್ಪರ್ಧಿಸಲು ನಿರಾಸಕ್ತಿ ತೋರಿರುವ ಹಿನ್ನೆಲೆಯಲ್ಲಿ ಅವರ ಅಳಿಯನಿಗೆ ಟಿಕೆಟ್ ನೀಡಲು ಶಿಫಾರಸು ಮಾಡಲಾಗಿದೆ. ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧಿಸಲು ಮಾಜಿ ಸಚಿವ ಡಾ.ಕೆ.ಸುಧಾಕರ್ ಆಸಕ್ತಿ ಹೊಂದಿದ್ದರೂ ಈ ಕ್ಷೇತ್ರದಿಂದ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಅವರ ಪುತ್ರ ಅಶೋಕ್ ಅವರಿಗೆ ಟಿಕೆಟ್ ನೀಡುವಂತೆ ಶಿಫಾರಸು ಮಾಡಿದೆ.

ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಹಾಲಿ ಸಂಸದ ಬಸವರಾಜು ನಿರಾಸಕ್ತಿ ತೋರಿಸಿರುವ ಹಿನ್ನೆಲೆಯಲ್ಲಿ ಮಾಜಿ ಸಚಿವರಾದ ಜೆ.ಸಿ.ಮಾಧುಸ್ವಾಮಿ ಇಲ್ಲವೇ ವಿ.ಸೋಮಣ್ಣ ಅವರ ಮಧ್ಯೆ ಟಿಕೆಟ್‌ಗಾಗಿ ಫೈಟ್ ನಡೆದಿದ್ದು, ಈ ಹಿನ್ನೆಲೆಯಲ್ಲಿ ಈ ಕ್ಷೇತ್ರದಿಂದ ಯಾರಿಗೆ ಟಿಕೆಟ್ ನೀಡಬೇಕು ಎಂಬ ಬಗ್ಗೆ ಯಾವುದೇ ಶಿಫಾರಸು ಮಾಡಲಾಗಿಲ್ಲ. ಹಾಲಿ ಸಂಸದರ ಪೈಕಿ ಯಾರು ಕಣಕ್ಕಿಳಿಯಲು ನಿರಾಸಕ್ತಿ ತೋರುತ್ತಾರೋ ● 9ನೇ ಪುಟಕ್ಕೆ

ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಕ್ಕೆ ಇಂದು ಮತದಾನ


- ಮೂರು ಪಕ್ಷಕ್ಕೂ ಅಡ್ಡ ಮತದಾನದ ಭೀತಿ
- ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಮತ ಚಲಾವಣೆ
- ನಂತರ ಮತ ಎಣಿಕೆ; 6 ಗಂಟೆ ವೇಳೆಗೆ ಫಲಿತಾಂಶ
- ಕಾಂಗ್ರೆಸ್ ಮೂರು, ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿ ಕಣದಲ್ಲಿ
- ಮೂರು ಪಕ್ಷಗಳಿಂದಲೂ ಸೇಫ್ ಗೇಮ್ ಮೊರೆ


ಚಂದ್ರಶೇಖರ್ ಮಕೇನ್ ನಾಸಿರ್ ಹುಸೇನ್ ನಾರಾಯಣ ಕುಪೇಂದ್ರರೆಡ್ಡಿ


ಬೆಂಗಳೂರು, ಫೆ.26(ಕೆಎಂಶಿ)– ಅಡ್ಡ ಮತದಾನದ ಭೀತಿ ನಡುವೆಯೇ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಾಳೆ ಮತದಾನ ನಡೆಯಲಿದೆ. ನಾಲ್ಕು ಸ್ಥಾನಗಳ ಆಯ್ಕೆಗೆ ಐವರು ಅಭ್ಯರ್ಥಿಗಳು ಕಣಕ್ಕಿಳಿದಿರುವುದು ಆಡಳಿತಾರೂಢ ಕಾಂಗ್ರೆಸ್ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್‌ಗೂ ತಳಮಳ ಉಂಟಾಗಿದೆ.

ಕಾಂಗ್ರೆಸ್‌ನ ರಾಜಾ ವೆಂಕಟಪ್ಪ ನಾಯಕ್ ಅವರ ಹಠಾತ್ ನಿಧನದಿಂದ ಕಾಂಗ್ರೆಸ್‌ಗೆ ಸ್ವಲ್ಪ ಪೆಟ್ಟು ಬಿದ್ದಿದೆ. ರಾಜ್ಯಸಭೆ ಪ್ರವೇಶಿಸಲು ವಿಧಾನಸಭೆಯಲ್ಲಿ ಪ್ರಸ್ತುತ ಬಲಾಬಲದ ಆಧಾರದ ಮೇಲೆ ಒಬ್ಬ ಅಭ್ಯರ್ಥಿ ಗೆಲುವಿಗೆ ಕನಿಷ್ಠ 44.65 ಮತಗಳ ಅಗತ್ಯವಿದೆ. ಕಣದಲ್ಲಿರುವ ಐದು ಅಭ್ಯರ್ಥಿಗಳು ಸಹ ಆಯಾ ಪಕ್ಷದ ಅಧಿಕೃತ ಅಭ್ಯರ್ಥಿಗಳಾಗಿರುವುದರಿಂದ ● 9ನೇ ಪುಟಕ್ಕೆ









ನಕ್ಕರೆ ಅದೇ ಸ್ವರ್ಗ

ತಂದೆ : ಸ್ವಾಮಿ, ನನ್ನ ಮಗಳು ರಸ್ತೆಯಲ್ಲಿ ಹೋಗುವಾಗ ತಲೆ ತಗ್ಗಿಸಿ ಹೋಗುವ ಹಾಗೆ ಏನಾದ್ರೂ ಮಾರ್ಗ ಹೇಳಿ

ಸ್ವಾಮಿ : ನಿನ್ನ ಮಗಳಿಗೆ ದಿನಕ್ಕೆ 500 ಎಸ್‌ಎಂಎಸ್ ಫ್ರೀ ಇರುವ ಸಿಮ್‌ಕಾರ್ಡ್ ಕೊಡಿಸು. ತಾನಾಗಿಯೇ ನಿತ್ಯ ತಲೆ ತಗ್ಗಿಸಿ ನಡೆಯುತ್ತಾಳೆ...!

ಮೈಸೂರು ಮಿತ್ರ

ಮಂಗಳವಾರ, 27 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಳ್ಳೆಯ ಸಮಾಜ ಕಾಣಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ಮೊದಲಿಗೆ ಅನ್ಯರ ಒಳಿತಿಗಾಗಿ, ಆ ಬಳಿಕ ತನ್ನ ಒಳಿತಿಗಾಗಿ ದುಡಿಯುವ ಮನೋಭಾವವನ್ನು ರೂಢಿಸಿಕೊಳ್ಳುವುದು ಅಗತ್ಯ. – ಡಾ.ರಾಧಾಕೃಷ್ಣನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುರ್ಯೋಧನನಿದ್ದಲ್ಲಿ ಕೌರವನ ಬಳಗಕ್ಕೆ ಕೊರತೆಯೇ?

ನಿಮ್ಮ ಪತ್ರಗಳು

ಹೊಸಹುಂಡಿ ರಿಂಗ್ ರಸ್ತೆಗೆ ಬ್ಯಾರಿಕೇಡ್ ಅಥವಾ ಸಿಗ್ನಲ್ ಅಳವಡಿಸಿ



ಮಾನ್ಯರೆ,

ಚಾಮುಂಡಿಬೆಟ್ಟದ ತಪ್ಪಲು ಹೊಸಹುಂಡಿ ರಿಂಗ್ ರಸ್ತೆಯಲ್ಲಿ ಬ್ಯಾರಿಕೇಡ್ ಅಥವಾ ಸಿಗ್ನಲ್ ಲೈಟ್‌ಗಳು ಇಲ್ಲದೆ ತುಂಬಾ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಅಪಘಾತಗಳು ಹೆಚ್ಚಾಗುತ್ತಿವೆ. ಲಾರಿಗಳು, ದೊಡ್ಡ ದೊಡ್ಡ ಕಂಟೈನರ್‌ಗಳು, ಕಾರು ಇನ್ನಿತರೆ ವಾಹನಗಳು ವೇಗವಾಗಿ ಚಲಿಸುವುದರಿಂದ ಶಾಲೆಗೆ ಹೋಗುವ ಮಕ್ಕಳು, ಗ್ರಾಮಸ್ಥರು ರಸ್ತೆ ದಾಟಲು ಹರಸಾಹಸಪಡಬೇಕಾಗಿದೆ. ವಾರದಲ್ಲಿ ಮೂರು ನಾಲ್ಕು ಅಪಘಾತಗಳು ಸಂಭವಿಸುತ್ತಿವೆ. ಪಾದಚಾರಿಗಳು ರಸ್ತೆ ದಾಟಲು ತುಂಬಾ ಕಷ್ಟವಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಗೆ ಕೂಡಲೇ ಬ್ಯಾರಿಕೇಡ್ ಅಥವಾ ಸಿಗ್ನಲ್ ಅಳವಡಿಸಬೇಕೆಂದು ಈ ಮೂಲಕ ಮನವಿ.

–ಪ್ರದೀಪ್ ಕೃಷ್ಣೇಗೌಡ, ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗ ಅಧ್ಯಕ್ಷ, ಮೈಸೂರು.

ಸಾಮಾಜಿಕ ಪಿಡುಗು ತಡೆಗಟ್ಟಲು ಸಾಧ್ಯವಿಲ್ಲ

ಮಾನ್ಯರೆ,

ಸಿಗರೇಟು ಸೇದುವವರ ವಯಸ್ಸನ್ನು 18 ರಿಂದ 21ಕ್ಕೆ ಹೆಚ್ಚಿಸಿ, ವಿಧಾನಸಭೆಯಲ್ಲಿ ವಿಧೇಯಕವನ್ನು ಅಂಗೀಕಾರ ಮಾಡಲಾಗಿದೆ. ಯಾವ ಆಧಾರದ ಮೇಲೆ ಬೀಡಿ, ಸಿಗರೇಟು ಸೇದುವವವರ ವಯಸ್ಸನ್ನು ಅಳತೆಗೋಲಾಗಿ ಪರಿಗಣಿಸಲು ಸಾಧ್ಯ. ಮೈಸೂರಿನ ಕೆಲವು ಟೀ ಹೋಟೆಲ್‌ಗಳ ಹಿಂದೆ 15 ವರ್ಷದೊಳಗಿನ ಶಾಲಾ ಹುಡುಗರೇ ಸಿಗರೇಟು ಸೇದುತ್ತಾ ಇರುತ್ತಾರೆ. ಮಕ್ಕಳು ದುಶ್ಚಟಗಳಿಗೆ ಬಲಿಯಾಗುವುದನ್ನು ಕೇವಲ ಕಾನೂನಿನಿಂದ ತಡೆಗಟ್ಟಲು ಸಾಧ್ಯವಿಲ್ಲ. ಮನೆಯಲ್ಲಿ ಪೋಷಕರು, ಶಾಲೆಗಳಲ್ಲಿ ಶಿಕ್ಷಕರು ಬುದ್ಧಿ ಹೇಳದೇ ಇಂತಹ ಸಾಮಾಜಿಕ ಪಿಡುಗುಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಇಂತಹ ಕಾನೂನುಗಳು ಸಾರ್ವಜನಿಕರ ಮುಂದೆ ಹಾಸ್ಯಾಸ್ಪದವಾಗಿ ಕಾಣುತ್ತವೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಯೋಧ, ರೈತ ಇಬ್ಬರ ಸಾವು ದೇಶಕ್ಕೆ ನಷ್ಟ

ಮಾನ್ಯರೆ,

ದೇಶದ ಪ್ರತಿಯೊಬ್ಬ ರೈತನ ಸಾವು ದೇಶದ ಯೋಧನ ಸಾವಿನಷ್ಟೇ ಸಮವಾಗಿದೆ. ಒಬ್ಬ ರೈತ ಸಾವನ್ನಪ್ಪಿದರೆ ಆತನ ಸಾವಿನಿಂದ ದೇಶದ ಉತ್ಪಾದನೆ ಕಡಿಮೆಯಾಗುತ್ತದೆ. ಆಹಾರೋತ್ಪಾದನೆ ಕಡಿಮೆಯಾದರೆ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ದಿನೇ ದಿನೆ ರೈತರ ಮೇಲೆ ಪೊಲೀಸರಿಂದ ದೌರ್ಜನ್ಯ ನಡೆಸುವುದು ಕೇಂದ್ರ ಸರ್ಕಾರಕ್ಕೆ ಶ್ರೇಯಸ್ಸಲ್ಲ. ನಿಮ್ಮ ಕಿಸಾನ್ ಸಮ್ಮಾನ್ ಯೋಜನೆ ನೀವೇ ಇಟ್ಟುಕೊಳ್ಳಿ. ನಾವು ಬೆಳೆದ ಬೆಳೆಗೆ ಬೆಂಬಲ ಬೆಲೆ ಕೊಡಿ ಎಂದರೆ ರೈತರ ಮೇಲೆ ಯಾಕಿಷ್ಟು ತಾತ್ಸಾರ. ಬಿಜೆಪಿಯ ರೈತ ಮೋರ್ಚಾಗಳು ರೈತರ ಪರವಾಗಿ ನಿಲ್ಲದೆ ಎಲ್ಲಿ ಅಡಗಿ ಕುಳಿತಿವೆ. ರಾಜ್ಯದ ಮಾಜಿ ಸಿಎಂಗಳಾದ ಕುಮಾರಸ್ವಾಮಿ, ಯಡಿಯೂರಪ್ಪ ಅಧಿಕಾರ ಸ್ವೀಕರಿಸಿದಾಗ ಹಸಿರು ಶಾಲು ಹಾಕಿದ್ದರು. ಈಗ ರೈತರ ಪರ ಇವರಿಂದ ಒಂದು ಹೇಳಿಕೆಯು ಇಲ್ಲ. ಕೇಂದ್ರ ರಬ್ಬರ್ ಗುಂಡು, ಅಶ್ರುವಾಯು ಬಳಕೆ ಮಾಡಿದರೆ, ಲೋಕಸಭಾ ಚುನಾವಣೆಯಲ್ಲಿ ನಿಮ್ಮ ವಿರುದ್ಧ ಬ್ಯಾಲೆಟ್ ಬಳಕೆಯಾಗುತ್ತದೆ. ಇದನ್ನರಿತು ತಕ್ಷಣ ರೈತರ ಸಮಸ್ಯೆಗೆ ಪರಿಹಾರ ನೀಡಲಿ. ಸಾವಿಗೆ ವಿರಾಮ ಹಾಕಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ರೀಲ್ಸ್ ಆಗುತ್ತಿರುವ ರಿಯಲ್ ಸ್ಟಾರ್ ಉಪೇಂದ್ರ ಅವರ ಹಾಡು

ಮಾನ್ಯರೆ,



ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ತೆರೆ ಕಂಡ 'ಉಪೇಂದ್ರ' ಚಿತ್ರದ 'ಏನಿಲ್ಲ... ಏನಿಲ್ಲ' ಹಾಡು ಇತ್ತೀಚಿನ ದಿನಗಳಲ್ಲಿ ತುಂಬಾ ಜನಪ್ರಿಯ ಆಗ್ತಾ ಇದೆ. ಹಾಡು ಚೆನ್ನಾಗೇ ಇದ್ದರೂ ಸಿನಿಮಾ ಬಿಡುಗಡೆಯಾದಾಗ ಸಿನಿಮಾದ ಇತರ ಹಾಡುಗಳಷ್ಟು ಈ ಹಾಡು ಅಷ್ಟೇನೂ ಹಿಟ್ ಆಗಿರಲಿಲ್ಲ. ಈಗ ಎಲ್ಲಿ ನೋಡಿದರೂ ಇದೇ ಹಾಡಿನ ಹವಾ. ಸೋಷಿಯಲ್ ಮೀಡಿಯಾದಲ್ಲಂತೂ ಎಲ್ಲರೂ ಈ ಹಾಡಿಗೆ ರೀಲ್ಸ್ ಮಾಡುವವರೇ. ಹಾಡು ಬಂದು ಇಪ್ಪತ್ತೈದು ವರ್ಷಗಳ ನಂತರ ಇದ್ದಕ್ಕಿದ್ದ ಹಾಗೆ ಏಕೆ ಹಿಟ್ ಆಯಿತು ಎನ್ನುವ ಪ್ರಶ್ನೆಗೆ ಕರಿಮಣಿ ಮಾಲೀಕ ಹಾಡಿನ ಮಾಲೀಕರಾದ ಹಾಡು ಬರೆದ ಉಪೇಂದ್ರ ಅವರಿಗೂ, ಸಂಗೀತ ನೀಡಿದ ಗುರುಕಿರಣ್ ಅವರಿಗೂ ಹುಡುಕಿದರೂ, ಕೆದಕಿದರೂ ಬಹುಶಃ ಉತ್ತರ ಸಿಕ್ಕಿರಲಿಕ್ಕಿಲ್ಲ.

ಸೋಷಿಯಲ್ ಮೀಡಿಯಾದಲ್ಲಿ ರೀಲ್ಸ್ ಮಾಡುವವರಿಂದ ಈ ಹಾಡು ಅತ್ಯಂತ ಜನಪ್ರಿಯ ಆಗಿದ್ದಂತೂ ಸತ್ಯ. ಹಾಡು ಮೊದಲು ಬಂದಾಗ ಕರಿಮಣಿ ಮಾಲೀಕ 'ನೀ ನಲ್ಲ' ಎನ್ನುವವರೇ ಜಾಸ್ತಿ ಇದ್ದರು. ಈಗ ಟ್ರೆಂಡ್ ಬದಲಾವಣೆ ಆಗಿ ವಿಚ್ಛೇದನ ಹೆಚ್ಚುತ್ತಿರುವುದರಿಂದ ಕರಿಮಣಿ ಮಾಲೀಕ 'ನೀನಲ್ಲ' ಎನ್ನುವ ಸಾಹಿತ್ಯ ಇಷ್ಟ ಆಗಿ ಹಾಡು ಇಷ್ಟ ಆಗಿದ್ದರೂ ಆಗಿರಬಹುದು.

–ರಾಘವೇಂದ್ರ ಜೋಯಿಸ್, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಶಿಲಾ ತಪಸ್ವಿಯ ತಲ್ಲೀನತೆಗೆ ಯುಗ ಸಾಕ್ಷಿ

> ಕೆಲಸ ಅದು ಚಿಕ್ಕದಿರಲಿ ದೊಡ್ಡದೇ ಇರಲಿ ಅನ್ನ-ಆಹಾರ, ಛತ್ರ-ಛಾಮರ ಅರವಟ್ಟಿಗೆಗಳು ಸಮಾಜಕ್ಕೆ ಹೊಟ್ಟೆ ತುಂಬಿಸಿವೆ. ಆ ಕೈಂಕರ್ಯ ಕೈಗೊಂಡವರು ಕೃತಾರ್ಥತೆಗೆ ಸಂದಂತೆ, ಕಲೆ ಸಾಹಿತ್ಯ, ಸಂಗೀತ, ಶಿಲ್ಪ ನೃತ್ಯ, ಚಿತ್ರ, ಅಭಿನಯ, ಜನಪದರು-ಹೀಗೆ ಎಲ್ಲಾ ಕಲಾಕಾರರು ಸರ್ವ ಕಾಲದಲ್ಲೂ ತಾವು ಕೂಡ ಈ ಸಮಾಜವನ್ನು ರಂಜಿಸಿ ಅಂತರಂಗಕ್ಕೊಂದು ಸುಖಕೊಟ್ಟು ಸಾಮಾಜಿಕ ವಿದ್ಯಮಾನ ಸೃಷ್ಟಿಸಿದ್ದಾರೆ. ಅಂದರೆ ಕಲೆಯ ಚಟುವಟಿಕೆಗಳು ಕಾಲಾನುಕಾಲದಿಂದ ಉಳಿಯುತ್ತಲೆ ಬಂದಿತು. ಈ ದೃಷ್ಟಿಯಿಂದಲೇ ಇಂದಿಗೂ ಪಂಪನಿಂದ ಕುವೆಂಪುವರೆಗೆ ಎಂದು ನಾವು ಭಾವಿಸಲು, ಬರೆದುಕೊಳ್ಳಲು ಸಾಧ್ಯವಾಗಿದೆ. ಈ ಕಲಾ ವಿದ್ಯಮಾನವೇ ಯುಗಸಾಕ್ಷಿ.

ತನ್ನ ಬಡತನದಲ್ಲೇ ಒಬ್ಬ ಬಡವ ಕೂಡ ಅವಕಾಶ ಸಿಕ್ಕಾಗ ತನ್ನಂತೆಯೇ ಕಷ್ಟದಲ್ಲಿದ್ದವರಿಗೆ ಏನಾದರೊಂದು ಸಹಾಯ ಮಾಡುವ ತವಕದಲ್ಲಿಯೇ ಇರುತ್ತಾನೆ. ಸಿರಿವಂತ ಕೂಡ ತನ್ನಲ್ಲಿರುವ ಸಂಪತ್ತಿನ ಸದ್ಬಳಕೆಗಾಗಿ ತನ್ನಲ್ಲಿರುವ ಸಂಪತ್ತಿನಲ್ಲಿ ಕುಟುಂಬ ಪರಿವಾರದವರಿಗೆ ಮೀಸಲಿಟ್ಟು, ಯಥೇಚ್ಛವಾಗಿ ಹೆಚ್ಚುವರಿಯಾದುದ್ದನ್ನು ಸಮಾಜಕ್ಕೆ ಬೇರೆ ಬೇರೆ ಆಯಾಮಗಳಲ್ಲಿ ಸೇವೆ ಸಲ್ಲಿಸಿ ಕೃತಾರ್ಥಭಾವ ಅನುಭವಿಸುತ್ತಾನೆ. ಕೆಲವರು ಮಾತ್ರ ಸಮಾಜದ ಸಂಪತ್ತನ್ನೆ ಸಮಾಜ ಕರ್ಪಿಸಿ ನಾನು ಕೊಟ್ಟೆ ನಾನು ಕೊಟ್ಟೆ ಎನ್ನುತ್ತಿರುತ್ತಾರೆ. ಒಟ್ಟಾರೆ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಸ್ವಂತಕ್ಕೆ ಸರ್ವಸ್ವ ಸಮಾಜಕ್ಕೆ ಸ್ವಲ್ಪವಾದರು ಏನಾದರೊಂದು ರೀತಿಯಲ್ಲಿ ತನ್ನಲ್ಲಿದ್ದುದನ್ನು ಹಂಚಿ ಕೃತಾರ್ಥಭಾವ ಅನುಭವಿಸುವ ತವಕದಲ್ಲಿರುತ್ತಾರೆ.

ಕೆಲವರು ಸಮಾಜಕ್ಕೆ ಸರ್ವಸ್ವವನ್ನರ್ಪಿಸಿ ಸ್ವಂತಕ್ಕೆ ಸ್ವಲ್ಪ ಮಾಡಿಕೊಂಡು ಕೀರ್ತಿವಂತರಾಗಿ ಆಳಿ, ಬಾಳಿ, ತಾವು ಅಳಿದ ಮೇಲು ಜನರ ಭಾವ ಮಂದಿರದಲ್ಲಿ ಅಚ್ಚಳಿಯದೆ ಉಳಿದವರು ಅನೇಕರಿದ್ದಾರೆ. ಹಾಗೆಂದ ಮೇಲೆ ಹಂಚಿಕೊಳ್ಳುವುದರಲ್ಲಿ ಏನೋ ಒಂದು ಸುಖವಿದೆ, ಒಂದು ಸಮಾಧಾನವಿದೆ. ಇದನ್ನೆ ಸಾಮಾಜಿಕ ವಿದ್ಯಮಾನ ಎಂತಲು ಕರೆಯುತ್ತೇವೆ. ಇದು 2+2=4 ಎನ್ನುವ ರೀತಿಯ ಮ್ಯಾಥಮಿಟಿಕಲ್ ಕ್ಯಾಲುಕ್ಯೂಲೇಷನ್ ಅಲ್ಲ, ನಮ್ಮೊಳಗೆ ಸಂಚಯನಗೊಂಡ ಸಮಾಜಮುಖಿ ತುಡಿತಗಳ ಒತ್ತಡಗಳ ಬಿಡುಗಡೆ ಅಷ್ಟೆ. ಇದು ಲೆಕ್ಕಾಚಾರವಲ್ಲ, ಮನೋಮಂದಿರದ ಸದಾಚಾರ! ಇಡೀ ದೇಶವೇ ಕೊರೊನಾ ಸಂಬಂಧಿ ಲಾಕ್‌ಡೌನ್‌ನಿಂದ ತತ್ತರಿಸಿದಾಗ ಸಮಾಜಕ್ಕೆ ಈ ಲೆಕ್ಕಾಚಾರ ಮತ್ತು ಸದಾಚಾರಗಳೆರಡು ಸಮಯಕ್ಕೆ ಸರಿಯಾಗಿ ಕ್ರಿಯೆ–ಪ್ರತಿಕ್ರಿಯೆಗಳ ರೀತಿಯಲ್ಲಿ ಒದಗಿ ಬಂದಿವೆ.

ಇಂಥ ಕಾಲಘಟ್ಟದಲ್ಲಿ ದುಡ್ಡು–ದುಗ್ಗಾಣಿಗಳ ಮುಖೇನ ಸಮಾಜಕ್ಕೆ, ಸಮಾಜದ ಉಗ್ರಾಣ ತುಂಬಿಸಲಾಗದ ಕಲಾ ಕ್ಷೇತ್ರ ಕೂಡ ಹಿಂದೆ ಬೀಳಲಿಲ್ಲ. ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಮುಂತಾದ ಸಾಂಸ್ಕೃತಿಕ ವಲಯದಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ಕವಿ, ಕಲಾವಿದರು ಕೂಡ ತಮ್ಮ ತಮ್ಮ ಕಲಾ ಸಾಧನೆಯ ಕುಶಲತೆಯ ಸಂಪತ್ತನ್ನು ತಮ್ಮ ಮಾತು, ಕವಿತೆ, ಹಾಡು, ತಮ್ಮ ಬರಹ, ನಟನೆ, ನಾಟ್ಯ, ಚಿತ್ರ, ಶಿಲ್ಪ ಮುಂತಾದವುಗಳ ಮುಖೇನ ಆತಂಕದಲ್ಲಿದ್ದ ಜನರ ಅಂತರಂಗಕ್ಕೆ ತಮ್ಮ ಕಲೆಯ ಮೂಲಕ ರಮಣೀಯತೆಯನ್ನು ತುಂಬಿ ಕೊರೊನಾ ಕಾಲದಲ್ಲಿ ಮನದಲ್ಲಿ ಮನೆ ಮಾಡಿದ್ದ ಆತಂಕದ ಜಾಗ ತುಂಬಿ ಸಮಾಜಮುಖಿ ಕೃತಾರ್ಥತೆಯನ್ನು ಅನುಭವಿಸಿದ್ದಾರೆ. ಹಾಗೆಂದ ಮೇಲೆ ಆರ್ಥಿಕ ಶ್ರೀಮಂತಿಕೆಗೆ ಸರಿಸಮನಾದ ಮತ್ತೊಂದು ಶ್ರೀಮಂತಿಕೆ ಇದೆ ಎಂದಾಯಿತಲ್ಲ; ಅದೇ ಕಲಾ ಶ್ರೀಮಂತಿಕೆ!

ಹೀಗೆ ಅಭಿವ್ಯಕ್ತಿ ಸಾಮರ್ಥ್ಯವಿರುವ, ಕಲಾ ಶ್ರೀಮಂತಿಕೆಯಲ್ಲಿ ಕೆಲಸ ಮಾಡುವ, ಪ್ರತಿಯೊಬ್ಬ ಕವಿ, ಕಲೆಗಾರ, ನಟ ಒಟ್ಟಾರೆ ಸೃಷ್ಟಿಶೀಲತೆಯ ವಲಯದಲ್ಲಿ ಯಾರೆಲ್ಲರ ಉದ್ದೇಶ ಮಾತ್ರ ಒಂದೇ ಇರುತ್ತದೆ. ತಾವು ಸೃಷ್ಟಿಸಿದ ಅದು ಏನೇ ಇರಲಿ, ಅದು ಯಾವುದೇ ಇರಲಿ, ಅದು ಮಾತ್ರ ಸಮಾಜಮುಖಿಯಾಗಿರಬೇಕು ಹಾಗೂ ಸಮಾಜಕ್ಕೆ ಅಂತರಂಗದ ಅನಿರ್ವಚನೀಯ ಸುಖ ಕೊಡಬೇಕು, ಆನಂದ ಕೊಡಬೇಕು. ಕೆಲವೊಮ್ಮೆ Knowledge bank ಆಗಿ ಚಿಂತನೆಗಳನ್ನು ಧಾರೆಯೆರೆಯಬೇಕು ಎಂಬುದೇ ಅದರ ಹಿಂದಿರುವ ಉದ್ದೇಶ. ವ್ಯಾಸ–ವಾಲ್ಮೀಕಿಗಳಾ ಗಲೀ, ಪಂಪ–ಕಾಳಿದಾಸರಾಗಲೀ, ಭಾಸಭವಭೂತಿಗಳಾಗಲೀ ಬಾಣ–ಕಲ್ಹಣರಾಗಲಿ, ಆ ಕಾಲದಿಂದ ಈ ಕಾಲದವರೆಗೆ ಉಳಿದು ಬಂದಿದ್ದಾರೆಂದರೆ ಸಮಾಜದ ಸುಖಕ್ಕಾಗಿ ತಾವು ಸೃಷ್ಟಿಸಿ ಸಮಾಜಕ್ಕೆ ಅರ್ಪಿಸಿದ ಈ ಅಂತರಂಗದ ಆಸ್ತಿಯಿಂದ! ಪ್ರಭುಗಳು ಕಟ್ಟಿಸಿದ ಕೋಟೆ–ಕೊತ್ತಲುಗಳು, ಸಿರಿವಂತರು ಕಟ್ಟಿಸಿದ ಛತ್ರ–ಅರವಟ್ಟಿಗೆಗಳು ಬಸದಿ–ದೇವಾಲಯಗಳು, ಮಂದಿರ–ಮಸೀದಿಗಳು ಉಳಿದ ಹಾಗೆಯೇ ಅಕ್ಷರದ ಆಸ್ತಿ ಕೂಡ ಇವುಗಳ ಪಕ್ಕದಲ್ಲೆ ಪರ್ಯಾಯ ಮಾರ್ಗದಲ್ಲಿ ತಮ್ಮ ಆಸ್ತಿತ್ವ ಉಳಿಸಿಕೊಂಡಿವೆ.

ಕಾಲಗರ್ಭವೆಂಬುದು ಅಗಸ್ತ್ಯನ ಜೀರ್ಣಾಗ್ನಿಯಿದ್ದಂತೆ. ಇಲ್ಲಿ ಎಲ್ಲದರ ಅಸ್ತಿತ್ವವು ಜೀರ್ಣವಾಗಿ ಹೋಗುತ್ತದೆ. ಮನುಷ್ಯ ಮಾತ್ರ ತಾನು ಕಟ್ಟಿದ ಮಹಲು, ತಾನು ಸೃಷ್ಟಿಸಿದ ಸಾಂಸ್ಕೃತಿಕ ಸುಖದ ಅಮಲು ಎರಡನ್ನು ಈ ಅಗಸ್ತ್ಯನ ಜೀರ್ಣಾಗ್ನಿಯಿಂದ ಪಾರು ಮಾಡಿ, ತನ್ನ ನಂತರವು ಉಳಿಸಿ ಹೋಗುವ ನಿಟ್ಟಿನಲ್ಲಿ ತನ್ನ ಶ್ರಮ ಮತ್ತು ಅಭಿವ್ಯಕ್ತಿಗಳನ್ನು ಕಾಲಗರ್ಭದ ಈ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ಸಂರಕ್ಷಿಸಿ ಇಟ್ಟು ಹೋಗುವ ಕುಶಲಕರ್ಮಿಯಾಗಿಯೇ ಯೋಚಿಸುತ್ತಾನೆ. ಪರಿಣಾಮ ನಮ್ಮ ಸಂಸ್ಕೃತಿ, ನಮ್ಮ ಕಲೆ, ನಮ್ಮ ನಾಗರಿಕತೆಗಳು ಇಂದಿಗೂ ನಮ್ಮ ಅಸ್ಮಿತೆಯನ್ನು ಉಳಿಸುವ ಪರಂಪರೆಯಾಗಿಯೇ ಉಳಿದು ಬಂದಿವೆ. ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ಉಳಿಸಿಟ್ಟ ಈ ಎಲ್ಲವೂ 'ಹಳೆಯಚಿನ್ನ'ಗಳಂತೆ ಬೆಲೆ ಬಾಳುವ ಸ್ಮಾರಕಗಳಂತೆ, ನಮ್ಮ ಕಾಲದಲ್ಲಿ ಕಂಗೊಳಿಸಿವೆ. ಇಂಥ ಕಲಾತ್ಮಕ ಅಭಿವ್ಯಕ್ತಿಗಳು ಕಾಲಾತೀತವಾಗಿ ಉಳಿಯಬೇಕಾದರೆ ಕಲಾಕಾರನಿಗೆ ಅವಶ್ಯವಾಗಿ ಬೇಕಾದುದು ಮಾತ್ರ Involvement. ಅಂದರೆ ಯಾವ ಕಲಾಕಾರ ಸಂತೆಗೆ ಮೂರು ಮೊಳ ಹೆಣೆಯುತ್ತಾನೋ ಆತ ಕಾಲಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾನೆ. ಯಾವ ಕಲಾಕಾರ ತನ್ನ ಕಲಾಸೃಷ್ಟಿಯ ಮೂಲಸೆಲೆಯೊಂದಿಗೆ ತಾನೂ ಮಿಳಿತವಾಗಿ ತನ್ನ ಇರುವಿಕೆಯನ್ನು ಸಂಪೂರ್ಣವಾಗಿ ತನ್ನ ಸೃಷ್ಟಿ ಕ್ರಿಯೆಗೆ ವಿನಿಯೋಗಿಸುತ್ತಾನೋ ಆ ಕಲಾಸೃಷ್ಟಿ ಮತ್ತು ಆ ಕಲಾಕಾರ ಇಬ್ಬರೂ ಸಮಾಜದ ಜೀರ್ಣಾಗ್ನಿಯಲ್ಲಿ ಜೀರ್ಣವಾಗದೆ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದೆ ಉಳಿದು ಬಿಡುತ್ತಾರೆ. ತಂತ್ರಜ್ಞಾನದ ಈ ಯುಗದಲ್ಲೂ ನಮ್ಮೆಲ್ಲಾ ಸಾಧನೆಗಳನ್ನು ಸಂರಕ್ಷಿಸಿ ಇಟ್ಟುಕೊಂಡರು. ಪಕ್ಕದಲ್ಲೇ ಡಿಲೀಷನ್ ಆಪ್ಷನ್ ಇರುತ್ತದೆ. ಯಾರಿಗೆ ಗೊತ್ತು! ಯಾವ ಸಂದರ್ಭದಲ್ಲೋ ಅದು ಹೇಗೋ ಎಲ್ಲವೂ ಡಿಲೀಟ್–ಆಗಿ ಹೋಗಿಬಿಡಬಹುದು ಆದರೆ ಅದು ಪ್ರಗತಿಪರವೋ, ಸಾಂಪ್ರದಾಯಕವೋ ಅದು ಯಾವುದೇ ಇರಲಿ ಇಬ್ಬರ ಉದ್ದೇಶವು ಒಂದೇ, ಅದು ಸಾಮಾಜಿಕ ಸುಖಕ್ಕಾಗಿ, ಸಮಾಜಮುಖಿ ಯಾಗಿ ನಿರ್ಮಾಣಗೊಂಡಿದ್ದು! ಆದರೆ Involvement ಇಲ್ಲದೆ ಸೃಷ್ಟಿಸಿದ ಯಾವುದು ಕೂಡ ತನ್ನ ಕಾಲಗರ್ಭದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿ ಕೊಳ್ಳುವುದಿಲ್ಲ. ಇದಕ್ಕೊಂದು ಉದಾಹರಣೆಯನ್ನು ಇಲ್ಲಿ ಉಲ್ಲೇಖಿಸಬೇಕು.

1258ರಲ್ಲಿ ಶಿಲ್ಪಕಲಾ ವೈಭವ ಪೂರ್ಣಗೊಳ್ಳುತ್ತಿದ್ದ ಕಾಲ. ಮೂರನೇ ನರಸಿಂಹ ಪ್ರಭು, ದಂಡನಾಯಕ ಸೋಮನಾಥನ ನೇತೃತ್ವದಲ್ಲಿ ಆವತ್ತಿನ ಕಾಲಕ್ಕೆ ಸೆಲೆಬ್ರಿಟಿ ವರ್ಚಸ್ಸಿನಲ್ಲಿ ಕೆಲಸ ಮಾಡುತ್ತಿದ್ದ ಶಿಲ್ಪಿ ಮಲ್ಲಿತಮ. ಆಗ ನಿರ್ಮಾಣಗೊಂಡ ಶಿಲ್ಪ ವೈಭವವೇ ಇವತ್ತಿನ ಮೈಸೂರು ಜಿಲ್ಲೆಯ ಸೋಮನಾಥಪುರ. ಸೋಮನಾಥಪುರದಲ್ಲಿ ಶಿಲ್ಪಿಗಳು ಪ್ರಾಂಗಣದ ಕೆಲಸ ಮಾಡುತ್ತಿರುತ್ತಾರೆ. ಶಿಲ್ಪ ಕಲಾ ವೈಭವಕ್ಕಾಗಿ ಹತ್ತಾರು ಶಿಲ್ಪಿಗಳು ಹೀಗೆ ಹಗಲಿರುಳೆನ್ನದೆ ಕೆಲಸ ಮಾಡುತ್ತಿದ್ದ ಪರಿಯನ್ನು ಕಂಡು ವಿದೇಶಿ ಯಾತ್ರಿಕನೊಬ್ಬ ಆನಂದ ಭರಿತನಾಗುತ್ತಾನೆ. ತನ್ನ ಟಿಪ್ಪಣಿ ಪುಸ್ತಕದಲ್ಲಿ ಕರ್ನಾಟಕದಲ್ಲಿ ಶಿಲ್ಪಕಲಾ ವೈಭವದ ಪ್ರಸ್ತುತಿಗಾಗಿ ಶಿಲ್ಪಿಗಳ ಕಾರ್ಯವೈಖರಿಯನ್ನು ಗಮನಿಸಿ ತನ್ನ ಪ್ರವಾಸಕಥನಕ್ಕಾಗಿ ಗುರುತು ಹಾಕಿಕೊಳ್ಳುತ್ತಿರುತ್ತಾನೆ. ಹಾಗೆ ಗುರುತು ಹಾಕಿಕೊಳ್ಳುತ್ತಿರುವ ಸಂದರ್ಭದಲ್ಲಿ ಮೂರು ಜನ ಪ್ರಧಾನ ಶಿಲ್ಪಿಗಳು ತಮ್ಮ ತಮ್ಮ ಸಹಾಯಕರ ನೆರವಿನಿಂದ ತಾವು ಒಪ್ಪಿಕೊಂಡ ಕೆತ್ತನೆಯ ಕೆಲಸದಲ್ಲಿ ತಲ್ಲೀನರಾಗಿರುತ್ತಾರೆ. ಅವರ ಕಾರ್ಯವೈಖರಿಯ ತಲ್ಲೀನತೆಗೆ ಮನಸೋತ ಯಾತ್ರಿಕ, ಅಲ್ಲಿ ಕೆತ್ತನೆಯ ಕೆಲಸದಲ್ಲಿ ನಿರತರಾಗಿದ್ದ ಮೂವರು ಪ್ರಧಾನ ಶಿಲ್ಪಿಗಳನ್ನು ಮಾತನಾಡಿಸುತ್ತಾನೆ. ಪ್ರಾಂಗಣದ ಕಂಬ ಕೆತ್ತುವ ಕೆಲಸದಲ್ಲಿ ನಿರತನಾಗಿದ್ದ ಶಿಲ್ಪಿಯೊಬ್ಬರನ್ನು ಏನು ಮಾಡುತ್ತಿದ್ದೀರಿ ಎಂದು ಯಾತ್ರಿಕ ಲೋಕಾಭಿರಾಮವಾಗಿ ಮಾತು ಆರಂಭಿಸಿ ಆತನನ್ನು ಮಾತಿಗೆಳೆಯುತ್ತಾನೆ. ಕೆಲಸದಲ್ಲಿ ಮಗ್ನನಾಗಿದ್ದ ಶಿಲ್ಪಿ ಕೂಡಲೇ ಹಿಂದಿರುಗಿ ಏಕೆ 'ಕಣ್ಣಿಗೆ ಕಾಣುತ್ತಿಲ್ಲವೆ ಕೆಲಸ ಕೊಟ್ಟಿದ್ದಾರೆ ಕೆಲಸ ಮಾಡುತ್ತಿದ್ದೇನೆ' ಎಂದು ಸ್ವಲ್ಪ ಒರಟಾಗಿಯೇ ಉತ್ತರಿಸುತ್ತಾನೆ. ಆ ಶಿಲ್ಪಿಯಿಂದ ಈ ಉತ್ತರವನ್ನು ನಿರೀಕ್ಷಿಸಿರದ ಆ ಯಾತ್ರಿಕ ಕ್ಷಣ ಮಾತ್ರವು ಅಲ್ಲಿ ನಿಲ್ಲದೆ ಮುಂದೆ ಸಾಗುತ್ತಾನೆ.

ಕೆತ್ತನೆಯ ಕೆಲಸದಲ್ಲಿ ಮುಳುಗಿದ್ದ ಎರಡನೆಯ ಶಿಲ್ಪಿಯ ಬಳಿ ಬಂದ ಯಾತ್ರಿಕ, ಮತ್ತದೇ ಪ್ರಶ್ನೆ ಕೇಳುತ್ತಾನೆ. ಯಾತ್ರಿಕನ ಪ್ರಶ್ನೆಗೆ ಉತ್ತರಿಸಿದ ಆ ಶಿಲ್ಪಿ, ಪ್ರಭುಗಳು ಪಗಾರ ನಿಗದಿಗೊಳಿಸಿ ಕೆತ್ತನೆ ಕೆಲಸ ಮುಗಿಸಲು ಹೇಳಿದ್ದಾರೆ ಹಾಗಾಗಿ, ಕೆತ್ತನೆಯ ಕೆಲಸ ಮಾಡುತ್ತಿದ್ದೇನೆ ಎನ್ನುತ್ತಾನೆ. ಮೊದಲನೆಯ ಶಿಲ್ಪಿಯ ಮಾತಿನಷ್ಟು ಈತ ಒರಟನಲ್ಲದಿದ್ದರೂ ಮಾತಿನಲ್ಲೊಂದು ಸೌಜನ್ಯವಿತ್ತು. ಆದರೆ ಪಗಾರಕ್ಕಾಗಿ ಕೆಲಸ, ಕೆಲಸಕ್ಕಾಗಿ ಪಗಾರ, ಅದಕ್ಕಾಗಿ ಈ ಕಾರ್ಯತತ್ಪರತೆ ಎಂಬ ವಸ್ತುನಿಷ್ಠ ಮಾತುಗಾರಿಕೆ ಅವನ ಅಭಿವ್ಯಕ್ತಿಯಲ್ಲಿ ವ್ಯಕ್ತವಾಗುತ್ತಿತ್ತು. ಯಾತ್ರಿಕ ತನ್ನ ಟಿಪ್ಪಣಿಯಲ್ಲಿ ಅದನ್ನು ಬರೆದುಕೊಂಡು ಯಾವ ಭಾವನೆಯೂ ಇಲ್ಲದೆ ಮುಂದುವರಿಯುತ್ತಾನೆ.

ಮೂರನೆಯ ಶಿಲ್ಪಿಯ ಬಳಿಬಂದ ಯಾತ್ರಿಕ ಈತ ಇನ್ಯಾವ ಥರದಲ್ಲಿ ಉತ್ತರ ಕೊಡುತ್ತಾನೋ ಎಂಬ ಆತಂಕದಿಂದಲೇ ಮತ್ತದೇ ಪ್ರಶ್ನೆ; 'ಏನು ಮಾಡುತ್ತಿದ್ದೀರಿ'–ಎಂದು ಕೇಳುತ್ತಾನೆ. ಈ ಮೂರನೇ ಶಿಲ್ಪಿಯ ಬಳಿ ಆಶ್ಚರ್ಯ ಕಾದಿರುತ್ತದೆ. ಕಾರಣ ಮೊದಲ ಇಬ್ಬರೂ ಶಿಲ್ಪಿಗಳು ಉತ್ತರಿಸಿದಂತೆ ಆತ ಉತ್ತರಿಸುವುದಿರಲಿ, ಯಾತ್ರಿಕನ ಕಡೆಗೆ ತಿರುಗಿಯೂ ನೋಡುವುದಿಲ್ಲ ಪ್ರಾಯಶಃ ತಾನು ಕೂಗಿದ್ದು ಆ ಶಿಲ್ಪಿಗೆ ಕೇಳಿಲ್ಲವೆಂದು ಭಾವಿಸಿದ ಆ ಯಾತ್ರಿಕ ಮತ್ತೆ ಮತ್ತೆ ಜೋರಾಗಿ ಕೂಗಿ ಆ ಶಿಲ್ಪಿಯ ಮಾತನಾಡಿಸುವ ಪ್ರಯತ್ನ ಮಾಡುತ್ತಾನೆ. ಆದರೆ ಆ ಶಿಲ್ಪಿಗೆ ಆ ಯಾತ್ರಿಕನ ಮಾತಾಗಲಿ, ಅವನು ಕೇಳಿದ ಪ್ರಶ್ನೆಯಾಗಲಿ ಎರಡು ತಲೆಗೆ ಹೋಗುವುದಿಲ್ಲ, ಆತ ಮಾತ್ರ ನಿರುಮ್ಮಳವಾಗಿ ತನ್ನ ಕೆತ್ತನೆಯ ಕೆಲಸದಲ್ಲಿ ಮಗ್ನನಾಗಿರುತ್ತಾನೆ. ಇದನ್ನೇ ಹೇಳುವುದು ಕಲಾಕಾರಣದ ತಲ್ಲೀನತೆ Involvement ಅಂತ. ಆತನ ಯಾವ ಕೂಗಿಗೂ ತಲೆಯೆತ್ತದ ಆ ಶಿಲ್ಪಿಯನ್ನು ಮಾತನಾಡಿಸಲೇಬೇಕೆಂಬ ಹಠಕ್ಕೆ ಬಿದ್ದು ಆ ಯಾತ್ರಿಕ ಆ ಶಿಲ್ಪಿಯ ಮೈ ಮುಟ್ಟಿ ಅಲುಗಾಡಿಸಿ ಆತನ ಕೆಲಸದ ತಲ್ಲೀನತೆಗೆ ಅಡ್ಡಿಪಡಿಸಿ, ಮಾತನಾಡಿಸುತ್ತಾನೆ. ಆಗ ಯಾತ್ರಿಕನ ಕಡೆ ತಲೆಯೆತ್ತಿದ ಆ ಶಿಲ್ಪಿ ಏನು ಎಂಬಂತೆ ಕಣ್ಣಲ್ಲೇ ಸನ್ನೆ ಮಾಡಿ ತಲೆಯಾಡಿಸುತ್ತಾನೆ. ಆ ಯಾತ್ರಿಕ 'ಏನು ಮಾಡುತ್ತಿದ್ದೀರಿ' ಎಂದು ಕೇಳುತ್ತಾನೆ. ಎಲೆ–ಅಡಿಕೆ ತಾಂಬೂಲ ಜಗಿಯುತ್ತಾ ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತಾ, ಆ ಶಿಲ್ಪಿ ಹೇಳುತ್ತಾನೆ ನಾನು ದೇವಾಲಯದ ಕೆಲಸ ಮಾಡುತ್ತಿದ್ದೇನೆ.

ಹಾಗೆಂದರೆ! ಎನ್ನುವ ಯಾತ್ರಿಕನ ಮಾತಿಗೆ, ಆ ಶಿಲ್ಪಿ ಹೇಳುತ್ತಾನೆ ಇದು ಸೋಮನಾಥ ದೇವಾಲಯದ ಕೆತ್ತನೆಯ ಕೆಲಸ. ಪ್ರಾಂಗಣವನ್ನು ದಾಟಿ ಒಳಬರುವ ಜನಕ್ಕೆ ರಸ ರೋಮಾಂಚನವಾಗುವಂತೆ ಮಾಡುವ ಜವಾಬ್ದಾರಿಯನ್ನು ಹೊತ್ತಿದ್ದೇನೆ. ನಾನು ಇಲ್ಲಿ ಕೆತ್ತುತ್ತಿರುವ ಪ್ರತಿಯೊಂದು ಮೂರ್ತಿಶಿಲ್ಪವು ಜನರ ಮನಸ್ಸಿಗೆ ಮುದ ನೀಡಬೇಕು, ಸಂತೋಷ ಕೊಡಬೇಕು. ಆ ಮೂರ್ತಿ ಜನ ಸಮೂಹದಲ್ಲಿ ರಸೂತ್ಪತ್ತಿಯನ್ನುಂಟು ಮಾಡಬೇಕು. ಹಾಗಾಗಿ ಕೆಲಸದಲ್ಲಿ ಸ್ವಲ್ಪ ತಲ್ಲೀನನಾಗಿ ಬಿಟ್ಟೆ, ನಿಮ್ಮ ಮಾತು ಕೇಳಿಸಲಿಲ್ಲ, ಕ್ಷಮೆ ಇರಲಿ ಎಂದನಂತೆ. ಆತ ಮತ್ತಾರು ಅಲ್ಲ ಆ ಕಾಲದ ಪ್ರಸಿದ್ಧ ಶಿಲ್ಪಿ ಮಲ್ಲಿತಮ. ಯಾತ್ರಿಕ ಆತನ ನಯ, ವಿನಯ, ಕಾರ್ಯತತ್ಪರತೆಯಲ್ಲಿನ ತಲ್ಲೀನತೆಗೆ ಮನಸೋತು ಆತನ ಗುರಿ, ದಿಕ್ಕು–ದೆಸೆಗಳನ್ನು ತನ್ನ ಟಿಪ್ಪಣಿ ಪುಸ್ತಕದಲ್ಲಿ ಗುರುತು ಹಾಕಿಕೊಳ್ಳುತ್ತಾನೆ. ಒಬ್ಬ ಕಲಾಕಾರ ತನ್ನ ನಂತರವು ಉಳಿಯುವ ಆತನ ಕಲಾಸೃಷ್ಟಿಯ ಬಗೆಗೆ ಜವಾಬ್ದಾರಿ ಹೊರುತ್ತಾನೆ ಎನ್ನುವ ಆತನ ಮಾತು ಅದ್ಭುತ. ಅದು ಶಾಶ್ವತ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಬರೆದುಕೊಂಡ ಮೇಲೆ ನಾವು ಪಗಾರಕ್ಕಾಗಿ ಕೆಲಸ ಕೆಲಸಕ್ಕಾಗಿ ಪಗಾರ ಎಂದರೆ ಎರಡನೇ ಶಿಲ್ಪಿಯ ಗುಂಪಿಗೆ ಸೇರುತ್ತೇವೆ. ಇದು ಸರ್ಕಾರದ ಕೆಲಸಕ್ಕೆ ಮಾತ್ರ ಅನ್ವಯಿಸುವುದಿಲ್ಲ ತಲ್ಲೀನತೆಯಿಲ್ಲದೆ ಅಡುಗೆ ಮಾಡುವ ಮಾಮೂಲಿ ಗೃಹಿಣಿಯಿಂದ ಹಿಡಿದು, ಬಾಹ್ಯಾಕಾಶದ ನಿರಂತರ ಸಂಶೋಧನೆಯಲ್ಲಿ ಮುಳುಗಿರುವ ವಿಜ್ಞಾನಿಯತನಕ ಎಲ್ಲರಿಗೂ ಇದು ಪಾಠವೇ! ಇನ್ನು ಕಣ್ಣು, ಕಿವಿ, ಮನಸ್ಸು ಇದಾವುದರ ತಲ್ಲೀನತೆಯೇ ಇಲ್ಲದೇ ಯಾಂತ್ರಿಕವಾಗಿ ಕೈ–ಕಾಲುಗಳು ಮಾತ್ರ ದುಡಿಮೆಯಲ್ಲಿ ತೊಡಗಿಸಿಕೊಂಡರೆ ಮೊದಲ ಶಿಲ್ಪಿಯ ಗುಂಪಿಗೆ ಸೇರುತ್ತೇವೆ. ಮೈ–ಮನಸ್ಸುಗಳು ಕೈ ಕಾಲುಗಳ ಸಂಯೋಜನೆ ತಪ್ಪಿದರೆ ಅಪಘಾತವೇ ಹೊರತು ಆಶಾವಾದಿತನ ಆಗುವುದಿಲ್ಲ. ಮನಸ್ಸು ನಿದ್ರೆಗೆ ಜಾರುವ ಮುಂಜಾನೆಯ ಹೊತ್ತಿನಲ್ಲಿ ಡ್ರೈವಿಂಗ್ ಸೀಟಿನಲ್ಲಿ ಕುಳಿತ ಡ್ರೈವರ್‌ನ ಹಾಗೆ! ಮೂರನೇ ಶಿಲ್ಪಿಯ ಜಾಗದಲ್ಲಿ ನಾವಿದ್ದರೆ ಅದು ದೇವರ ಕೆಲಸ, ಕಾಲಪ್ರವಾಹಕ್ಕೆ ಸಿಕ್ಕಿದರೂ ಅಗಸ್ತ್ಯನ ಜೀರ್ಣಾಗ್ನಿಗೆ ಸಿಕ್ಕಿದರೂ ಅಳಿಯದೆ ಉಳಿಯುವ ಸಮಾಜಮುಖಿ ವಿದ್ಯಮಾನ. ಅಲ್ಲಿ ನಾವು ಕಲಿತ ಕೆಲಸ, ಕಲಾಕಾರ ಸೃಷ್ಟಿಸಿದ ಅದಮ್ಯವಾದ ಕ್ರಿಯಾಶೀಲತೆ ವಸ್ತುವಿನ ರೂಪದಲ್ಲಿ, ಅಕ್ಷರದ ರೂಪದಲ್ಲಿ, ಅಭಿನಯದ ರೂಪದಲ್ಲಿ, ಅಂತರಂಗದಲ್ಲಿ ಬಹಿರಂಗದಲ್ಲಿ ಶಾಶ್ವತ. ಆಯಾ ಕ್ಷೇತ್ರಗಳ ಕಲಾಕಾರರು ಸೃಜಿಸಿದ ಅದ್ಭುತಗಳು ಆ ಕಾಲದ ವಿದ್ಯಮಾನಗಳಾಗಿ ಉಳಿಯುತ್ತವೆ. ಹಾಗೆಯೇ ಉಳಿದಿವೆ. ಇಂದಿಗೂ ಸರ್.ಎಂವಿ ಮತ್ತು ಕೃಷ್ಣರಾಜ ಒಡೆಯರು ಕಟ್ಟಿದ ಅಣೆಕಟ್ಟೆ, ಚೌಡಯ್ಯನವರ ಪಿಟೀಲು, ಡಾ.ರಾಜಕುಮಾರರ ಅಭಿನಯ, ಚಾರ್ಲಿ ಚಾಪ್ಲಿನ್ನರ ಹಾಸ್ಯ–ಹೀಗೆ ಪಟ್ಟಿ ಮಾಡುತ್ತಾ ಹೋದರೆ ನಮ್ಮ ತಲ್ಲೀನತೆಯ ವಿದ್ಯಮಾನದ ಪ್ರತೀಕಗಳು. –ಲೆಕ್ಕ ಅಸಂಖ್ಯಾತವಾಗಬಹುದು.

ಕೆಲಸ ಅದು ಚಿಕ್ಕದಿರಲಿ ದೊಡ್ಡದೇ ಇರಲಿ ಅನ್ನ–ಆಹಾರ, ಛತ್ರ– ಛಾಮರ ಅರವಟ್ಟಿಗೆಗಳು ಸಮಾಜಕ್ಕೆ ಹೊಟ್ಟೆ ತುಂಬಿಸಿವೆ. ಆ ಕೈಂಕರ್ಯ ಕೈಗೊಂಡವರು ಕೃತಾರ್ಥತೆಗೆ ಸಂದಂತೆ, ಕಲೆ ಸಾಹಿತ್ಯ, ಸಂಗೀತ, ಶಿಲ್ಪ ನೃತ್ಯ, ಚಿತ್ರ, ಅಭಿನಯ, ಜನಪದರು–ಹೀಗೆ ಎಲ್ಲಾ ಕಲಾಕಾರರು ಸರ್ವ ಕಾಲದಲ್ಲೂ ತಾವು ಕೂಡ ಈ ಸಮಾಜವನ್ನು ರಂಜಿಸಿ ಅಂತರಂಗಕ್ಕೊಂದು ಸುಖಕೊಟ್ಟು ಸಾಮಾಜಿಕ ವಿದ್ಯಮಾನ ಸೃಷ್ಟಿಸಿದ್ದಾರೆ. ಅಂದರೆ ಕಲೆಯ ಚಟುವಟಿಕೆಗಳು ಕಾಲಾನುಕಾಲದಿಂದ ಉಳಿಯುತ್ತಲೆ ಬಂದಿತು. ಈ ದೃಷ್ಟಿಯಿಂದಲೇ ಇಂದಿಗೂ ಪಂಪನಿಂದ ಕುವೆಂಪುವರೆಗೆ ಎಂದು ನಾವು ಭಾವಿಸಲು, ಬರೆದುಕೊಳ್ಳಲು ಸಾಧ್ಯವಾಗಿದೆ. ಈ ಕಲಾ ವಿದ್ಯಮಾನವೇ ಯುಗಸಾಕ್ಷಿ. ಹಾಗಾಗಿ ತಲ್ಲೀನತೆ (Involvement) ಯಿಂದ ಸೃಷ್ಟಿಸಿದ ಅದು ಯಾವುದೇ ಇರಲಿ ಅದಕ್ಕೆ ಆಯಸ್ಸು ಜಾಸ್ತಿ. ಅಜಂತ, ಎಲ್ಲೋರಗಳು, ಭಾರತದ ಹಳೆಯ ವಿಶ್ವವಿದ್ಯಾನಿಲಯಗಳಾದ ತಕ್ಷಶಿಲ, ನಳಂದದಂತಹ ವಿಶ್ವವಿದ್ಯಾಲಯಗಳು, ಭಾರತದ ಕಂಠಸ್ತ ಗಾನಕೋಗಿಲೆಗಳು, ವಾದ್ಯಪರಿಕರಗಳು, ಕಲಾ ಸಾಮ್ರಾಟರು, ಅಕ್ಷರ ಪ್ರತಿಭೆಗಳು ಇಂದಿಗೂ ಭಾರತೀಯರ ಮನೋಮಂದಿರದಲ್ಲಿ ಅಚ್ಚಳಿಯದೆ ಉಳಿದಿರುವುದೇ ನಮ್ಮ ಸಾಂಸ್ಕೃತಿಕ ವಿದ್ಯಮಾನ. ಇದುವೇ ಆಯುಷ್ಮಾನ್ ಭಾರತ ಏನಂತೀರಿ?

ಬಿಟ್ ಕಾಯಿನ್ ಪ್ರಕರಣ: ಪೊಲೀಸರು ಉಚಿತ ಪಾಸ್ ನೀಡಿದ್ದರು!

ಆರೋಪಿ ಶ್ರೀಕಿ–ಪೊಲೀಸರ ನಂಟು ಇ–ಮೇಲ್‌ನಿಂದ ಬಹಿರಂಗ!

ಬೆಂಗಳೂರು: ಪೊಲೀಸ್ ಕಸ್ಟಡಿಯಲ್ಲಿದ್ದದ್ದು ನನ್ನ ಜೀವನದ ಅದ್ಭುತ ಅನುಭವಗಳಲ್ಲಿ ಒಂದಾಗಿದೆ. ನನಗೆ ಪೊಲೀಸರು ಉಚಿತ ಪಾಸ್ ನೀಡಿದ್ದರು. ಎಲ್ಲಾ ಉನ್ನತ ಪೊಲೀಸರೊಂದಿಗೆ ಉತ್ತಮ ಸ್ನೇಹ, ಬಾಂಧವ್ಯ ಹೊಂದಿದ್ದೆ. ಅವರು ಲ್ಯಾಪ್‌ಟಾಪ್, ಮ್ಯೂಸಿಕ್, ಝೂರ್ಝು–ಟ್ಯಾಬ್ ಸೇರಿ ನನಗೆ ಬೇಕಿದ್ದನ್ನೆಲ್ಲಾ ನೀಡಿದ್ದರು. ಸ್ವತಃ ಪೊಲೀಸ್ ಆಯುಕ್ತರೇ ನನ್ನ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಇದು ಬಿಟ್ ಕಾಯಿನ್ ಪ್ರಕರಣದ ಪ್ರಮುಖ ಆರೋಪಿ ಶ್ರೀಕಾಂತ್ ಅಲಿಯಾಸ್ ಶ್ರೀಕಿ ತನ್ನ ಗರ್ಲ್ ಫ್ರೆಂಡ್‌ಗೆ 2021ರ ಫೆಬ್ರವರಿ 21ರಂದು ರವಾನಿಸಿರುವ ಇ–ಮೇಲ್...!

ಈ ಇ–ಮೇಲ್ ಪೊಲೀಸರು ಆರೋಪಿ ಶ್ರೀಕಿ ಜೊತೆಗೆ ಯಾವ ರೀತಿಯ ನಂಟು ಹೊಂದಿದ್ದರು ಎಂಬುದನ್ನು ಬಹಿರಂಗಪಡಿಸುತ್ತಿದೆ. ಬಹುಕೋಟಿ ಬಿಟ್ ಕಾಯಿನ್ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ ಮೇಲ್ ಅನ್ನು ವಶಪಡಿಸಿಕೊಂಡಿದ್ದು, ಪೊಲೀಸ್ ಅಧಿಕಾರಿಗಳು ಮತ್ತು ಶ್ರೀಕಿ ನಡುವಿನ ನಂಟನ್ನು ಸಾಬೀತುಪಡಿಸಲು ಎಸ್‌ಐಟಿ ಮೇಲ್ ಅನ್ನು ಬಳಕೆ ಮಾಡುತ್ತಿದೆ.



ಬಿಟ್ ಕಾಯಿನ್ ಪ್ರಕರಣದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ವೊಬ್ಬರು ಆರೋಪಿ ಶ್ರೀಕಿಯೊಂದಿಗೆ ನಂಟು ಹೊಂದಿದ್ದಾರೆಂದು ಹೇಳಲಾಗುತ್ತಿದ್ದು, ಇನ್ಸ್‌ಪೆಕ್ಟರ್ ಬಾಬು ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಲು ಮತ್ತು ಕ್ರಿಪ್ಟೋ ವ್ಯಾಲೆಟ್‌ಗಳು, ವೆಬ್‌ಸೈಟ್‌ಗಳು, ಗೇಮಿಂಗ್ ಅಪ್ಲಿಕೇಶನ್‌ಗಳು ಇತ್ಯಾದಿಗಳನ್ನು ಹ್ಯಾಕ್ ಮಾಡಲು ಶ್ರೀಕಿ ಮತ್ತು ಇನ್ನೊಬ್ಬ ಆರೋಪಿ ರಾಬಿನ್ ಖಂಡೇಲ್‌ವಾಲ್ ಅನ್ನು ಹೇಗೆ ಬಳಸಿಕೊಂಡಿದ್ದರು ಎಂಬುದನ್ನು ಬಹಿರಂಗಪಡಿಸಲು ಎಸ್‌ಐಟಿ ಇ–ಮೇಲ್ ಅನ್ನು ಆಧಾರವಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಈ ಇಮೇಲ್ ಬಹಿರಂಗಗೊಂಡಿರುವುದಕ್ಕೆ ಪೊಲೀಸ್ ಇನ್ಸ್‌ಪೆಕ್ಟರ್ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ಮುಂದೆ ಅವರ ಪರ ವಕೀಲರು ವಾದ ಮಂಡಿಸಿದ್ದು, ದೂರಿನಲ್ಲಿ ನೀಡಲಾಗಿರುವ ದಿನಾಂಕದಂದು ಶ್ರೀಕಿ ಪೊಲೀಸ್ ವಶದಲ್ಲಿಯೇ ಇರಲಿಲ್ಲ ಎಂದು ಹೇಳಿದ್ದಾರೆ.



ತನಿಖೆಯನ್ನು ಸುಗಮಗೊಳಿಸುವ ಸಲುವಾಗಿ ಪೊಲೀಸ್ ಇನ್ಸ್‌ಪೆಕ್ಟರ್, ಶ್ರೀಕಿ ಮತ್ತು ರಾಬಿನ್ ಅವರನ್ನು ಸಾಫ್ಟ್‌ವೇರ್ ಸಂಸ್ಥೆಯಾದ ಜಿಸಿಐಡಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ಗೆ ಕರೆದೊಯ್ದಿದ್ದರು ಎಂದು ವಾದಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ವಾದ ಮಂಡಿಸಿರುವ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಬಿಎನ್ ಜಗದೀಶ್, ಇನ್ಸ್‌ಪೆಕ್ಟರ್ ಅವರು ತನಿಖೆಗಾಗಿ ಜಿಸಿಐಡಿಗೆ ಹೋಗಿರಲಿಲ್ಲ. ತನಿಖಾ ತಂಡವು ಸಿಐಡಿ ಅಥವಾ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರನ್ನು ಸಂಪರ್ಕಿಸಬಹುದಿತ್ತು, ಇದನ್ನು ಹೈಕೋರ್ಟ್ ಆದೇಶದಲ್ಲಿ ಒತ್ತಾಯಿಸಿದೆ ಎಂದು ವಾದಿಸಿದರು.

ಪಶ್ಚಿಮಬಂಗಾಳದಲ್ಲಿ ಟಿಎಂಸಿ ಮುಖಂಡನ ಹತ್ಯೆ



ಪಶ್ಚಿಮಬಂಗಾಳ: ಪಶ್ಚಿಮಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಅಶೋಕನಗರದಲ್ಲಿ 49 ವರ್ಷ ವಯಸ್ಸಿನ ತೃಣಮೂಲ ಕಾಂಗ್ರೆಸ್ ಮುಖಂಡರೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ವಾಗ್ವಾದದ ನಂತರ ಗುಂಪೊಂದು ಗುಂಡಿಕ್ಕಿ ಹತ್ಯೆ ಮಾಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತನನ್ನು ಟಿಎಂಸಿ ನಾಯಕ ಬಿಜನ್ ದಾಸ್ ಎಂದು ಗುರುತಿಸಲಾಗಿದ್ದು, ಅವರು ಪಕ್ಷದ ಸಹೋದ್ಯೋಗಿಯ ಮನೆಗೆ ಹೋದಾಗ ಹತ್ಯೆಯಾಗಿದ್ದಾರೆ. ಗುಮಾ 1 ಪಂಚಾಯತ್‌ನ ಉಪ ಮುಖ್ಯಸ್ಥರಾಗಿದ್ದ ದಾಸ್ ಅವರಿಗೆ ಎರಡು ಬಾರಿ ಗುಂಡು ಹಾರಿಸಲಾಗಿದೆ. ಈ ಪೈಕಿ ಒಂದು ಗುಂಡು ಅವರ ತಲೆಗೆ ಹೊಡೆದಿದ್ದು, ಇನ್ನೊಂದು ಅವರ ಎಡಕಿವಿ ಮೂಲಕ ಹೊರಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಸ್ ಅವರನ್ನು ಬರಾಸತ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದಾರೆ. ಆರೋಪಿಗಳು ತಲೆಮರೆಸಿಕೊಂಡಿದ್ದು, ಈ ಪ್ರಕರಣ ಕುರಿತು ತನಿಖೆ ಮಾಡುತ್ತಿದ್ದೇವೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಜಿಗಣೇಹಳ್ಳಿ ಮೈಲಾರಲಿಂಗೇಶ್ವರ ಕಾರ್ಣಿಕ ಬಿಜೆಪಿ ಭರ್ಜರಿ ಗೆಲುವಿನ ಭವಿಷ್ಯ!?

ಕಡೂರು: 'ಹುಟ್ಟಿದ ಕಮಲ ಆಕಾಶ ಮೆಟ್ಟಿತು, ಮಳೆ ಬೆಳೆ ಸಂಪಾಯಿತಲೇ ಪರಾಕ್' ಇದು ತಾಲೂಕಿನ ಜಿಗಣೇಹಳ್ಳಿ ಮೈಲಾರಲಿಂಗೇಶ್ವರ ಸ್ವಾಮಿ ಕಾರ್ಣಿಕದ ನುಡಿ. ಇದು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ವಿಜಯದ ಭವಿಷ್ಯ ಎಂದು ವಿಶ್ಲೇಷಿಸಲಾಗಿದೆ. ಭಾರತ ಹುಣ್ಣಿಮೆ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಣಿಕೋತ್ಸವದಲ್ಲಿ ಕಳೆದ ಎಂಟು ದಿನಗಳಿಂದ ಕಾರ್ಣಿಕ ನುಡಿಯುವ ಗಣಮಗ ಜಿಗಣೇಹಳ್ಳಿ ಮಂಜುನಾಥ್ ದೇವಸ್ಥಾನದ ಆವರಣದಲ್ಲಿರುವ ಬಿಲ್ವಪತ್ರೆ ಮರದಡಿಯಲ್ಲಿ ಹಾಕಲಾಗಿದ್ದ ಹಸಿರು ಚಪ್ಪರದಲ್ಲಿ ಉಪವಾಸ ವ್ರತ ಕೈಗೊಂಡಿದ್ದರು. ಕಾರ್ಣಿಕದ ದಿನ ಸಾಂಪ್ರದಾಯಿಕ ಪೂಜಾ ವಿಧಿ ವಿಧಾನಗಳ ನಂತರ ಹೊಳೆಪೂಜೆ ನಡೆದು ಬಿಲ್ಲನೇರಿದ ಗಣಮಗ ಸದ್ದಲೇ ಎಂದು ಕೂಗಿದಾಗ ಮೌನ ಆವರಿಸಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಮಂಗಳವಾರ 27 ಫೆಬ್ರವರಿ 2024

ಹೃದಯವಂತ ಡಾ.ಸಿ.ಎನ್.ಮಂಜುನಾಥರಿಗೆ ಮೈಸೂರಿಗರ ಹೃದಯಸ್ಪರ್ಶಿ ಅಭಿನಂದನೆ

● ತಾಯಿ, ಪತ್ನಿಯೊಂದಿಗೆ ಪುಷ್ಪವೃಷ್ಟಿಗರೆದು, ಅಭಿಮಾನ ಮೆರೆದ ಅಭಿಮಾನಿಗಳು-ಹಿತೈಷಿಗಳು ● ಕಿಕ್ಕಿರಿದು ತುಂಬಿದ್ದ ಕಲಾಮಂದಿರದಲ್ಲಿ ಸುತ್ತೂರು, ಆದಿಚುಂಚನಗಿರಿ ಶ್ರೀಗಳ ಸಾನ್ನಿಧ್ಯದಲ್ಲಿ 'ಧನ್ಯವಾದ ಧನ್ವಂತರಿ' ಅಭಿನಂದನೆ



ಖ್ಯಾತ ಹೃದ್ರೋಗ ತಜ್ಞರೂ ಆದ ಜಯದೇವ ಹೃದ್ರೋಗ ಸಂಸ್ಥೆಯ ವಿಶ್ರಾಂತ ನಿರ್ದೇಶಕ, ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಮೈಸೂರಿನ ನಾಗರಿಕರ ಪರವಾಗಿ ಹೃದಯ ತುಂಬಿದ 'ಧನ್ಯವಾದ ಧನ್ವಂತರಿ' ಅಭಿನಂದಿಸಿ, ಗೌರವಿಸಲಾಯಿತು. ಜೊತೆಗೆ ಅವರ ಮಾತೃಶ್ರೀ ಶ್ರೀಮತಿ ಶಂಭಮ್ಮ ಹಾಗೂ ಅವರ ಪತ್ನಿ ಶ್ರೀಮತಿ ಅನುಸೂಯ ಮಂಜುನಾಥ್ ಅವರನ್ನು ಅತ್ಯಂತ ಆತ್ಮೀಯವಾಗಿ ಸನ್ಮಾನಿಸಲಾಯಿತು. ಸುತ್ತೂರು ಶ್ರೀ ಡಾ.ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಆದಿಚುಂಚನಗಿರಿ ಶ್ರೀ ಕ್ಷೇತ್ರದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್, ಸಂಸದ ಪ್ರತಾಪ್ ಸಿಂಹ, ಸಮಿತಿ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮೈಸೂರು, ಫೆ.26(ಎಂಕೆ)– ಮಾನವನ ಹೃದಯಕ್ಕೆ, ಮಾನವೀಯ ಹೃದಯ ಸ್ಪರ್ಶಿ ಚಿಕಿತ್ಸೆ ನೀಡುವ ಮೂಲಕ ಅಪಾರ ಜನಾಭಿಮಾನ ಪಡೆದ ಖ್ಯಾತ ಹೃದ್ರೋಗ ತಜ್ಞರೂ ಆದ ಜಯದೇವ ಹೃದ್ರೋಗ ಸಂಸ್ಥೆಯ ವಿಶ್ರಾಂತ ನಿರ್ದೇಶಕ, ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಮೈಸೂರಿನ ನಾಗರಿಕರ ಪರವಾಗಿ ಹೃದಯ ತುಂಬಿದ 'ಧನ್ಯವಾದ ಧನ್ವಂತರಿ' ಅಭಿನಂದನೆ ನೀಡಿ, ಗೌರವಿಸಲಾಯಿತು.

ಮೈಸೂರಿನ ಕಲಾಮಂದಿರದಲ್ಲಿ ಡಾ.ಮಂಜುನಾಥ್ ಅಭಿನಂದನಾ ಸಮಿತಿ ವತಿಯಿಂದ ಆಯೋಜಿಸಿದ್ದ ಸುಂದರ ಅಭಿನಂದನಾ ಸಮಾರಂಭದಲ್ಲಿ ಸುತ್ತೂರು ಶ್ರೀ ಕ್ಷೇತ್ರದ ಡಾ.ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಆದಿಚುಂಚನಗಿರಿ ಶ್ರೀ ಕ್ಷೇತ್ರದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರ ಸಮ್ಮುಖದಲ್ಲಿ ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್, ಅವರ ಮಾತೃಶ್ರೀ ಶ್ರೀಮತಿ ಶಂಭಮ್ಮ ಹಾಗೂ ಅವರ ಪತ್ನಿ ಶ್ರೀಮತಿ ಅನುಸೂಯ ಮಂಜುನಾಥ್ ಅವರನ್ನು ಅತ್ಯಂತ ಆತ್ಮೀಯವಾಗಿ ಸನ್ಮಾನಿಸಿ, ಅಭಿನಂದಿಸಲಾಯಿತು. ಹಾಗೆಯೇ ಪುಷ್ಪವೃಷ್ಟಿಯ ಮೂಲಕ ಡಾ.ಮಂಜುನಾಥ್ ಅವರ ಸೇವೆಯ ಸಾರ್ಥಕತೆಯನ್ನು ಸ್ಮರಿಸಲಾಯಿತು.

ಬಳಿಕ ಅಭಿನಂದನಾ ಭಾಷಣ ಮಾಡಿದ ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್, ಬಹುಭಾಗ್ಯಗಳ ಇಂದಿನ ಸಮಾಜದಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನ್ನ ಅತಿದೊಡ್ಡ ಸೌಭಾಗ್ಯ ಮತ್ತು ಕರ್ತವ್ಯವಾಗಿದೆ. ಸಾರ್ವಜನಿಕ ಜೀವನ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಪರಿಶುದ್ಧವಾದ ಜೀವನ ನಡೆಸಿ, ಬದುಕಿ ಬಾಳಬಹುದು ಎಂಬುದನ್ನು ತೋರಿಸಿ ಕೊಟ್ಟವರು ಡಾ.ಸಿ.ಎನ್.ಮಂಜುನಾಥ್. ಡಾಕ್ಟರ್‌ದ್ದು(ಡಾ.ಸಿ.ಎನ್.ಮಂಜುನಾಥ್) ಜಯದೇವದಲ್ಲಿನ ಅವಧಿ ಮುಕ್ತಾಯವಾಗಿತ್ತು. ಸಹೃದಯಿಗಳು ಅವರು ಮತ್ತೆ ಮುಂದುವರೆಯಲಿ ಎನ್ನುತ್ತಿದ್ದರು. ಆದರೆ, ನನಗೆ ಅನ್ನಿಸಿದ್ದು ಸಾಕು ಎಂದು. ಏಕೆಂದರೆ ಎಲ್ಲವೂ ಚೆನ್ನಾಗಿದ್ದಾಗ ನಿರ್ಗಮಿಸುವುದರಲ್ಲಿನ ಆನಂದ ಮತ್ತು ಸಾರ್ಥಕತೆ ಎಲ್ಲವನ್ನೂ ಕಳೆದುಕೊಂಡ ಮೇಲೆ ನಿರ್ಗಮಿಸುವಾಗ ಇರಲ್ಲ. ಹಾಗಾಗಿ ಅವರ ನಿವೃತ್ತಿ ವಿಚಾರ ಬಂದಾಗ ವಿಶ್ರಾಂತಿ ಪಡೆಯುವುದು ಒಳ್ಳೆಯದು ಅನ್ನಿಸಿತು. ಬಹಳಷ್ಟು ಜನರಿಗೆ ಡಾಕ್ಟರ್ ಬದುಕು ಅದ್ಭುತವಾದ ಸಕ್ಸಸ್ ಎಂದು ಕಾಣಿಸಬಹುದು. ಏಕೆಂದರೆ ಜಯದೇವ ಆಸ್ಪತ್ರೆಯ ನಿರ್ದೇಶಕರಾದ ಮೇಲೆ ತಮ್ಮ ವೃತ್ತಿ ಜೀವನಕ್ಕೆ ಬಹಳಷ್ಟು ಒತ್ತು ನೀಡಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇಷ್ಟೆಲ್ಲಾ ಅವರ ಸಾಧನೆಗೆ ಸಹಕರಿಸಿದ ಅವರಿಗೆ ಜನ್ಮಕೊಟ್ಟ ತಾಯಿ ಮತ್ತು ಅವರ ಪತ್ನಿಯವರನ್ನು ಅಭಿನಂದಿಸಬೇಕು ಎಂದರು.

ತಯಾರು ಮಾಡಿದ್ದಾರೆ: ಡಾಕ್ಟರ್ ನಿವೃತ್ತಿಯಾಗುವುದಕ್ಕೂ ಮುನ್ನ ಅವರ ದಾರಿಯಲ್ಲೇ ನಡೆದು, ಸೇವೆ ನೀಡುವವರನ್ನು ತಮ್ಮ ಸ್ಥಾನದಲ್ಲಿ ಬಿಟ್ಟುಬಂದಿದ್ದಾರೆ ಎಂದು ನಂಬಿದ್ದೇನೆ. ಏಕೆಂದರೆ ದೊಡ್ಡವರ ಹಾದಿಯಲ್ಲಿ ಸಾಗುವುದು ಬಹಳ ಕಷ್ಟ, ಹಾಗೆಯೇ ಸಾಧಕರ ಹಾದಿಯಲ್ಲಿ ಸಾಗುವುದು ತುಂಬಾ ಕಷ್ಟ. ಗಾಂಧೀಜಿ ಹೆಸರನ್ನು ಹೇಳಬಹುದಷ್ಟೇ, ಪಾಲನೆ ಮಾಡುವುದು ಕಷ್ಟ. ಗಾಂಧೀಜಿ ಹೆಸರನ್ನು ಹೇಳಿಕೊಂಡು ಯಾರ್‍ಯಾರು ಯಾವ ಬಗೆಯ ಕೆಲಸ ಮಾಡುತ್ತಿದ್ದಾರೆ ಎಂಬುದು ಗೊತ್ತಿದೆ. ಈ ನಿಟ್ಟಿನಲ್ಲಿ ಡಾಕ್ಟರ್ ಜಾಗರೂಕತೆಯಿಂದ ಕೆಲಸ ಮಾಡಿದ್ದಾರೆ ಎಂಬ ವಿಶ್ವಾಸವಿದೆ. ಇದಕ್ಕೆ ಈ ಕಾರ್ಯಕ್ರಮದಲ್ಲಿ ಸೇರಿರುವ ಜನಸಮೂಹವೇ ಕಾರಣ. ಇಲ್ಲಿ(ಸಮಾರಂಭದಲ್ಲಿ) ಡಾಕ್ಟರ್ ಮೇಲಿನ ಪ್ರೀತಿ, ಸೌಜನ್ಯದಿಂದ ಬಂದವರು ಇದ್ದಾರೆ. ಹೇಗೋ ಇರಲಿ ಡಾಕ್ಟರ್ ಪರಿಚಯ ಇಟ್ಟುಕೊಂಡಿರೋಣ ಎಂತಲೂ ಬಂದಿರಬಹುದು. ಇನ್ನೂ ಕೆಲವರೂ ಡಾಕ್ಟರ್ ಮುಂದೇನೋ ಮಾಡುತ್ತಾರೆ ಎಂಬುದನ್ನು ನೋಡಲು ಬಂದಿರುವವರೂ ಇದ್ದಾರೆ ಎಂದು ತಮ್ಮದೇ ಧಾಟಿಯಲ್ಲಿ ಹಾಸ್ಯ ಚಟಾಕಿ ಹಾರಿಸಿದರು.

ಪೂರ್ಣಕುಂಭ ಸ್ವಾಗತ: ಸಾರ್ಥಕ ಸೇವೆಯನ್ನು ಸ್ಮರಿಸುವ ಖ್ಯಾತ ಹೃದ್ರೋಗ ತಜ್ಞರೂ ಆದ ಜಯದೇವ ಹೃದ್ರೋಗ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅವರ ಅಭಿನಂದನಾ ಸಮಾರಂಭಕ್ಕೆ ಆಗಮಿಸಿದ ಸ್ವಾಮೀಜಿಗಳು ಹಾಗೂ ಗಣ್ಯರನ್ನು ನಾದಸ್ವರದೊಂದಿಗೆ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ನಿರೂಪಣೆ ಮಾಡಿದರೆ, ಡಾ.ಮಂಜುನಾಥ್ ಅಭಿನಂದನಾ ಸಮಿತಿ ಸತೀಶ್‌ಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮಿತಿ ಸದಸ್ಯ ದಿನಕರ್ ಎಲ್ಲರನ್ನು ಸ್ವಾಗತಿಸಿದರು.

ಕಿಕ್ಕಿರಿದು ತುಂಬಿದ ಕಲಾಮಂದಿರ: ಇಡೀ ಕಲಾಮಂದಿರವೇ ಕಿಕ್ಕಿರಿದು ತುಂಬಿತ್ತು. ಡಾ.ಮಂಜುನಾಥ್ ಅವರ ಅಭಿಮಾನಿಗಳು, ಮೈಸೂರಿನ ಗಣ್ಯರು, ಡಾ.ಮಂಜುನಾಥ್ ಅವರಿಂದ ಚಿಕಿತ್ಸೆ ಪಡೆದವರು, ಜಯದೇವ ಆಸ್ಪತ್ರೆಯ ಅಧಿಕಾರಿ–ಸಿಬ್ಬಂದಿ, ಒಕ್ಕಲಿಗರು ಸೇರಿದಂತೆ ಹಲವು ಸಮುದಾಯಗಳ ಮುಖಂಡರು ಭಾಗವಹಿಸಿದ್ದರು. ಬಾಲ್ಕನಿಯೂ ಭರ್ತಿಯಾಗಿತ್ತು. ಕಲಾಮಂದಿರದ ಹೊರಗಡೆಯೂ ಎಲ್‌ಇಡಿ ಪರದೆ ಮೂಲಕ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು.

ಐದು ನಿಮಿಷದಲ್ಲೇ ಮೂಡಿದ ಭಾವ ಚಿತ್ರ: ಕಲಾವಿದ ಪುನೀತ್ ಕುಮಾರ್, ಕೇವಲ ಐದು ನಿಮಿಷದಲ್ಲಿ ಡಾ.ಸಿ.ಎನ್.ಮಂಜುನಾಥ್ ಅವರ ಭಾವಚಿತ್ರ ಬಿಡಿಸುವ ಮೂಲಕ ಗಮನ ಸೆಳೆದರು. ಅಭಿನಂದನಾ ಸಮಾರಂಭದಲ್ಲಿ ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್, ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ, ಇನ್ನಿತರೆ ಗಣ್ಯರು, ಡಾ.ಮಂಜುನಾಥ್ ಅಭಿನಂದನಾ ಸಮಿತಿ ಸದಸ್ಯರು ಭಾಗಿಯಾಗಿದ್ದರು.

ರಾಜಕೀಯ ಕೆಟ್ಟದಲ್ಲಾ... ಮಂಜುನಾಥ್ ಸರ್ ನೀವು ರಾಜಕೀಯಕ್ಕೆ ಬನ್ನಿ...!

ರಾಜಕೀಯ ಕೆಟ್ಟದಲ್ಲಾ... ಮಂಜುನಾಥ್ ಸರ್ ನೀವೂ ರಾಜಕೀಯಕ್ಕೆ ಬನ್ನಿ...



ನಿಮ್ಮಿಂದ ರಾಜಕೀಯದಲ್ಲಿ ಹೊಸ ಬದಲಾವಣೆಗಳಾಗಲೀ.. ಒಳ್ಳೆಯ ಕೆಲಸಕ್ಕೆ ಜನ ಸಪೋರ್ಟ್ ಮಾಡುತ್ತಾರೆ ಎಂದು ನಾನು ನಂಬಿದ್ದರಿಂದಲೇ ಮೈಸೂರು–ಕೊಡಗು ಜನತೆ ನನ್ನನ್ನು ಎರಡು ಬಾರಿ ಸಂಸದನಾಗಿ ಮಾಡಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಆಹ್ವಾನ ನೀಡಿದರು. ಹುಟ್ಟಿನಲ್ಲಿ ಎಲ್ಲರೂ ಸಮಾನರೇ.. ಯಾರು ಮೇಲಲ್ಲಾ.. ಕೀಳಲ್ಲಾ... ಆದರೆ ಶ್ರೇಷ್ಠರಾಗುವುದು ವಿದ್ಯೆ, ವೃತ್ತಿ ಮತ್ತು ಸಂಸ್ಕಾರದಿಂದ. ಏನೂ ಇಲ್ಲದೆ ರಾಜಕೀಯಕ್ಕೆ ಬಂದೆ. ಮೈಸೂರು–ಕೊಡಗಿನ ಜನತೆ ನನ್ನನ್ನು ಕಾಪಾಡಿದ್ದಾರೆ. ಒಳ್ಳೆಯ ಕೆಲಸ ಮಾಡಲು ಜನ ಸಪೋರ್ಟ್ ಮಾಡುತ್ತಾರೆ ಎಂಬ ನಂಬಿಕೆ ಇದೆ. ಈ ನಿಟ್ಟಿನಲ್ಲಿ ಮಂಜುನಾಥ್ ಸರ್ ರಾಜಕೀಯಕ್ಕೆ ಬಂದು ನಮಗೆಲ್ಲಾ ಮೇಲ್ಪಂಕ್ತಿ ಹಾಕಿಕೊಡಬೇಕು. ನನ್ನ ನೆಚ್ಚಿನ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ ಅವರು ಆರಂಭಿಸಿದ ಯಶಸ್ವಿನಿ ಯೋಜನೆಯಿಂದ ಸಾಕಷ್ಟು ರೋಗಿಗಳಿಗೆ ಅನುಕೂಲವಾಗಿದೆ. ಅದೇ ರೀತಿಯಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಬದಲಾವಣೆ ತರುವುದಕ್ಕಾಗಿ ಮಂಜುನಾಥ್ ಸರ್ ರಾಜಕೀಯಕ್ಕೆ ಬರಬೇಕು ಎಂದರು.

ನಿಮ್ಮ ಓಲೈಸುವ ಜನ ನಿಮ್ಮ ಬೆನ್ನ ಹಿಂದೆಯೇ ಇರ್‍ತಾರೆ ಎಂಬ ಭ್ರಮೆಯಲ್ಲಿರಬೇಡಿ...!?

ರಾಜಕೀಯ ಪ್ರವೇಶ ಊಹಾಪೋಹದ ಹಿನ್ನೆಲೆಯಲ್ಲಿ ಡಾ.ಸಿ.ಎನ್.ಮಂಜುನಾಥರಿಗೆ ಪಬ್ಲಿಕ್ ಟಿವಿ ಮುಖ್ಯಸ್ಥರಾದ ಹೆಚ್.ಆರ್.ರಂಗನಾಥ್ ಎಚ್ಚರಿಕೆ ಕಿವಿಮಾತು



'ಧನ್ಯವಾದ ಧನ್ವಂತರಿ' ಅಭಿನಂದನಾ ಸಮಾರಂಭದಲ್ಲಿ ಪಬ್ಲಿಕ್ ಟಿವಿ ಮುಖ್ಯಸ್ಥರಾದ ಹೆಚ್.ಆರ್.ರಂಗನಾಥ್ ಮಾತನಾಡಿದರು.

ಮೈಸೂರು, ಫೆ.26(ಎಂಕೆ)– ಡಾಕ್ಟರೇ(ಡಾ.ಸಿ.ಎನ್.ಮಂಜುನಾಥ್) ನೀವು ಏನು ಮಾಡುತ್ತೀರೋ ಬಿಡುತ್ತೀರೋ, ಗೊತ್ತಿಲ್ಲ... ನೀವು ಕೋಟ್ ಅನ್ನು ಬಿಚ್ಚಿಡುವ ಸಮಯ ಬರುತ್ತಾ ಇದೆ ಅನ್ನಿಸುತ್ತೆ... ಎಂದು ಪಬ್ಲಿಕ್ ಟಿವಿ ಮುಖ್ಯಸ್ಥರಾದ ಹೆಚ್.ಆರ್.ರಂಗನಾಥ್, ಡಾಕ್ಟರ್ ರಾಜಕೀಯಕ್ಕೆ ಬರುವ ವಿಷಯವಾಗಿಯೋ ಎಂಬಂತೆ ಅಚ್ಚರಿ ಹೇಳಿಕೆ ನೀಡಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿಯಂತೆ ನಿಮ್ಮಿಂದ ಮತ್ತೊಂದು ರೀತಿಯ ಕ್ರಾಂತಿಯಾಗಲಿದೆ ಎಂಬ ಮಾತುಗಳು ಜನರಿಂದ ಕೇಳಿಬರುತ್ತಿವೆ. ಜನರ ಒತ್ತಾಸೆಯನ್ನು ನಮ್ರತೆಯಿಂದ ಗೌರವಿಸುವುದು ಒಮ್ಮೊಮ್ಮೆ ಒಳ್ಳೆಯದೇ. ಆದರೆ, ಅದನ್ನು ನಮ್ರತೆಯಿಂದ ಒಪ್ಪಿಕೊಂಡಾಗ ನಿಮ್ಮನ್ನು ಒಪ್ಪಿಸಿದ ಜನ... ನಿಮ್ಮ ಬೆನ್ನ ಹಿಂದೆಯೇ ಇರುತ್ತಾರೆ ಎಂಬ ಭ್ರಮೆಯಲ್ಲಿರಬೇಡಿ ಎಂದು ಎಚ್ಚರಿಸಿದರು.

ಇದು ಎಂತಹ ದುಷ್ಟಕಾಲ ಎಂದರೆ ಪಕ್ಕದಲ್ಲಿರುವವರು ಡೇಂಜರಸ್... ದೂರದಲ್ಲಿರುವವರು ಲೆಸ್ ಡೇಂಜರಸ್... ಎಂಬಂತಿದೆ. ನನ್ನ 30–35 ವರ್ಷ ವೃತ್ತಿ ಜೀವನದಲ್ಲಿ ಅಣ್ಣ ನೀನೇ ದೊಡ್ಡವನೂ.. ಅಣ್ಣ ನೀನೇ ಅದು–ಇದು ಎಂದು ಕೇಳಿ ಸಾಕಾಗೋಗಿದೆ. ಆದರೆ, ಪ್ರಜಾಪ್ರಭುತ್ವ ಒಳ್ಳೆಯವರನ್ನು ಬಯಸುತ್ತೇ. ಪ್ರಜ್ರಾಪ್ರಭುತ್ವದಲ್ಲಿ ಭವಿಷ್ಯಕ್ಕೆ ಬೇಕಾದ, ದೇಶಕ್ಕೆ ಬೇಕಾದ ಬುನಾದಿಯನ್ನು ಹಾಕಲು ಯಾಕೆ ಈ ಸುಸಂಸ್ಕೃತರು ಬರಬಾರದು ಅನ್ನಿಸುತ್ತೆ. ಅನ್ನಿಸಿದಾಗಲೆಲ್ಲಾ ಆ ಸುಸಂಸ್ಕೃತರು ಬರುವುದಕ್ಕೆ ಆಗಲ್ಲ. ಕೆಲವರಿಗೆ ಬರುವ ಶಕ್ತಿ ಇರುತ್ತೆ ಎಂಬುದು ಹೃದಯಗಳನ್ನೇ ರಿಪೇರಿ ಮಾಡಿದ ಡಾಕ್ಟರ್ ಹೃದಯಕ್ಕೆ ಗೊತ್ತಿಲ್ಲವೇ.... ಆಯ್ಕೆ ನಿಮ್ಮದು. ಜಯದೇವ ಕಟ್ಟಿದ್ದು ಬೇರೆ. ಆದರೆ ಈ ದಾರಿಯೇ(ರಾಜಕೀಯ) ಬೇರೆ. ಇಲ್ಲಿಯೂ ದೊಡ್ಡಮಟ್ಟದಲ್ಲಿ ಫೈಟ್ ಮಾಡಬೇಕಾಗುತ್ತದೆ. ಆಯ್ಕೆ ನಿಮ್ಮದು ಎಂದು ಕಿವಿಮಾತು ಹೇಳಿದರು.

ಬಹು ಸುಲಭದಲ್ಲಿ ರಾಜಕೀಯ ಸೇರಬಹುದಿತ್ತು: ಡಾಕ್ಟರ್ ಹಿನ್ನೆಲೆಯಲ್ಲಿ ಅವರು, ರಾಜಕಾರಣದ ಲೇಪನವನ್ನು ಹಚ್ಚಿಕೊಂಡು, ಒಂದು ರಾಜಕೀಯ ಕುಟುಂಬದವರಂತೆ ಕಂಗೊಳಿಸಿ ಬಹು ಸುಲಭವಾಗಿ ರಾಜಕೀಯದ ಸುಳಿಯೊಳಗೆ ಬರಬಹುದಾಗಿತ್ತು. ಆದರೆ, ಡಾಕ್ಟರ್ ರಾಜಕೀಯ ಕುಟುಂಬದೊಂದಿಗೆ ಇದ್ದರೂ ರಾಜಕೀಯದಿಂದ ದೂರ ಇದ್ದರೆಂದರೆ ನನಗೆ ಆಶ್ಚರ್ಯವಾಗುತ್ತದೆ. ಸತತವಾಗಿ ಭಿನ್ನ ಸೈದ್ಧಾಂತಿಕ ನಿಲುವುಗಳ ಸರ್ಕಾರಗಳನ್ನು ನಿಭಾಯಿಸಿಕೊಂಡು, ಬಹಳ ವಿಚಿತ್ರವಾಗಿ ಆಲೋಚನೆ ಮಾಡುವ ನಾಯಕರ ಮನಸ್ಸನ್ನೂ ಗೆದ್ದಿರುವ ಡಾಕ್ಟರ್ ತಮ್ಮ ಮುಂದಿನ ಜೀವನದಲ್ಲಿಯೂ ಎಲ್ಲವನ್ನೂ ನಿಭಾಯಿಸಿಕೊಂಡು ತಾವಿರುವ ಸ್ಥಾನಕ್ಕೆ ನ್ಯಾಯ ಒದಗಿಸುತ್ತಾರೆ ಎಂಬ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜನಾಭಿಪ್ರಾಯ ರೂಪುಗೊಳ್ಳುವುದು ಸುಲಭವಲ್ಲ: ನೀರಿನಲ್ಲಿದ್ದಾಗ ಮೀನಿಗೆ ಬಲೆ ಹಾಕುವುದು ಸಹಜ. ಆದರೆ ಡಾಕ್ಟರ್ ವಿಚಾರದಲ್ಲಿ ನಿವೃತ್ತಿಯೆಂಬ ನದಿಯನ್ನು ದಾಟಿ, ದಡಕ್ಕೆ ಬಂದ ಮೇಲೆ ಬಲೆ ಹಾಕಲಾಗುತ್ತಿದೆ. ಇದು ಬಹಳ ವಿಚಿತ್ರ. 35 ವರ್ಷಗಳ ಸರ್ಕಾರಿ ಸೇವೆಯನ್ನು ಮಾಡಿ ಬಂದ ನಂತರ ಜನಾಭಿಪ್ರಾಯ ರೂಪುಗೊಳ್ಳುವುದು ಅಷ್ಟು ಸುಲಭವಲ್ಲ. ಜನಾಭಿಪ್ರಾಯ ಪಡೆಯುವುದಕ್ಕಾಗಿಯೇ ಹಲವರು ತಮ್ಮ ಜೀವನವನ್ನೇ ಹಗಲು–ರಾತ್ರಿ ಸವೆಸುತ್ತಿರುತ್ತಾರೆ. ಹಾಗಾಗಿ ನಿಮ್ಮ ಮನಸ್ಸಿಗೆ, ನಿಮ್ಮ ಹೃದಯಕ್ಕೆ ಅನ್ನಿಸಿದಂತೆ ನಿರ್ಧಾರ ತೆಗೆದುಕೊಳ್ಳಿ. ಒಂದು ವೇಳೆ ನಿರ್ಧಾರ ಮಾಡಿದರೂ (ರಾಜಕೀಯಕ್ಕೆ ಬರುವ) ನಾಳೆ ನೀವು ಅಂದುಕೊಂಡ ರೀತಿಯಲ್ಲಿ ವರ್ಕ್ ಆಗದಿದ್ದರೇ... ಎಂಬ ಅನುಮಾನ ಕಾಡುತ್ತಿರುವಂತಿದೆ. ಒಂದು ವೇಳೆ ವರ್ಕ್ ಆಗದಿದ್ದರೂ ನೀವು ಕಳೆದುಕೊಳ್ಳುವುದೇನು ಇಲ್ಲ. ಏಕೆಂದರೆ ನಿಮ್ಮ ಮೇಲಿನ ಕೃತಜ್ಞತೆ ಇರುವ ಈ ಸಮಾಜ, ನಿಮ್ಮನ್ನು ಉಳಿಸಿಕೊಳ್ಳಲಿಲ್ಲ ಎಂಬುದಕ್ಕೆ ನಾಚಿಕೆಪಡಬೇಕೇ ಹೊರತು ನೀವು ನಾಚಿಕೆಪಡುವ ಅಗತ್ಯವಿಲ್ಲ ಎಂದು ವಿಶ್ವಾಸ ತುಂಬಿದರಲ್ಲದೆ ನಾಳಿನ ದಿನಗಳಲ್ಲಿ ಏನಾಗುತ್ತೋ ಬಿಡುತ್ತೋ ಗೊತ್ತಿಲ್ಲ... ಆದರೆ ಜನರು ಹೃದಯ ತುಂಬಿ ನಿಮ್ಮ ಸೇವೆಯನ್ನು ಸ್ಮರಿಸಿಕೊಳ್ಳುತ್ತಾರೆ. ನಿಮಗೆ ರಾಜಕೀಯ ಆಸಕ್ತಿ ಬರದೇ ಹೋದರೆ, ವೈದ್ಯರಾಗಿ ಉಳಿದುಕೊಳ್ಳುತ್ತೀರಿ. ಅಕಸ್ಮಾತ್ ಬಂದರೆ ಪ್ರಜಾಪ್ರಭುತ್ವಕ್ಕೆ ಒಳ್ಳೆಯ ವ್ಯಕ್ತಿ ದೊರೆತಂತಾಗುತ್ತದೆ. ನಿಮ್ಮ ನಿರ್ಧಾರಗಳು ಏನೇ ಇದ್ದರೂ ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ ಎಂದು ಹಿತವಚನ ನುಡಿದರು.

ನನ್ನಿಂದ ರಾಷ್ಟ್ರಮಟ್ಟದಲ್ಲಿ ಸೇವೆ ಆಗಬೇಕೆಂಬ ಹಂಬಲ ಜನರಲ್ಲಿದೆ!

ರಾಜಕೀಯ ಪ್ರವೇಶದ ಸುಳಿವು ನೀಡಿದ ಡಾ.ಮಂಜುನಾಥರ ಈ ಮಾತು

ಮೈಸೂರು, ಫೆ.26(ಎಂಕೆ)– ನನ್ನಿಂದ ರಾಷ್ಟ್ರಮಟ್ಟದಲ್ಲಿ ನಮ್ಮ ಸೇವೆ ಆಗಬೇಕು ಎಂದು ಜನರ ಹಂಬಲ ವಿದೆ. ಈ ಬಗ್ಗೆ ನಾನು ಕೂಡ ಯೋಚನೆ ಮಾಡುತ್ತಿದ್ದೇನೆ ಎಂದು ಖ್ಯಾತ ಹೃದ್ರೋಗ ತಜ್ಞರೂ ಆದ ಜಯದೇವ ಹೃದ್ರೋಗ ಸಂಸ್ಥೆಯ ವಿಶ್ರಾಂತ ನಿರ್ದೇಶಕ, ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ರಾಜಕೀಯ ಪ್ರವೇಶದ ಸುಳಿವು ನೀಡಿದರು.

'ಧನ್ಯವಾದ ಧನ್ವಂತರಿ' ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಮಗೆ ಹಲವಾರು ಪ್ರಶಸ್ತಿ ಬಂದಿವೆ. ಆದರೆ ಜನರಿಂದ ನೇರವಾಗಿ ಹೀಗೆ ಹೃದಯಸ್ಪರ್ಶಿ ಅಭಿನಂದನೆ ದಕ್ಕಿದ್ದು ತುಂಬಾ ದೊಡ್ಡದು. ಹೃದ್ರೋಗ ಕ್ಷೇತ್ರದಲ್ಲಿ ಸುಧಾರಣೆ, ಕ್ರಾಂತಿಕಾರಿ ಬದಲಾವಣೆಗೆ ಜಯದೇವ ಸಂಸ್ಥೆಯ ಎಲ್ಲಾ ಸಹೋದ್ಯೋಗಿ, ಸಿಬ್ಬಂದಿಗಳು ಕಾರಣ. 18 ವರ್ಷದ ನನ್ನ ಅವಧಿಯಲ್ಲಿ ಸುಮಾರು 75 ಲಕ್ಷ ಹೊರ ರೋಗಿಗಳಿಗೆ ಚಿಕಿತ್ಸೆ ನೀಡಿದ್ದೇವೆ. 8 ಲಕ್ಷ ಶಸ್ತ್ರಚಿಕಿತ್ಸೆ ಮಾಡಿದ್ದೇವೆ. ಈ 'ಧನ್ಯವಾದ ಧನ್ವಂತರಿ' ಸನ್ಮಾನವನ್ನು ಎಲ್ಲಾ ರೋಗಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಸಮರ್ಪಿಸುತ್ತೇನೆ ಎಂದರು.

ನನಗೆ ಅವಕಾಶ ಸಿಕ್ಕರೆ ಸರ್ಕಾರಿ ಸ್ವಾಯತ್ತ ಸಂಸ್ಥೆಯನ್ನು ಖಾಸಗಿ ಪಂಚತಾರಾ ಆಸ್ಪತ್ರೆ ಮಟ್ಟಕ್ಕೆ ನಿರ್ವಹಣೆ ಮಾಡಿ ರಾಷ್ಟ್ರಕ್ಕೆ ಮಾದರಿಗೊಳಿಸಬೇಕೆಂಬ ಒಂದು ಕನಸಿತ್ತು. ಅದು ಸಂಪೂರ್ಣವಾಗಿ ನನಸಾಗಿದೆ. ಬಡ ರೋಗಿಗಳಿಗೆ ಉತ್ತಮ ಸೇವೆ ಸಿಗಬೇಕು ಎಂಬ ಆಸೆ, ಹಂಬಲ ನೆರವೇರಿದೆ. ಪ್ರಪಂಚದಲ್ಲಿ ನಾವು ಎಲ್ಲರ ಹೃದಯವನ್ನು ಗೆಲ್ಲಬೇಕು, ದ್ವೇಷ–ಮತ್ಸರವನ್ನು ಕಳೆದುಕೊಳ್ಳಬೇಕು ಹಾಗೂ ಪ್ರೀತಿ–ಸಂತೋಷವನ್ನು ಹಂಚಬೇಕು. ಈ ಮೂರು ಅಂಶಗಳು ಬಹಳ ಮುಖ್ಯ. ಹಂಚಿ ತಿನ್ನುವ ಸಂಸ್ಕಾರ ಬೆಳೆಸಿಕೊಳ್ಳಬೇಕೇ ಹೊರತು ಕಿತ್ತು ತಿನ್ನುವ ಸಂಸ್ಕೃತಿಯನ್ನು ರೂಢಿಸಿಕೊಳ್ಳಬಾರದು. ಹಳಸಿದ್ದು ಕೊಡಬಾರದು, ಉಳಿಸಿದ್ದು ಕೊಡಬೇಕು. ವ್ಯಕ್ತಿ ಮತ್ತು ವ್ಯಕ್ತಿತ್ವಕ್ಕೆ ಒಂದೇ ಅಕ್ಷರ ವ್ಯತ್ಯಾಸ. ಆದರೆ ವ್ಯಕ್ತಿ ಮರೆಯಾಗುತ್ತಾನೆ ಆದರೆ ವ್ಯಕ್ತಿತ್ವ ಎಂದೆಂದೂ ಅಮರ ಎಂದರು.



> ಪ್ರಪಂಚದಲ್ಲಿ ಎರಡು ಬಹಳ ಪವಿತ್ರವಾದ ಸ್ಥಳಗಳಿವೆ. ತಂದೆಯ ಹೆಗಲು, ಮತ್ತೊಂದು ತಾಯಿಯ ಮಡಿಲು. ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ, ಆದರ್ಶ ಇಲ್ಲದೆ ಬದುಕಿದರೆ ಬದುಕಿಗೇ ಅವಮಾನ. ಪ್ರತಿಯೊಬ್ಬರಿಗೂ ಅವಕಾಶವಿದೆ. ನಾವು ನಮ್ಮ ಕೆಲಸವನ್ನು ಪ್ರೀತಿಸಿದರೆ, ಗೌರವಿಸಿದರೆ ಸಾಧನೆ ಸಾಧ್ಯ.
>
> – ಡಾ.ಸಿ.ಎನ್.ಮಂಜುನಾಥ್, ವಿಶ್ರಾಂತ ನಿರ್ದೇಶಕರು, ಜಯದೇವ ಹೃದ್ರೋಗ ಸಂಸ್ಥೆ

ರೈಲಿನಲ್ಲಿ ಭಾರತದ ನಿಜ ಚಿತ್ರಣ!: ವೈಮಾನಿಕವಾಗಿ ನೋಡಿದಾಗ ಭಾರತ ಬಹಳ ಸುಂದರವಾಗಿ ಕಾಣುತ್ತದೆ. ನಿಜವಾದ ಭಾರತ ತಿಳಿಯಬೇಕಾದರೆ ರೈಲಿನಲ್ಲಿ ಪ್ರಯಾಣ ಮಾಡಬೇಕು. ಬಡತನ, ಶೌಚಾಲಯ ಸಮಸ್ಯೆ, ರೈತರ ಸಮಸ್ಯೆ ಕಾಣುತ್ತದೆ ಇದಕ್ಕೆ ಸ್ಪಂದಿಸಬೇಕು. ಗಾಂಧೀಜಿಯವರು ರೈಲಿನಲ್ಲಿ ಪ್ರಯಾಣಿಸಿ ದೇಶವನ್ನು ಅರ್ಥ ಮಾಡಿಕೊಂಡರು. ಬದಲಾವಣೆ, ಸುಧಾರಣೆ ತರಬೇಕು. ಎಲ್ಲವನ್ನೂ ನಿಯಮಾವಳಿ ಪುಸ್ತಕದ ಪ್ರಕಾರ ಮಾಡಿದರೆ ಅದೆಷ್ಟೋ ರೋಗಿಗಳಿಗೆ ಚಿಕಿತ್ಸೆ ಕೊಡಲು ಸಾಧ್ಯವಾಗುವುದಿಲ್ಲ. ಯಾವುದೋ ಕಾನೂನಿನ ನೆಪ ಹೇಳಿ ಸುಮ್ಮನಿರಬಾರದು. ಕಾನೂನಿಗೆ ತಿದ್ದುಪಡಿ ತಂದು ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

400 ಸಂಘ–ಸಂಸ್ಥೆಗಳು ಕೈಜೋಡಿಸಿವೆ: ಜಯದೇವ ಆಸ್ಪತ್ರೆಗೆ ಸರ್ಕಾರದ ಅನುದಾನದ ಜೊತೆಗೆ 400 ಸಂಘ ಸಂಸ್ಥೆಗಳು ಕೈ ಜೋಡಿಸಿವೆ. ಇನ್ಫೋಸಿಸ್ ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿಯವರನ್ನು ನೆನೆಯಬೇಕು. 2019ರಲ್ಲಿ ನಾರಾಯಣಮೂರ್ತಿ ಅವರನ್ನು ಆಸ್ಪತ್ರೆಗೆ ಆಹ್ವಾನಿಸಿದೆ. ಎಲ್ಲಾ ವಿಭಾಗಗಳನ್ನು ನೋಡಿದರು. ಮಾರನೆ ದಿನ ಸುಧಾಮೂರ್ತಿಯವರು ಕರೆ ಮಾಡಿ, ನಿಮ್ಮ ಅವಧಿ ಎಷ್ಟಿದೆ. ಸಂಸ್ಥೆಗೆ ಆಸ್ಪತ್ರೆ ಕಟ್ಟಿಸಿಕೊಡಬೇಕು ಎಂದರು. ನಾವು 150 ಬೆಡ್ ಆಸ್ಪತ್ರೆ ಕೇಳಿದ್ದೆವು. ಆದರೆ ಅವರು 350 ಬೆಡ್ ಆಸ್ಪತ್ರೆ ಕಟ್ಟಿಸಿಕೊಟ್ಟರು. 120 ಕೋಟಿ ವೆಚ್ಚದಲ್ಲಿ ಎಲ್ಲವೂ ಅವರೇ ಜವಾಬ್ದಾರಿ ತೆಗೆದುಕೊಂಡು ಕಟ್ಟಿಸಿಕೊಟ್ಟರು. ಉಪಕರಣಗಳಿಗೆ 30 ಕೋಟಿಯನ್ನು ಆಂತರಿಕ ಸಂಪನ್ಮೂಲ ಹಾಗೂ ದಾನಿಗಳಿಂದ ಪಡೆಯಲಾಯಿತು ಎಂದು ಸ್ಮರಿಸಿದರು.

ಬದಲಾವಣೆ ಲಾಂಛನವಾಗಬೇಕು: ವೈದ್ಯರಲ್ಲಿ ತಾಯಿಯ ಹೃದಯ, ಮಗುವಿನ ಮನಸ್ಸಿರಬೇಕು. ರೋಗಿಯ ಆರ್ಥಿಕ ಪರಿಸ್ಥಿತಿ ಚೌಕಟ್ಟಿನಲ್ಲಿ ಉತ್ತಮ ಚಿಕಿತ್ಸೆ ಕೊಡಬೇಕು. ವೆಂಟಿಲೇಟರ್ ನಲ್ಲಿಟ್ಟು 30–40 ಲಕ್ಷ ಬಿಲ್ ಮಾಡುವ ಬದಲು ಕುಟುಂಬದವರೊಡನೆ ವಾಸ್ತವ ತಿಳಿಸಬೇಕು. ಬದಲಾವಣೆ ನಮ್ಮ ಲಾಂಛನವಾಗಬೇಕು. ಮಾನವೀಯತೆ–ಕರುಣೆ ರಾರಾಜಿಸಬೇಕು. ಬಿಪಿಎಲ್ ಇಲ್ಲದ ಕಡುಬಡವರಿಗೂ ರಿಯಾಯ್ತಿ ಚಿಕಿತ್ಸೆಗೆ ಕಣ್ಣಿನಿಂದ ಗುರುತಿಸುವ ಮಾನದಂಡ ಬಹಳ ಮುಖ್ಯ ಎಂದರು.

ಬಡರೋಗಿಗಳೇ ಪ್ರೇರಣೆ: ಶೇ.35 ರಷ್ಟು ಸಾವು ಹೃದಯಾಘಾತ ಹಾಗೂ ಸಂಬಂಧಿತ ಕಾಯಿಲೆಗಳಿಂದ ಆಗುತ್ತಿವೆ. ಯುವ ಸಮುದಾಯದಲ್ಲೂ ಹೆಚ್ಚಾಗಿದೆ. ಈ ಕಾರಣದಿಂದ ಹೆಚ್ಚು ಘಟಕಗಳನ್ನು ವಿಸ್ತರಿಸಲಾಯಿತು. ಬಡ ರೋಗಿಗಳೇ ನನ್ನ ಸೇವೆಗೆ ಪ್ರೇರಣೆ. ಸ್ಥಾನ ಜವಾಬ್ದಾರಿಯನ್ನು ಎಚ್ಚರಿಸುತ್ತದೆ. ರಂಗನಾಥ್ ಅವರು ಹೇಳಿದಂತೆ ಜನರ ಆಶೋತ್ತರಗಳಿಗೆ ಸ್ಪಂದಿಸಬೇಕಾಗುತ್ತದೆ. ನೋಡೋಣ ಎಂದರು.

ತರಬೇತಿಗಳಿಗೆ ಅರ್ಜಿ ಆಹ್ವಾನ

ಮೈಸೂರು, ಫೆ.26–ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಯುವಕ ಯುವತಿಯರಿಗಾಗಿ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. 16 ರಿಂದ 45 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಮಾರ್ಚ್ 5 ಕೊನೆಯ ದಿನಾಂಕವಾಗಿದೆ. ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಸಿಒಇ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9945349638 ಅಥವಾ 9900864686ನ್ನು ಸಂಪರ್ಕಿಸಬಹುದಾಗಿದೆ

ಯುವನಿಧಿಗೆ ಸ್ವಯಂ ಘೋಷಣೆ ಕಡ್ಡಾಯ

ಮೈಸೂರು, ಫೆ.26–"ಯುವನಿಧಿ" ಕಾರ್ಯಕ್ರಮವು ನಿರುದ್ಯೋಗ ಅಭ್ಯರ್ಥಿಗಳ ಆಶಾಕಿರಣವಾಗಿದ್ದು, ಪದವಿಧರರಿಗೆ ಮಾಸಿಕ 3,000 ಹಾಗೂ ಡಿಪ್ಲೋಮಾದಾರರುಗಳಿಗೆ ಮಾಸಿಕ 1,500 ಗಳನ್ನು ಸರ್ಕಾರದ ವತಿಯಿಂದ ನೀಡುತ್ತಿದ್ದು, ಇದರ ಸದುಪಯೋಗವನ್ನು ಜಿಲ್ಲೆಯ ಸಮಸ್ತ ನಿರುದ್ಯೋಗ ಅಭ್ಯರ್ಥಿಗಳು ಪಡೆದುಕೊಳ್ಳಬೇಕಿದೆ. ನಿರುದ್ಯೋಗ ಭತ್ಯೆ ಪಡೆಯುತ್ತಿರುವ ಅಭ್ಯರ್ಥಿಗಳು ಫೆಬ್ರವರಿ–29ರ ಒಳಗಾಗಿ ತಾವು ನಿರುದ್ಯೋಗಿ, ಸ್ವಯಂ ಉದ್ಯೋಗಿಯಾಗಿಲ್ಲ ಮತ್ತು ವ್ಯಾಸಂಗವನ್ನು ಮುಂದುವರೆಸಿಲ್ಲ ಎಂಬ ಸ್ವಯಂ ಘೋಷಣೆ ಸಲ್ಲಿಸುವುದು ಕಡ್ಡಾಯವಾಗಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ್ ಜೋಡಣೆಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ಕರ್ನಾಟಕ ಸರ್ಕಾರದ ಸೇವಾಸಿಂಧು ವೆಬ್‌ಸೈಟ್ ಮೂಲಕ ಅಭ್ಯರ್ಥಿಗಳು ಸ್ವಯಂ ಘೋಷಣೆ ಮಾಡಿಕೊಳ್ಳಬೇಕು ಹಾಗೂ ಯುವನಿಧಿ ಪ್ರತಿ ತಿಂಗಳು ಸ್ವಯಂಘೋಷಣೆ ಕಡ್ಡಾಯ ಎಂದು ಉದ್ಯೋಗ ಮತ್ತು ತರಬೇತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ್ಞಾನವಾಪಿಯಲ್ಲಿ ಹಿಂದೂಗಳ ಪೂಜೆ ಅಬಾಧಿತ

ಅಲಹಾಬಾದ್: ಜ್ಞಾನವಾಪಿ ಮಸೀದಿ ಆವರಣದಲ್ಲಿರುವ ಒಂದು ನೆಲಮಾಳಿಗೆ ವಿಭಾಗದಲ್ಲಿ ಹಿಂದೂಗಳು ಪೂಜೆ ಸಲ್ಲಿಸಲು ವಾರಾಣಸಿ ಜಿಲ್ಲಾ ನ್ಯಾಯಾಲಯ ಅನುಮತಿ ನೀಡಿರುವ ನಿರ್ಧಾರ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ. ಇದು ಮುಸ್ಲಿಂ ಬಣಕ್ಕೆ ಮತ್ತೊಂದು ಹಿನ್ನಡೆ ಉಂಟುಮಾಡಿದೆ.

ಜ್ಞಾನವಾಪಿ ಮಸೀದಿಯ ದಕ್ಷಿಣ ಭಾಗದ ನೆಲಮಾಳಿಗೆಯಲ್ಲಿ ಹಿಂದೂ ಅರ್ಚಕರು ಪೂಜೆ ಸಲ್ಲಿಸಲು ಅನುಮತಿ ನೀಡಿ ವಾರಾಣಸಿ ಜಿಲ್ಲಾ ನ್ಯಾಯಾಲಯವು ಜನವರಿ 31ರಂದು ತೀರ್ಪು ಕೊಟ್ಟಿತ್ತು.

ತಮ್ಮ ತಾಯಿಯ ತಂದೆ ಸೋಮನಾಥ್ ವ್ಯಾಸ್ ಅವರು 1993ರ ಡಿಸೆಂಬರ್‌ವರೆಗೂ ಈ ನೆಲಮಾಳಿಗೆಯಲ್ಲಿ ಹಿಂದೂ ದೇವತೆಗಳಿಗೆ ಪೂಜೆ ಸಲ್ಲಿಸುತ್ತಿದ್ದರು.



ಹೀಗಾಗಿ ಅಲ್ಲಿ ಪೂಜೆಗೆ ಮತ್ತೆ ಅವಕಾಶ ನೀಡಬೇಕು ಎಂದು ಶೈಲೇಂದ್ರ ಕುಮಾರ್ ಪಾಠಕ್ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಈ ತೀರ್ಪು ಪ್ರಕಟಿಸಿತ್ತು. ಜ್ಞಾನವಾಗಿ ಮಸೀದಿ ತಳಭಾಗದಲ್ಲಿ ಒಟ್ಟು ನಾಲ್ಕು ತಹಖಾನಾಗಳಿವೆ. ಅವುಗಳಲ್ಲಿ ಒಂದು ಈಗಲೂ ವ್ಯಾಸ ಕುಟುಂಬದ ಅಧೀನದಲ್ಲಿದೆ. ಮಸೀದಿ ಸಂಕೀರ್ಣದಲ್ಲಿ ಭಾರತೀಯ ಪುರಾತತ್ವ ಸಮೀಕ್ಷೆ ಇಲಾಖೆ ನಡೆಸಿದ ಸಮೀಕ್ಷೆ ವರದಿಯು ಬಹಿರಂಗವಾದ ಬಳಿಕ ವಾರಾಣಸಿ ನ್ಯಾಯಾಲಯ ಆದೇಶ ಹೊರಬಂದಿತ್ತು.

ಜ್ಞಾನವಾಪಿ ಮಸೀದಿಯ ದಕ್ಷಿಣ ಭಾಗದಲ್ಲಿನ 'ವ್ಯಾಸರ ನೆಲಮಾಳಿಗೆ'ಯಲ್ಲಿ ಹಿಂದೂಗಳಿಗೆ ಪೂಜೆ ಸಲ್ಲಿಸುವುದಕ್ಕೆ ವಾರಾಣಸಿ ಜಿಲ್ಲಾ ಕೋರ್ಟ್ ನೀಡಿದ್ದ ಅನುಮತಿ ವಿರುದ್ಧ ಅಂಜುಮನ್ ಇಂತೆಜಮಿಯಾ ಮಸೀದಿ ಸಮಿತಿಯು ಸಲ್ಲಿಸಿದ್ದ ಅರ್ಜಿಯನ್ನು ನ್ಯಾ ರೋಹಿತ್ ರಂಜನ್ ಅಗರವಾಲ್ ಅವರ ಏಕ ಸದಸ್ಯ ಪೀಠ ವಿಚಾರಣೆ ನಡೆಸಿತ್ತು. ಫೆ.15ರಂದು ಅದು ನಿರ್ಧಾರವನ್ನು ಕಾಯ್ದಿರಿಸಿತ್ತು. ಅರ್ಜಿಯಲ್ಲಿನ ವಾದವನ್ನು ಒಪ್ಪದ ಕೋರ್ಟ್, ಅದನ್ನು ತಿರಸ್ಕರಿಸಿತು.

ಇದಕ್ಕೂ ಮುನ್ನ ಕಳೆದ ತಿಂಗಳು ತೀರ್ಪು ನೀಡಿದ್ದ ವಾರಾಣಸಿ ಕೋರ್ಟ್, ಭಕ್ತರು ಪೂಜೆ ಸಲ್ಲಿಸಲು ವಾರದೊಳಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಜಿಲ್ಲಾಡಳಿತಕ್ಕೆ ಮತ್ತು ನೆಲಮಾಳಿಗೆಯಲ್ಲಿ ಪೂಜೆ ನೆರವೇರಿಸಲು ಅರ್ಚಕರನ್ನು ನಿಯೋಜಿಸುವಂತೆ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನ ಟ್ರಸ್ಟ್‌ಗೆ ಸೂಚಿಸಿತ್ತು.

ಮೈಸೂರು ಮಿತ್ರ ಮಂಗಳವಾರ 27 ಫೆಬ್ರವರಿ 2024

ಮಂಡ್ಯ ರೈಲ್ವೆ ನಿಲ್ದಾಣ ಆಧುನೀಕರಣ ಕಾಮಗಾರಿಯ ಶಂಕುಸ್ಥಾಪನೆ

ಮಂಡ್ಯ, ಫೆ.26– 20 ಕೋಟಿ ರೂ. ವೆಚ್ಚದಲ್ಲಿ ಮಂಡ್ಯ ರೈಲ್ವೆ ನಿಲ್ದಾಣದ ನವೀಕರಣ ಕಾಮಗಾರಿಗೆ ಪ್ರಧಾನಿ ನರೇಂದ್ರಮೋದಿ ವರ್ಚುಯಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

ನಗರದ ರೈಲ್ವೆ ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ವರ್ಚುವಲ್ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಹಲವಾರು ಸಮಸ್ಯೆಗಳಿವೆ. ಅವುಗಳ ಪರಿಹರಿಸಲು ಒತ್ತು ನೀಡಲಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ಜನರಿಂದ ಸಂಗ್ರಹಿಸುವ ತೆರಿಗೆ ಹಣವನ್ನು ಬಳಸಲಾಗುತ್ತದೆ. ಜನರ ತೆರಿಗೆ ಹಣ ಎಲ್ಲೂ ಪೋಲಾಗದಂತೆ ನೋಡಿಕೊಳ್ಳುವುದು ಜನಪ್ರತಿನಿಧಿಗಳ ಕರ್ತವ್ಯವಾಗಿದೆ ಎಂದರು.

ಕರ್ನಾಟಕದ ಜನಸಂಖ್ಯೆ ಕಡಿಮೆ ಆದರೆ ತೆರಿಗೆ ಹೆಚ್ಚು ಸಂಗ್ರಹಣೆಯಾಗುತ್ತದೆ. ಕೇಂದ್ರ ಸರ್ಕಾರ ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಬೇಕು. ಸರ್ಕಾರಿ ಆಸ್ಪತ್ರೆಯಲ್ಲೂ ಕೆಲವು ಕಾಮಗಾರಿ ಕೆಲಸಗಳು ಬಾಕಿ ಇದ್ದು ಆಸ್ಪತ್ರೆಗೆ ಬಂದಂತಹ ಜನರಿಗೆ ಚಿಕಿತ್ಸೆ ನೀಡಲು ಬೆಡ್ ಇಲ್ಲದ ಕಾರಣ ಅವುಗಳನ್ನು ಮುಂದಿನ ದಿನಗಳಲ್ಲಿ 400 ಬೆಡ್ ಇರುವುದನ್ನು 900 ಬೆಡ್ ವ್ಯವಸ್ಥೆ ಮಾಡಲಾಗುವುದು ಎಂದರು.



ಪ್ರಧಾನಿ ನರೇಂದ್ರಮೋದಿ ವರ್ಚುಯಲ್ ಮೂಲಕ ರೈಲ್ವೆ ಕಾಮಗಾರಿಗಳಿಗೆ ಚಾಲನೆ ನೀಡಿದ ಕಾರ್ಯಕ್ರಮವನ್ನು ಮಂಡ್ಯ ರೈಲು ನಿಲ್ದಾಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಂಡ್ಯದ ಮುಖ್ಯ ರಸ್ತೆಯ ನಿರ್ಮಾಣಕ್ಕೆ 30 ಕೋಟಿ ರೂ. ಸರ್ಕಾರದಿಂದ ಮಂಜೂರಾಗಿದ್ದು, ಪ್ರಾರಂಭದ ಹಂತದಲ್ಲಿದೆ. ಜಿಲ್ಲೆಯಲ್ಲಿ ಸಾಕಷ್ಟು ಮೂಲ ಸಮಸ್ಯೆಗಳಿದ್ದು, ಹಂತ ಹಂತವಾಗಿ ಸಮಸ್ಯೆಗಳನ್ನು ಪರಿಹರಿಸಲಾಗುವುದು. ಕೇಂದ್ರ ಸರ್ಕಾರದಿಂದ ರೈಲ್ವೆ ನಿಲ್ದಾಣಗಳ ಆಧುನೀಕರಣವಾಗುತ್ತಿರುವುದು ಜನರಿಗೆ ಅನುಕೂಲವಾಗಲಿದೆ. ಸರ್ಕಾರ ಯಾವುದೇ ಇರಲಿ ಜನಸಾಮಾನ್ಯರಿಗೆ ಮೂಲ ಸೌಲಭ್ಯಗಳನ್ನು ಒದಗಿಸಿ, ಜನರ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ತಿಳಿಸಿದರು.

ಸಂಸದೆ ಸುಮಲತಾ ಅಂಬರೀಶ್ ಮಾತನಾಡಿ, ಭಾರತ ದೇಶವು ವಿಶ್ವದಲ್ಲೇ ರೈಲ್ವೆ ನೆಟ್‌ವರ್ಕ್‌ನಲ್ಲಿ ಮೂರನೇ ಸ್ಥಾನವನ್ನು ಹೊಂದಿದೆ. ಭಾರತದ ಜನರು ಹೆಚ್ಚಿನ ಸಂಖ್ಯೆಯಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದು, ರೈಲ್ವೆ ಪ್ರಯಾಣಿಕರಿಗೆ ಉತ್ತಮ ಮೂಲಭೂತ ಸೌಲಭ್ಯ ಹಾಗೂ ಭದ್ರತೆಯನ್ನು ಒದಗಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್, ಕಾಂಗ್ರೆಸ್ ಮುಖಂಡ ಸ್ಟಾರ್ ಚಂದ್ರು (ವೆಂಕಟರಮಣೇಗೌಡ), ಎಸ್ಪಿ ಎನ್.ಯತೀಶ್, ಜಿಲ್ಲಾ ಪಂಚಾಯಿತಿ ಸಿಇಓ ಶೇಕ್ ತನ್ವೀರ್ ಆಸಿಫ್, ರೈಲ್ವೆ ಅಧಿಕಾರಿ ಪರೀಕ್ಷಿತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಂಡ್ಯ ಮಿಮ್ಸ್ ಆಸ್ಪತ್ರೆಯ ವಿವಿಧ ಕಟ್ಟಡ ಕಾಮಗಾರಿಗೆ 4 ಕೋಟಿ ರೂ. ಮಂಜೂರು: ಎನ್.ಚಲುವರಾಯಸ್ವಾಮಿ

ಮಂಡ್ಯ, ಫೆ.26–ಮಂಡ್ಯ ಮಿಮ್ಸ್ ಆವರಣದಲ್ಲಿ ಮಂಡ್ಯ ವಿಧಿವೈದ್ಯಶಾಸ್ತ್ರ ವಿಭಾಗದ ಉಪನ್ಯಾಸಕ ಕೊಠಡಿ ಹಾಗೂ ಶವಾಗಾರ ಕಟ್ಟಡದ ಕಾಮಗಾರಿಗೆ ಸರ್ಕಾರದಿಂದ ಒಟ್ಟು 4 ಕೋಟಿ ರೂ. ಮಂಜೂರಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಅವರು ಇಂದು ಮಂಡ್ಯ ಮಿಮ್ಸ್ ಆವರಣದಲ್ಲಿ ಮಂಡ್ಯ ವಿಧಿವೈದ್ಯಶಾಸ್ತ್ರ ವಿಭಾಗದ ಉಪನ್ಯಾಸಕ ಕೊಠಡಿ ಹಾಗೂ ಶವಾಗಾರ ಕಟ್ಟಡದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಮಿಮ್ಸ್ ಆಸ್ಪತ್ರೆಯ ಆವರಣದಲ್ಲಿ ಬಹಳ ಅಭಿವೃದ್ಧಿ ಕಾರ್ಯಗಳು ಬಾಕಿ ಇದ್ದು, ಲೋಕಸಭಾ ಚುನಾವಣೆಯ ನಂತರ ಅದನ್ನು ಸಂಪೂರ್ಣಗೊಳಿಸಲಾಗುವುದು. ಅರ್ಧದಲ್ಲೇ ನಿಂತಿದ್ದ ಕ್ಯಾನ್ಸರ್ ಆಸ್ಪತ್ರೆಯನ್ನು 5 ಕೋಟಿ ರೂ. ವೆಚ್ಚದಲ್ಲಿ 12 ತಿಂಗಳೊಳಗೆ ಮರು ಪ್ರಾರಂಭ ಮಾಡಲಾಗುವುದು. ಒಂದು ವರ್ಷದೊಳಗಾಗಿ ಮೆಡಿಕಲ್ ಕಾಲೇಜು ಹಾಗೂ ಆಧುನಿಕ ಆಸ್ಪತ್ರೆಯನ್ನು ನಿರ್ಮಾಣ ಮಾಡಲಾಗುವುದು. ಎಂದರು.



ಮಂಡ್ಯ ವಿಧಿವೈದ್ಯಶಾಸ್ತ್ರ ವಿಭಾಗದ ಉಪನ್ಯಾಸಕ ಕೊಠಡಿ ಹಾಗೂ ಶವಾಗಾರ ಕಟ್ಟಡದ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಗುದ್ದಲಿ ಪೂಜೆ ನೆರವೇರಿಸಿದರು.

ಜಿಲ್ಲಾಧಿಕಾರಿಗಳು ಸಿ.ಎಸ್.ಆರ್ ಅನುದಾನದಡಿ ಸುಲಭಶೌಚಾಲಯ ಮತ್ತುಡಾರ್ಮೆಟರಿ ನಿರ್ಮಿಸಲು ಯೋಜನೆ ರೂಪಿಸಿದ್ದಾರೆ. ಸಾರ್ವಜನಿಕ ಆಸ್ಪತ್ರೆ ಹಿಂದಿರುವ ರಸ್ತೆಯು ಹಾಳಾಗಿದ್ದು, ಶಾಸಕರಾದ ಪಿ.ರವಿ ಕುಮಾರ್‌ರವರು ಎರಡು ಕೋಟಿ ರೂ ವೆಚ್ಚದಲ್ಲಿ ನಿರ್ಮಾಣ ಮಾಡಲು ಯೋಜನೆ ರೂಪಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಕ್ ತನ್ವೀರ್ ಆಸಿಫ್, ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಅಧೀಕ್ಷಕರು ಡಾ.ಶ್ರೀಧರ್, ಮಿಮ್ಸ್ ಪ್ರಾಂಶುಪಾಲರು ತಮ್ಮಣ್ಣ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಂದೂಪುರದಲ್ಲಿ ವೀರ ಮಡಿವಾಳ ಮಾಚಿದೇವರ ಜಯಂತ್ಯುತ್ಸವ



ಭಾರತೀನಗರ ಸಮೀಪದ ಚಂದೂಪುರ ಗ್ರಾಮದಲ್ಲಿ ವೀರಮಡಿವಾಳ ಮಾಚಿದೇವರ ಜಯಂತ್ಯುತ್ಸವ ಕಾರ್ಯಕ್ರಮ ಜರುಗಿತು.

ಭಾರತೀನಗರ, ಫೆ.26– ಸಮೀಪದ ಚಂದೂಪುರ ಗ್ರಾಮದಲ್ಲಿ ವೀರಮಡಿವಾಳ ಮಾಚಿದೇವರ ಜಯಂತ್ಯುತ್ಸವ ಕಾರ್ಯಕ್ರಮ ಸೋಮವಾರ ಜರುಗಿತು.

ಚಂದೂಪುರ ಗ್ರಾಮದ ದೊಡ್ಡವೀರಭದ್ರೇಶ್ವರ ದೇವಸ್ಥಾನದಿಂದ ಹೂ–ಹೊಂಬಾಳೆಯ ಮೂಲಕ ಮಡಿವಾಳ ಮಾಚಿದೇವರ ಕುಲದಮು ಮೆರವಣಿಗೆ ನಡೆಸಿಕೊಂಡು ಚಂದೂಪುರ ವೃತ್ತಕ್ಕೆ ಆಗಮಿಸಿ ವೀರಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಜಯಂತ್ಯುತ್ಸವ ಆಚರಣೆ ಮಾಡಿದರು.

ಇದೇ ವೇಳೆ ಮುಖಂಡರಾದ ದೊಡ್ಡ ಹೊನ್ನಶೆಟ್ಟಿ, ಅನಿಲ್‌ಕುಮಾರ್, ಸುನೀಲ್ ಕುಮಾರ್, ಪುನೀತ್‌ಕುಮಾರ್, ವೆಂಕಟೇಶ್, ಗೋವಿಂದ, ನಾಗರಾಜು, ರವಿ, ವೆಂಕಟೇಶ್, ಮನು, ಸಿದ್ದಶೆಟ್ಟಿ ಸೇರಿದಂತೆ ಹಲವರಿದ್ದರು.

ಜಿಲ್ಲೆಯಲ್ಲಿ ಮಾ.3, ಪಲ್ಸ್ ಪೋಲಿಯೋ ಕಾರ್ಯಕ್ರಮ

ಮಂಡ್ಯ: ಜಿಲ್ಲೆಯಲ್ಲಿ ಮಾ.3ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪೋಷಕರು ತಪ್ಪದೇ ತಮ್ಮ 0–5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಕೊಡಿಸುವಂತೆ ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದರು.

ಹಿಂದಿನ ಸರ್ಕಾರದಲ್ಲಿ ಮಂಜೂರಾಗಿದ್ದ ಅಭಿವೃದ್ಧಿ ಕಾರ್ಯಗಳಿಗೆ ತಡೆ

ಶಾಸಕ ಗಣಿಗ ರವಿಕುಮಾರ್ ವಿರುದ್ಧ ಬಿ.ಆರ್.ರಾಮಚಂದ್ರ ಆಕ್ರೋಶ

ಮಂಡ್ಯ: ಹಿಂದಿನ ಸರ್ಕಾರದ ಅವಧಿಯಲ್ಲಿ ಮಂಜೂರಾಗಿದ್ದ ಕಾಮಗಾರಿಗಳನ್ನು ತಡೆಹಿಡಿರುವ ಮಂಡ್ಯ ಕ್ಷೇತ್ರದ ಶಾಸಕರು, ಸುಖಾಸುಮ್ಮನೆ ತೊಂದರೆ ಕೊಡುತ್ತಿದ್ದಾರೆ ಎಂದು ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ಕೋಟಿ ರೂ. ವೆಚ್ಚದಲ್ಲಿ ಹೊಸಗಾವಿ ಮಹದೇಶ್ವರ ದೇವಾಲಯದಿಂದ ಮಾಚಗೌಡನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ ಶಂಭು ಕನ್‌ಸ್ಟ್ರಕ್ಷನ್‌ನವರು ಟೆಂಡರ್ ಪಡೆದಿದ್ದಾರೆ. ಮಾಜಿ ಶಾಸಕ ಎಂ.ಶ್ರೀನಿವಾಸ್ ಅವರು ಪೂಜೆ ಮಾಡಿದ್ದರು. ನಂತರದ ದಿನಗಳಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಾದ ಕಾರಣ ಕೆಲಸ ಮಾಡಲಾಗಲಿಲ್ಲ. ಈಗ ಕೆಲಸ ಮಾಡಲು ಮುಂದಾಗಿದ್ದರೂ ಸಹ ಅದಕ್ಕೆ ಶಾಸಕರು ಅಧಿಕಾರಿಗಳ ಮೂಲಕ ತಡೆಯೊಡ್ಡಿದ್ದಾರೆ. ಈ ಬಗ್ಗೆ ನಾವು ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಲು ಮುಂದಾಗಿದ್ದೇವೆ ಎಂದರು.



ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ತುಂಬಕೆರೆ ಗ್ರಾಮದ ರಸ್ತೆ ಕಾಮಗಾರಿಯನ್ನೂ ಶಾಸಕರು ನಿಲ್ಲಿಸಿದ್ದಾರೆ. ಯಾವ ಉದ್ದೇಶಕ್ಕೆ ಕಾಮಗಾರಿ ಮಾಡಲು ತೊಂದರೆ ನೀಡುತ್ತಿದ್ದಾರೆಂಬುದು ತಿಳಿಯುತ್ತಿಲ್ಲ. ಹಾಲಿ ಶಾಸಕರೇ ಹಿಂದಿನ ಎಲ್ಲಾ ಕಾಮಗಾರಿಗಳಿಗೆ ತಡೆಯೊಡ್ಡಿದ್ದಾರೆ ಎಂದರು.

ನಾಲೆಗಳಿಗೆ ನೀರು ಬಿಡಲು ಆಗ್ರಹ: ಜಿಲ್ಲೆಯನ್ನು ಕಾಡುತ್ತಿರುವ ಬರ ಜನ–ಜಾನುವಾರುಗಳ ಕುಡಿಯುವ ನೀರಿಗೂ ಸಂಚಕಾರ ತಂದೊಡ್ಡಿದೆ. ಇಂತಹ ಸಂದರ್ಭದಲ್ಲಿ ಕೆಆರ್‌ಎಸ್‌ನಿಂದ ನಾಲೆಗಳಲ್ಲಿ ನೀರು ಹರಿಸದೆ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ತಕ್ಷಣ ನಾಲೆಗಳಲ್ಲಿ ನೀರು ಹರಿಸಬೇಕು. ಇಲ್ಲದಿದ್ದಲ್ಲಿ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್ ಮಾತನಾಡಿ, ಕೃಷಿ ಮತ್ತು ಹೈನುಗಾರಿಕೆಯನ್ನೇ ನಂಬಿ ಬದುಕುವ ಜಿಲ್ಲೆಯಲ್ಲಿ ಮೇವಿನ ಹಾಹಾಕಾರದ ತಲೆದೋರಿದೆ. ಹಾಲಿನ ಸಂಗ್ರಹವೂ ಕುಂಠಿತವಾಗುತ್ತಿದೆ. ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಹಾಲಿನ ಸಂಗ್ರಹದಲ್ಲಿ ಇಳಿಕೆ ಕಂಡುಬರುತ್ತದೆ. ಆದರೆ ಈ ಬಾರಿ ಬರದಿಂದಾಗಿ ಹೆಚ್ಚು ತೊಂದರೆಯಾಗಿದೆ. ತಕ್ಷಣ ನಾಲೆಯಲ್ಲಿ ನೀರು ಹರಿಸಿ ಮೇವು ಮತ್ತು ಜಾನುವಾರುಗಳನ್ನು ರಕ್ಷಿಸುವಂತೆ ಆಗ್ರಹಿಸಿದರು.

ನಗರಸಭಾ ಸದಸ್ಯ ನಾಗೇಶ್, ಮುಖಂಡರಾದ ಬೂದನೂರು ಸ್ವಾಮಿ, ಸಾತನೂರು ಜಯರಾಂ ಸೇರಿದಂತೆ ಹಲವರು ಗೋಷ್ಠಿಯಲ್ಲಿದ್ದರು.

ಯಶಸ್ವಿನಿ ಯೋಜನೆಯ ನೋಂದಣಿ, ನವೀಕರಣ

ಮಂಡ್ಯ: 2023–24ನೇ ಸಾಲಿಗೆ ಯಶಸ್ವಿನಿ ಯೋಜನೆಯಲ್ಲಿ ಸದಸ್ಯರಾಗಲು ಮತ್ತು ನವೀಕರಣಗೊಳಿಸಲು ಫೆ.29 ರವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ.

2022–23 ರಲ್ಲಿ ಈಗಾಗಲೇ ಯಶಸ್ವಿನಿ ಯೋಜನೆಯಲ್ಲಿ ನೋಂದಣಿಯಾಗಿರುವ ಸಂಘದಲ್ಲಿಯೇ ನವೀಕರಣಗೊಳಿಸಲು ಗ್ರಾಮಾಂತರ ಪ್ರದೇಶದಲ್ಲಿ ಪ್ರಧಾನ ಅರ್ಜಿದಾರ ಸೇರಿ 4 ಜನರಿಗೆ 500 ರೂ ಗಳು ಅದಕ್ಕಿಂತ ಹೆಚ್ಚಾದ ಒಬ್ಬ ವ್ಯಕ್ತಿಗೆ ತಲಾ 100 ರೂ ರಂತೆ ಹಾಗೂ ನಗರ ಪ್ರದೇಶಕ್ಕೆ 4 ಜನರಿಗೆ 1000 ರೂ.ಗಳು ನಾಲ್ಕಕ್ಕಿಂತ ಒಬ್ಬ ವ್ಯಕ್ತಿ ಹೆಚ್ಚಾದಲ್ಲಿ 200 ರೂ.ಗಳನ್ನು ಹೆಚ್ಚಿಗೆ ನೋಂದಣಿ ಶುಲ್ಕ ಪಾವತಿಸಿ ನವೀಕರಣ ಮಾಡಿಸಿಕೊಳ್ಳಬಹುದಾಗಿದೆ.

ಯಶಸ್ವಿನಿ ಯೋಜನೆಯಡಿ ಫೆ.29 ರೊಳಗೆ ಹೊಸದಾಗಿ ನೋಂದಣಿ ಮತ್ತು ನವೀಕರಣಗೊಳಿಸಿಕೊಂಡು ಯೋಜನೆಯ ಪ್ರಯೋಜನವನ್ನು ಪಡೆಯಲು ಸಹಕಾರ ಸಂಘಗಳ ಉಪನಿಬಂಧಕರಾದ ಟಿ.ಆರ್. ರೇಖಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಶ್ರೀರಂಗಪಟ್ಟಣ ಸುತ್ತ–ಮುತ್ತ ನಿಗೂಢ ಸದ್ದು

ಶ್ರೀರಂಗಪಟ್ಟಣ, ಫೆ.26– ಪಟ್ಟಣದ ಸುತ್ತ–ಮುತ್ತ ಭಾರಿ ಸ್ಫೋಟದ ಶಬ್ದ ಕೇಳಿಬಂದಿದ್ದು, 5ರಿಂದ 10 ಸೆಕೆಂಡ್ ಭೂಮಿ ಕಂಪಿಸಿದ ಅನುಭವ ಉಂಟಾಗಿದೆ.

ಸೋಮವಾರ ಮಧ್ಯಾಹ್ನ 3.50ರ ಸುಮಾರಿನಲ್ಲಿ ನಿಗೂಢ ಸ್ಫೋಟದ ಶಬ್ದ ಕೇಳಿ ಬಂದಿದ್ದು, ಮನೆಂರೊಳಗಿನ ಪಾತ್ರೆ, ಪದಾರ್ಥಗಳು ಅಲುಗಾಡಿವೆ. ಅಂಗಡಿ ಮುಂಗಟ್ಟುಗಳ ಬಳಿಯಲ್ಲಿ ಕುಳಿತಿದ್ದ ಜನರಿಗೂ ಭಾರಿ ಶಬ್ದದೊಂದಿಗೆ ಭೂಮಿ ಕಂಪಿಸಿದ ಅನುಭವವಾಗಿದೆ. ಕೆಆರ್‌ಎಸ್, ಬೆಳಗೊಳ, ಕೆ.ಶೆಟ್ಟಹಳ್ಳಿ, ಅರಕೆರೆ ಈ ಭಾಗದಲ್ಲಿ ಹೆಚ್ಚಿನ ಶಬ್ದ ಕೇಳಿ ಬಂದಿದ್ದು ರಸ್ತೆಯಲ್ಲಿ ತೆರಳುತ್ತಿದ್ದ ಜನರೂ ಸಹ ಬಾರಿ ಶಬ್ದದ ಕೇಳಿದ ಬಗ್ಗೆ ಚರ್ಚೆ ನಡೆಸಿದ್ದಾರೆ ಕಳೆದ ಎರಡು ದಿನಗಳ ಹಿಂದೆ ಮಂಡ್ಯದಲ್ಲಿ ಇಂತಹುದ್ದೆ ಭಾರಿ ಶಬ್ದ ಕೇಳಿ ಬಂದಿತ್ತು. ಮೇಲಿಂದ ಮೇಲೆ ಕೇಳಿ ಬರುತ್ತಿರುವ ನಿಗೂಢ ಸ್ಫೋಟದ ಶಬ್ದಕ್ಕೆ ಜನರು ಆತಂಕಗೊಂಡಿದ್ದಾರೆ.

ಸ್ಫೋಟಕ ಶಬ್ದ ಸಂಬಂಧ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಕರೆ ಮಾಡಿ ಕೇಳಲಾಗಿದ್ದು, ಅವರಿಂದ ಯಾವುದೇ ಮಾಹಿತಿ ಲಭ್ಯವಾಗಿಲ್ಲ ಎಂದು ಶ್ರೀರಂಗಪಟ್ಟಣ ತಹಶೀಲ್ದಾರ್ ಪರುಶುರಾಮ ಸತ್ತಿಗೇರಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ಸರ್ಕಾರಿ ಶಾಲಾ ಮಕ್ಕಳಿಗೆ ಅನ್ನಪೂರ್ಣ ಯೋಜನೆಗೆ ಚಾಲನೆ

ಬೆಂಗಳೂರು: ಸರ್ಕಾರಿ ಶಾಲಾ ಮಕ್ಕಳಿಗೆ ಬೆಳಗಿನ ಪೌಷ್ಟಿಕಾಂಶಯುಕ್ತ ಆಹಾರ ನೀಡುವ 'ಅನ್ನಪೂರ್ಣ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಚಾಲನೆ ನೀಡಿದರು.

ಈ ಕಾರ್ಯಕ್ರಮವು ಸದ್ಗುರು ಮಧುಸೂದನ್ ಸಾಯಿಯವರ ಕಲ್ಪನೆಯಾಗಿದ್ದು, ಯಾವುದೇ ಮಗು ಹಸಿವಿನಿಂದ ಶಾಲೆಗೆ ಹೋಗಬಾರದು ಎಂಬುದು ಈ ಕಾರ್ಯಕ್ರಮದ ಧ್ಯೇಯವಾಗಿದೆ. ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ ಪ್ರಕಾರ, ಕರ್ನಾಟಕವು ಕಳೆದ ಒಂಬತ್ತು ವರ್ಷಗಳಿಂದ ಅನ್ನಪೂರ್ಣ ಟ್ರಸ್ಟ್‌ನ ಸೇವೆಗಳ ಕೇಂದ್ರವಾಗಿದೆ. ರಾಜ್ಯದಲ್ಲಿ ಕೇವಲ 50 ಮಕ್ಕಳಿಗೆ ಆಹಾರ ನೀಡುವುದರೊಂದಿಗೆ ಪ್ರಾರಂಭವಾಯಿತು. ಇದು 5,085 ಶಾಲೆಗಳಲ್ಲಿ ಸುಮಾರು 3,62,243 ಮಕ್ಕಳಿಗೆ ಹಂತ ಹಂತವಾಗಿ ಬೆಳೆದಿದೆ. ಇಡೀ ಕರ್ನಾಟಕದ ಮೂಲಕ 53,619 ಶಾಲೆಗಳನ್ನು ತಲುಪಲು ಅದರ ಆರೈಕೆಯಲ್ಲಿ ಹೆಚ್ಚುವರಿ 55 ಲಕ್ಷ ಮಕ್ಕಳು ಸೇರ್ಪಡೆಯಾಗಿದ್ದಾರೆ. ಇದರೊಂದಿಗೆ, ಕರ್ನಾಟಕದ ಬಹುತೇಕ ಎಲ್ಲಾ ಸರ್ಕಾರಿ ಶಾಲೆಗೆ ಹೋಗುವ ಮಕ್ಕಳು ತಮ್ಮ ಬೆಳಗಿನ ಪೌಷ್ಟಿಕಾಂಶವನ್ನು 'ಅನ್ನಪೂರ್ಣ' ಬಹು–ಪೌಷ್ಟಿಕಾಂಶದ ಪೂರಕವಾದ SaiSure' ಮೂಲಕ ಸ್ವೀಕರಿಸುತ್ತಾರೆ. ವಿಶೇಷವಾಗಿ ಮಕ್ಕಳಿಗಾಗಿ ಆಹಾರವನ್ನು ಮರುಸಂಯೋಜನೆ ಮಾಡಲಾಗಿದೆ ಎಂದು ಟ್ರಸ್ಟ್ ಹೇಳಿಕೆಯಲ್ಲಿ ತಿಳಿಸಿದೆ.



ಸರ್ಕಾರಿ ಶಾಲಾ ಮಕ್ಕಳಿಗೆ ಬೆಳಗಿನ ಪೌಷ್ಟಿಕಾಂಶಯುಕ್ತ ಆಹಾರ ನೀಡುವ 'ಅನ್ನಪೂರ್ಣ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಚಾಲನೆ ನೀಡಿದರು.

2013ರಿಂದ, ಕರ್ನಾಟಕ ಸರ್ಕಾರದ 'ಕ್ಷೀರ ಭಾಗ್ಯ' ಉಪಕ್ರಮವು ಸರ್ಕಾರಿ ಶಾಲೆಗೆ ಹೋಗುವ ಮಕ್ಕಳಿಗೆ ವಾರದಲ್ಲಿ ಐದು ದಿನ ಹಾಲು ಸರಬರಾಜು ಮಾಡುತ್ತಿದೆ. ಈ ಕಾರ್ಯಕ್ರಮಕ್ಕಾಗಿ ಸುಮಾರು 731 ಕೋಟಿ ರೂಪಾಯಿಗಳ ಬಜೆಟ್‌ಗೆ ಅನುಮೋದನೆ ನೀಡಲಾಗಿದೆ. ಪೌಷ್ಟಿಕಾಂಶದ ಕೊರತೆಯನ್ನು ನಿವಾರಿಸುವ, ರಕ್ತಹೀನತೆಯನ್ನು ತಡೆಗಟ್ಟುವ ಮತ್ತು ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ಉತ್ತೇಜಿಸುವ SaiSure ಅನ್ನು ಪ್ರಾರಂಭಿಸುವ ಮೂಲಕ ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ನಮ್ಮ ಪ್ರಯತ್ನಕ್ಕೆ ಇನ್ನಷ್ಟು ಮೌಲ್ಯವನ್ನು ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ.

ಅನ್ನಪೂರ್ಣದಿಂದ ಎಲ್ಲಾ ಸರ್ಕಾರಿ ಶಾಲೆಗಳಿಗೆ ರಾಗಿ ಅಥವಾ ರಾಗಿ ಹಿಟ್ಟಿನಿಂದ ತಯಾರಾದ ಅಂಬಲಿ ಅಥವಾ ಮಾಲ್ಟ್ ಅನ್ನು ಸರಬರಾಜು ಮಾಡಲಾಗುವುದು ಮತ್ತು ಕರ್ನಾಟಕದ 'ಕ್ಷೀರ ಭಾಗ್ಯ' ದಿಂದ ಎಲ್ಲಾ ಮಕ್ಕಳಿಗೆ ನೀಡುವ ಹಾಲಿನ ಜೊತೆಗೆ SaiSure ಹೆಲ್ತ್ ಮಿಕ್ಸ್ ಅನ್ನು ನೀಡಲಾಗುತ್ತದೆ. ಸಾಯಿಷ್ಯೂರ್ ಅನ್ನು ಬೆಲ್ಲ ಮತ್ತು ನೀರಿನಿಂದ ಕೂಡ ಸೇವಿಸಬಹುದು ಎಂದು ಟ್ರಸ್ಟ್ ಹೇಳಿಕೆಯಲ್ಲಿ ತಿಳಿಸಿದೆ.

ಬೆಳಗಿನ ಪೌಷ್ಟಿಕಾಂಶ ಆಹಾರ ನೀಡುವ ವ್ಯವಸ್ಥೆ

ಸುಭಿಕ್ಷಾ ಸಾವಯವ ಕೃಷಿಕರ ಬಹು–ರಾಜ್ಯ ಸಹಕಾರಿ ಸೊಸೈಟಿ ಲಿಮಿಟೆಡ್ ಮೂಲಕ ಟ್ರಸ್ಟ್ ಸಾವಯವವಾಗಿ ಬೆಳೆದ ರಾಗಿಯನ್ನು ಖರೀದಿಸುವುದರಿಂದ ಕರ್ನಾಟಕದ ರೈತ ಸಮುದಾಯವು ದೊಡ್ಡ ರೀತಿಯಲ್ಲಿ ಪ್ರಯೋಜನ ಪಡೆಯುತ್ತಿದೆ. ಇದು ರೈತರಿಂದ ಗ್ರಾಹಕರಿಗೆ ತಡೆರಹಿತ ವ್ಯವಹಾರವನ್ನು ನೀಡುತ್ತದೆ. ರೈತರಿಗೆ ಅವರ ಜೀವನೋಪಾಯಕ್ಕಾಗಿ ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚು ಸಾಕಷ್ಟು ಪರಿಹಾರವನ್ನು ನೀಡುತ್ತದೆ. ಅನ್ನಪೂರ್ಣ ಬೆಳಗಿನ ಪೋಷಣೆ ಕಾರ್ಯಕ್ರಮವು ಇಂದು ಬೆಳಗಿನ ಪೌಷ್ಟಿಕಾಂಶಕ್ಕಾಗಿ ಭಾರತದ ಅತಿದೊಡ್ಡ ಕಾರ್ಯಕ್ರಮವಾಗಿದೆ. ಇದು ಭಾರತದಾದ್ಯಂತ, 25 ರಾಜ್ಯಗಳು ಮತ್ತು 5 ಕೇಂದ್ರಾಡಳಿತ ಪ್ರದೇಶಗಳಲ್ಲಿ 90 ಲಕ್ಷ ಮಕ್ಕಳಿಗೆ ಸೇವೆ ಸಲ್ಲಿಸುತ್ತದೆ" ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಉಡಾಫೆ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಾನ–ಮರ್ಯಾದೆ ಇಲ್ಲ

ಹುಬ್ಬಳ್ಳಿ : ಮುಖ್ಯಮಂತ್ರಿ ಸಿದ್ದರಾಮಯ್ಯ ಬರೀ ಉಡಾಫೆ ಮಾತನಾಡುತ್ತಾರೆ. ಅವರಿಗೆ ಮಾನ, ಮರ್ಯಾದೆಯೇ ಇಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕಿಡಿಕಾರಿದ್ದಾರೆ. ಈ ಮೂಲಕ ಪ್ರಧಾನಿ ಮೋದಿ ಅವರಿಗೆ ಎರಡು ನಾಲಿಗೆ ಎಂದಿರುವ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ್ದಾರೆ.



ಹುಬ್ಬಳ್ಳಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಿಮಗೆ ಎಷ್ಟು ನಾಲಿಗೆ ಇದೆ. ನಿಮ್ಮ ನಾಲಿಗೆ ಎಂಥದ್ದು ಎಂಬುದು ಇಡೀ ನಾಡಿಗೇ ಗೊತ್ತಿದೆ. ಹೀಗೆ ಲಘುವಾಗಿ ಮಾತನಾಡುವುದು ನಿಮ್ಮ ಮತ್ತು ಕಾಂಗ್ರೆಸ್ ಸಂಸ್ಕೃತಿ. ಸಂವಿಧಾನದಲ್ಲಿ ಮತ ಪಡೆದ ವ್ಯಕ್ತಿಗೆ ನಿಮ್ಮಂತೆಯೇ ಘನತೆ, ಗೌರವ ಇರುತ್ತದೆ. ಅದನ್ನರಿತು ಮಾತನಾಡಿ. ನಿಮಗೆ ಅಧಿಕಾರದ ಪವರ್ ತುಸು ಹೆಚ್ಚಿರಬಹುದು. ಆದರೆ, ಒಬ್ಬ ಸಿಎಂ ಮತ್ತು ಕೇಂದ್ರ ಸರ್ಕಾರದ ಮಂತ್ರಿ ಇಬ್ಬರೂ ಸಮಾನರು. ಸ್ವಲ್ಪ ಅಳೆದು–ತೂಗಿ ಮಾತನಾಡಿ ಎಂದು ತಿರುಗೇಟು ನೀಡಿದರು.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಉತ್ತರ ಕನ್ನಡ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಪ್ರಕರಣ ದಾಖಲಿಸಿದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಹಲವಾರು ಸಂಗತಿಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರು ಏಕವಚನದಲ್ಲೇ ಬಾಯಿಗೆ ಬಂದ ಹಾಗೆ ಜನರಿಗೆ ಬೈಯುತ್ತಾರೆ. ಅವರ ಬಗ್ಗೆ ಏನೂ ಆಗಲ್ಲ. ಆದರೆ, ಅನಂತ ಕುಮಾರ್ ಹೆಗಡೆ ಬಗ್ಗೆ ಆಗುತ್ತದೆ. ಸಾಮಾಜಿಕ ಜಾಲತಾಣದಲ್ಲಿ ಯಾರೋ ಏನೋ ಪೋಸ್ಟ್ ಮಾಡಿದರೆ ಎಫ್‌ಐಆರ್ ದಾಖಲಾಗುತ್ತದೆ. ಸರ್ಕಾರದ ನಡೆ ಮತ್ತು ಯಾವ ರೀತಿ ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದು ಪ್ರಹ್ಲಾದ್ ಜೋಶಿ ಹೇಳಿದರು.

ಯುವನಿಧಿಗೆ ಸ್ವಯಂ ಘೋಷಣೆ ಕಡ್ಡಾಯ

ಮೈಸೂರು, ಫೆ.26–"ಯುವನಿಧಿ" ಕಾರ್ಯಕ್ರಮವು ನಿರುದ್ಯೋಗ ಅಭ್ಯರ್ಥಿಗಳ ಆಶಾಕಿರಣವಾಗಿದ್ದು, ಪದವೀಧರರಿಗೆ ಮಾಸಿಕ 3,000 ಹಾಗೂ ಡಿಪ್ಲೊಮಾ ದಾರರುಗಳಿಗೆ ಮಾಸಿಕ 1,500ಗಳನ್ನು ಸರ್ಕಾರದಿಂದ ನೀಡುತ್ತಿದ್ದು, ಇದರ ಸದುಪಯೋಗವನ್ನು ಜಿಲ್ಲೆಯ ಸಮಸ್ತ ನಿರುದ್ಯೋಗ ಅಭ್ಯರ್ಥಿಗಳು ಪಡೆದುಕೊಳ್ಳಬೇಕಿದೆ. ನಿರುದ್ಯೋಗ ಭತ್ಯೆ ಪಡೆಯುತ್ತಿರುವ ಅಭ್ಯರ್ಥಿಗಳು ಫೆ.29ರೊಳಗಾಗಿ ತಾವು ನಿರುದ್ಯೋಗಿ, ಸ್ವಯಂ ಉದ್ಯೋಗಿಯಾಗಿಲ್ಲ ಮತ್ತು ವ್ಯಾಸಂಗವನ್ನು ಮುಂದುವರೆಸಿಲ್ಲ ಎಂಬ ಸ್ವಯಂ ಘೋಷಣೆ ಸಲ್ಲಿಸುವುದು ಕಡ್ಡಾಯವಾಗಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ್ ಜೋಡಣೆಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ಕರ್ನಾಟಕ ಸರ್ಕಾರದ ಸೇವಾಸಿಂಧು ವೆಬ್‌ಸೈಟ್ ಮೂಲಕ ಅಭ್ಯರ್ಥಿಗಳು ಸ್ವಯಂ ಘೋಷಣೆ ಮಾಡಿಕೊಳ್ಳಬೇಕು ಹಾಗೂ ಯುವನಿಧಿ ಪ್ರತಿ ತಿಂಗಳು ಸ್ವಯಂಘೋಷಣೆ ಕಡ್ಡಾಯ ಎಂದು ಉದ್ಯೋಗ ಮತ್ತು ತರಬೇತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾವಣಗೆರೆಯಲ್ಲಿ ಟೈರ್ ಸ್ಫೋಟ: ಬೊಲೆರೋ ವಾಹನ ಪಲ್ಟಿ, ಮೂವರ ದುರ್ಮರಣ

ದಾವಣಗೆರೆ: ಟೈರ್ ಸ್ಫೋಟಗೊಂಡು ಬೊಲೆರೋ ವಾಹನ ಪಲ್ಟಿಯಾದ ಪರಿಣಾಮ ಮೂವರು ಸಾವನ್ನಪ್ಪಿ, 6 ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆಯೊಂದು ದಾವಣಗೆರೆ ಹೊರ ವಲಯದ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಭಾನು ವಾರ ತಡರಾತ್ರಿ ನಡೆದಿದೆ.

ಮೃತಪಟ್ಟವರೆಲ್ಲರೂ ಆಂಧ್ರ ಮೂಲದವರಾಗಿದ್ದಾರೆಂದು ಹೇಳಲಾಗುತ್ತಿದ್ದು, ಗಾಯಾಳುಗಳನ್ನು ದಾವಣಗೆರೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಓರ್ವನ ಸ್ಥಿತಿ ಗಂಭೀರವಾಗಿದ್ದು, ಆತನನ್ನು ಹುಬ್ಬಳ್ಳಿಗೆ ರವಾನಿಸಲಾಗಿದೆ ಎಂದು ತಿಳಿದು ಬಂದಿದೆ. ಮೃತಪಟ್ಟವರು ಆಂಧ್ರ ಮೂಲದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ತಾಲೂಕಿನ ಸಿಂಗರಾಜನಹಳ್ಳಿ ನಿವಾಸಿಗಳು ಎಂದು ಹೇಳಲಾಗುತ್ತಿದೆ. ಹಾವೇರಿ ಜಿಲ್ಲೆ ಬ್ಯಾಡಗಿಯಿಂದ ಮೆಣಸಿನಕಾಯಿ ಖರೀದಿಗೆ ತೆರಳಿ ವಾಪಸ್ ಬರುವ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ.

ಗ್ರಾಪಂ ಸದಸ್ಯೆ ಮಂಜುಳಾ ಅನರ್ಹ

ಮಡಿಕೇರಿ: ಸತತ 4 ಬಾರಿ ಸಾಮಾನ್ಯ ಸಭೆಗೆ ಗೈರಾಗಿದ್ದ ಪೊನ್ನಂಪೇಟೆ ಗ್ರಾಪಂ ಸದಸ್ಯೆ ಪಿ.ಆರ್.ಮಂಜುಳಾ ಅವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ.

ಪೊನ್ನಂಪೇಟೆ ಗ್ರಾಪಂನ 5ನೇ ವಾರ್ಡ್‌ನ ಕಾಟ್ರಕೊಲ್ಲಿಯ ಸದಸ್ಯರಾಗಿ ಈಕೆ ಆಯ್ಕೆಯಾಗಿದ್ದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್ ಅವರು ಪ್ರಕರಣ ಸಂಖ್ಯೆ 43ರ ಅಡಿ ಮಂಜುಳಾ ಅವರನ್ನು ಅನರ್ಹಗೊಳಿಸಿ, ಮುಂದಿನ 6 ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ ಎಂದು ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್ ಬೆಂಬಲಿತ ಸದಸ್ಯರಾಗಿ ಆಯ್ಕೆಗೊಂಡಿದ್ದ ಪಿ.ಆರ್.ಮಂಜುಳಾ ಎರಡೂವರೆ ವರ್ಷದ ಹಿಂದೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಚುನಾವಣೆ ಸಂದರ್ಭ ಬಿಜೆಪಿ ಬೆಂಬಲಿತರ ಪರವಾಗಿ ಅಡ್ಡ ಮತದಾನ ಮಾಡಿದ್ದರು ಎನ್ನುವ ಆರೋಪವೂ ಇದೆ. ಪೊನ್ನಂಪೇಟೆ ಗ್ರಾಪಂನಲ್ಲಿ ಒಟ್ಟು 20 ಸದಸ್ಯ ಬಲವಿದ್ದು, ಮಂಜುಳಾ ಸೇರಿ ಬಿಜೆಪಿ 11 ಮತ್ತು ಕಾಂಗ್ರೆಸ್‌ನ 9 ಬೆಂಬಲಿತ ಸದಸ್ಯರು ಇದ್ದಾರೆ.



ಪಿ.ಆರ್.ಮಂಜುಳಾ

ಮಹಾರಾಷ್ಟ್ರದಲ್ಲಿ ತೀವ್ರಗೊಂಡ ಮರಾಠ ಮೀಸಲಾತಿ ಹೋರಾಟ

ಸರ್ಕಾರಿ ಬಸ್‌ಗೆ ಬೆಂಕಿ, ನಿಷೇಧಾಜ್ಞೆ ಜಾರಿ

ಮುಂಬೈ (ಮಹಾರಾಷ್ಟ್ರ): ಮಹಾರಾಷ್ಟ್ರದಲ್ಲಿ ಮರಾಠ ಮೀಸಲಾತಿ ಹೋರಾಟ ಮತ್ತಷ್ಟು ತೀವ್ರಗೊಂಡಿದ್ದು, ಹೋರಾಟಗಾರರು ಅಂಬಾದ್ ಎಂಬಲ್ಲಿ ಸರ್ಕಾರಿ ಬಸ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ತರಲು ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಮರಾಠ ಸಮುದಾಯಕ್ಕೆ ಇತರ ಹಿಂದುಳಿದ ವರ್ಗದ (ಒಬಿಸಿ) ಕೋಟಾದಲ್ಲಿ ಮೀಸಲಾತಿ ನೀಡಬೇಕು ಎಂದು ಕೋರಿ ಹೋರಾಟಗಾರ ಮನೋಜ್ ಜಾರಂಗೆ ಸರ್ಕಾರದ ವಿರುದ್ಧ ಕೆಲವು ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಉದ್ಯೋಗ, ಶಿಕ್ಷಣದಲ್ಲಿ ಶೇ.10 ರಷ್ಟು ಮೀಸಲಾತಿ ನೀಡುವ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ ಸಿಎಂ ಏಕನಾಥ್ ಶಿಂಧೆ ನೇತೃತ್ವದ ಸರ್ಕಾರ ಅಂಗೀಕಾರ ಪಡೆದುಕೊಂಡಿದೆ. ಆದರೆ, ಇದಕ್ಕೂ ವಿರೋಧ ವ್ಯಕ್ತವಾಗಿದೆ. ಸರ್ಕಾರ ಮರಾಠರಿಗೆ ನೀಡಿದ ಆಶ್ವಾಸನೆಯಂತೆ ನಡೆದುಕೊಂಡಿಲ್ಲ. ರಾಜ್ಯಾದ್ಯಂತ ಹೋರಾಟವನ್ನು ತೀವ್ರಗೊಳಿಸಲು ಹೋರಾಟಗಾರ ಮನೋಜ್ ಜಾರಂಗೆ ಕರೆ ನೀಡಿದ್ದಾರೆ. ಇದರಿಂದ ರಾಜ್ಯದ ಹಲವೆಡೆ ಮರಾಠ ಹೋರಾಟ ಮತ್ತೆ ಕಾವು ಪಡೆದುಕೊಂಡಿದೆ. ಸೋಮವಾರದಂದು ಅಂಬಾದ್‌ನಲ್ಲಿ ಸರ್ಕಾರಿ ಬಸ್‌ಗೆ ಬೆಂಕಿ ಹಚ್ಚಿದ್ದಾರೆ. ಭಾರಿ ಪ್ರಮಾಣದಲ್ಲಿ ಜನರು ಸೇರಿರುವ ಕಾರಣ ಕಾನೂನು ಸುವ್ಯವಸ್ಥೆ ಹದಗೆಡದಂತೆ ಮುನ್ನೆಚ್ಚರಿಕಾ ಕ್ರಮವಾಗಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.



ಇಲವಾಲ ಬಳಿ ಸಾಕುನಾಯಿ ಮೇಲೆ ಚಿರತೆ ದಾಳಿ

ಮೈಸೂರು, ಫೆ.26(ಎಂಟಿವೈ)– ಮೈಸೂರು ತಾಲೂಕಿನ ಇಲವಾಲ ಸಮೀಪದ ಕರಕನಹಳ್ಳಿ ಗ್ರಾಮದಲ್ಲಿ ಕಳೆದ ರಾತ್ರಿ ಚಿರತೆಯೊಂದು ಮನೆ ನಾಯಿಯನ್ನು ಎಳೆದೊಯ್ದಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

ಗ್ರಾಮದ ಮಧನ್ ಎಂಬುವರ ಮನೆ ಮುಂದೆ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಚಿರತೆ ನಾಯಿಯನ್ನು ಅಟ್ಟಾಡಿಸಿಕೊಂಡು ಬಂದು, ಅದನ್ನು ಎಳೆದೊಯ್ಯುತ್ತಿರುವ ದೃಶ್ಯ ಸೆರೆ ಸಿಕ್ಕಿದೆ. ಇದರಿಂದ ಗ್ರಾಮಸ್ಥರಲ್ಲಿ ಆತಂಕ ಉಂಟಾಗಿದ್ದು, ಚಿರತೆ ಸೆರೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ್ದ ಅರಣ್ಯ ಸಿಬ್ಬಂದಿ ಪರಿಶೀಲನೆ ನಡೆಸಿ, ಮತ್ತೆ ಚಿರತೆ ಕಾಣಿಸಿಕೊಂಡರೆ ಮಾಹಿತಿ ನೀಡುವಂತೆ ಸೂಚಿಸಿದ್ದಾರೆ.

ಚಿರತೆ ದಾಳಿಗೆ ಒಳಗಾಗಿದ್ದ ಸಾಕು ನಾಯಿ ಸಾವು: ಪಾಂಡವಪುರ ಸಮೀ ಪದ ಬೇಬಿ ಗ್ರಾಮದ ಬಿ.ಎಸ್.ಗಿರೀಶ್ ಎಂಬುವರ ಮನೆ ಮುಂದೆ ಕಟ್ಟಿ ಹಾಕಿದ್ದ ಗುಂಡ ಹೆಸರಿನ ಸಾಕುನಾಯಿ ಮೇಲೆ ಚಿರತೆ ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಸಾಕುಸಾಯಿ ಮೃತಪಟ್ಟಿದೆ. ಫೆ.24ರಂದು ಮುಂಜಾನೆ 3 ಗಂಟೆಗೆ ಚಿರತೆ ಮನೆ ಮುಂದೆ ಕಟ್ಟಿಹಾಕಿದ್ದ ಸಾಕುನಾಯಿ ಮೇಲೆ ದಾಳಿ ಮಾಡಿದೆ. ಚಿರತೆ ದಾಳಿಗೆ ನಾಯಿ ಕಿರುಚಾಡಿದೆ. ಇದರಿಂದ ಗಿರೀಶ್ ಅವರು ಮನೆಯಿಂದ ಹೊರ ಬಂದು ನೋಡಿದಾಗ ಚಿರತೆ ನಾಯಿಯನ್ನು ಎಳೆದಾಡುತ್ತಿದ್ದ ದೃಶ್ಯ ಕಂಡು ಬಂದಿದೆ. ಕೂಡಲೇ ಜೋರಾಗಿ ಕಿರುಚಿ ಚಿರತೆ ಓಡಿಸಿದ್ದಾರೆ. ಗಾಯಗೊಂಡ ನಾಯಿಯನ್ನು ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಪೆಟ್ ಕ್ಲಿನಿಕ್‌ಗೆ ದಾಖಲಿಸಲಾಗಿತ್ತು. ಪಶುವೈದ್ಯ ಡಾ.ಹೆಚ್.ವಿ.ದೀಪಕ್ ಶ್ವಾನದ ಎಕ್ಸ್‌ರೇ ಮಾಡಿ ಪರಿಶೀಲಿಸಿದಾಗ ನಾಯಿಯ ಶ್ವಾಸನಾಳ ಛಿದ್ರಗೊಂಡಿತ್ತು. ಕೂಡಲೆ ಶಸ್ತ್ರಚಿಕಿತ್ಸೆ ಮಾಡಿ, ತೀವ್ರ ನಿಗಾ ಘಟಕದಲ್ಲಿಟ್ಟು ಆರೈಕೆ ಮಾಡಲಾಗುತ್ತಿತ್ತು. ಆದರೆ ಇಂದು ಸಂಜೆ ಶ್ವಾನ ಮೃತಪಟ್ಟಿದೆ.

ರೇಂಜರ್ ಚಿಣ್ಣಪ್ಪ ನಿಧನ



ಮಡಿಕೇರಿ,ಫೆ.26–ಹಿರಿಯ ಪರಿಸರ ಪ್ರೇಮಿ, ವನ್ಯಜೀವಿ ತಜ್ಞ ಹಾಗೂ ನಿವೃತ್ತ ಅರಣ್ಯಾಧಿಕಾರಿ ರೇಂಜರ್ ಚಿಣ್ಣಪ್ಪ ಎಂದೇ ಪರಿಸರ ಪ್ರೇಮಿಗಳಿಂದ ಕರೆಸಿಕೊಳ್ಳುತ್ತಿದ್ದ ಕೊಟ್ರಂಗಡ ಎಂ.ಚಿಣ್ಣಪ್ಪ (84) ಅವರು ಸೋಮವಾರ ನಿಧನರಾಗಿದ್ದಾರೆ.

ಪೊನ್ನಂಪೇಟೆ ತಾಲೂಕಿನ ಕಾಕೂರು ಗ್ರಾಮದ ನಿವಾಸಿಯಾಗಿದ್ದ ಚಿಣ್ಣಪ್ಪ, 30 ವರ್ಷ ಅರಣ್ಯ ಇಲಾಖೆಯಲ್ಲಿ ರೇಂಜರ್ ಆಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದರು. ತಮ್ಮ ಸೇವಾ ಅವಧಿಯಲ್ಲಿ ರಾಜ್ಯದ ಹಲವು ಅರಣ್ಯ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸಿದ್ದ ಕೆ.ಎಂ.ಚಿಣ್ಣಪ್ಪ ವನ್ಯ ಸಂಪತ್ತು, ವನ್ಯಜೀವಿಗಳ ಉಳಿವು, ಬೇಟೆ, ಮರ ಕಳ್ಳತನ ಮತ್ತಿತರ ಅಕ್ರಮಗಳಿಗೆ ಶಾಶ್ವತ ಕಡಿವಾಣ ಹಾಕಿದ್ದರು. ಕೆ.ಎಂ.ಚಿಣ್ಣಪ್ಪ ಅವರ ಅಮೋಘ ಸೇವೆಯನ್ನು ಪರಿಗಣಿಸಿದ್ದ ರಾಜ್ಯ ಸರ್ಕಾರ 1983ರಲ್ಲಿ ಮುಖ್ಯಮಂತ್ರಿಗಳ ಚಿನ್ನದ ಪದಕ ನೀಡಿ ಗೌರವಿಸಿತ್ತು. 1990ರ ದಶಕದಲ್ಲಿ ನಾಗರಹೊಳೆ ಅಭಯಾರಣ್ಯಕ್ಕೆ ದುಷ್ಕರ್ಮಿಗಳು ಬೆಂಕಿ ಹಚ್ಚಿದಾಗ ತಮ್ಮ ಜೀವದ ಹಂಗನ್ನೇ ತೊರೆದು ಬೆಂಕಿ ನಂದಿಸಲು ಹರಸಾಹಸಪಟ್ಟಿದ್ದರು. ಚಿಣ್ಣಪ್ಪ ಅವರು ಅರಣ್ಯ ಅಧಿಕಾರಿಯಾಗಿ ಸಲ್ಲಿಸಿದ ಸೇವೆಯ ಕುರಿತು ಲೇಖಕ ಗೋಪಾಲ್ ಎಂಬುವರು ಕಾಡಿನೊಳಗೊಂದು ಜೀವ' ಪುಸ್ತಕವನ್ನೂ ರಚಿಸಿದ್ದು, ಈ ಕೃತಿ ಅಪಾರ ಜನ ಮೆಚ್ಚುಗೆ ಪಡೆದಿದೆ.

ಕೊಟ್ರಂಗಡ ಚಿಣ್ಣಪ್ಪ ಅವರು ಕೂರ್ಗ್ ವೈಲ್ಡ್‌ಲೈಫ್ ಫಸ್ಟ್‌ಸಂಘಟನೆ ಹುಟ್ಟುಹಾಕಿ ಪರಿಸರ ಸಂರಕ್ಷಣೆಗೆ ತಮ್ಮದೇ ಆದ ಸೇವೆ ಸಲ್ಲಿಸುತ್ತಿದ್ದರು. ಜಿಲ್ಲೆಯ ವಿವಿಧ ಭಾಗಗಳಲ್ಲಿ ಶಾಲಾ ಮಕ್ಕಳ ಮೂಲಕ ಕಾಡ್ಗಿಚ್ಚು ಜಾಗೃತಿ ಜಾಥಾ ನಡೆಸುವ ಮೂಲಕ ಸಾರ್ವಜನಿಕರಲ್ಲಿ ಅರಣ್ಯ ಸಂರಕ್ಷಣೆಯ ಅರಿವು ಮೂಡಿಸುತ್ತಿದ್ದರು. ಮೃತರು ಪತ್ನಿ ರಾಧಾ, ಪುತ್ರ ಮನು ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದಲ್ಲಿ ನಡೆಯಲಿದೆ.

ಸಂತಾಪ: ವಿವಿಧ ಸಂಘ ಸಂಸ್ಥೆಗಳು ಸಂತಾಪ ಸೂಚಿಸಿವೆ. ಈ ಕುರಿತು ಪ್ರತಿಕ್ರಿಯಿಸಿದ ವೈಲ್ಡ್‌ಲೈಫ್ ಫಸ್ಟ್ ಸಹ ಸಂಸ್ಥಾಪಕ ಪ್ರವೀಣ್ ಭಾರ್ಗವ್, ವನ್ಯಜೀವಿಗಳ ಸಂರಕ್ಷಣೆ ಕುರಿತು ತಮಗೆ ಅರಿವು ಮೂಡಿಸಿದ್ದ ಕೆ.ಎಂ.ಚಿಣ್ಣಪ್ಪ ಅವರು ತನಗೆ ಗುರುಗಳಾಗಿದ್ದರು ಎಂದು ಸ್ಮರಿಸಿದರು. ವನ್ಯಜೀವಿ ಸಂರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದ ಕೆ.ಎಂ.ಚಿಣ್ಣಪ್ಪ ಎಂಬ ದಿಗ್ಗಜರನ್ನು ನಾವಿಂದು ಕಳೆದುಕೊಂಡಿದ್ದೇವೆ ಎಂದು ಸಂತಾಪ ವ್ಯಕ್ತಪಡಿಸಿದರು.

ಇಂಗ್ಲೆಂಡ್ ವಿರುದ್ಧ ಟೆಸ್ಟ್ ಸರಣಿ ಗೆದ್ದ ಭಾರತ

ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 3–1 ಅಂತರದ ಮುನ್ನಡೆ

ರಾಂಚಿ, ಫೆ.26– ಒತ್ತಡಕ್ಕೆ ಸಿಲುಕಿದರೂ ಪುಟಿದೆದ್ದು ಪ್ರವಾಸಿ ಇಂಗ್ಲೆಂಡ್‌ಗೆ ತಿರುಗೇಟು ನೀಡಿದ ಭಾರತ ರಾಂಚಿ ಟೆಸ್ಟ್ ಪಂದ್ಯವನ್ನು 5 ವಿಕೆಟ್‌ಗಳಿಂದ ಗೆದ್ದುಕೊಂಡಿದೆ. ಆ ಮೂಲಕ 5 ಪಂದ್ಯಗಳ ಟೆಸ್ಟ್ ಸರಣಿಯನ್ನು ಇನ್ನು ಒಂದು ಪಂದ್ಯ ಬಾಕಿ ಇರುವಾಗಲೇ 3–1 ರಿಂದ ಸರಣಿಯನ್ನು ತನ್ನದಾಗಿಸಿಕೊಂಡಿದೆ.




192 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ್ದ ಭಾರತ ಮೂರನೇ ದಿನದಾಟದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೇ 40 ರನ್ ಗಳಿಸಿತ್ತು. ನಾಲ್ಕನೇ ದಿನದಾಟದ ಆರಂಭದಲ್ಲಿ ಭಾರತ 10 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಬೇಕಿತ್ತು. ಇಂದು ಇನ್ನಿಂಗ್ಸ್ ಮುಂದುವರೆಸಿದ ರೋಹಿತ್ ಶರ್ಮಾ ಹಾಗೂ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 84 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ 37 ರನ್ ಗಳಿಸಿದ್ದ ಜೈಸ್ವಾಲ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ 55 ರನ್ ಗಳಿಸಿದ್ದ ರೋಹಿತ್ ಶರ್ಮಾ ಹಾಗೂ ಶೂನ್ಯಕ್ಕೆ ರಜತ್ ಪಾಟೀದಾರ್ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ನಂತರ ಬಂದ ಜಡೇಜಾ, ಸರ್ಫರಾಜ್ ಖಾನ್ ಬಹುಬೇಗ ಔಟಾದರು. ಈ ವೇಳೆ 6ನೇ ವಿಕೆಟ್‌ಗೆ ಜೊತೆಯಾದ ಶುಭಮನ್ ಗಿಲ್ ಹಾಗೂ ಧ್ರುವ್ ಜುರೆಲ್ 72 ರನ್ ಜೊತೆಯಾಟವಾಡಿ ತಂಡಕ್ಕೆ ಸ್ಮರಣೀಯ ಜಯ ತಂದುಕೊಟ್ಟರು. ಶುಭಮನ್ ಗಿಲ್ ಅಜೇಯ 52, ಧ್ರುವ್ ಜುರೆಲ್ 39 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಭಾರತ 5 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಇಂಗ್ಲೆಂಡ್ ಪರ ಶೋಯೆಬ್ ಬಶೀರ್ 3, ಜೋ ರೂಟ್, ಟಾಮ್ ಹಾರ್ಟ್ಲಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್ ಪಂದ್ಯ ಧರ್ಮಶಾಲಾದ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಮಾ.7ರಂದು ಶುರುವಾಗಲಿದೆ. ರಾಂಚಿ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಭರ್ಜರಿ ಬ್ಯಾಟಿಂಗ್ ನಡೆಸಿದ ಧ್ರುವ್ ಜುರೆಲ್‌ಗೆ ಪಂದ್ಯಶ್ರೇಷ್ಠ ಗೌರವ ಒಲಿಯಿತು.

ಸತತ 17 ಟೆಸ್ಟ್ ಸರಣಿ ಗೆದ್ದ ಭಾರತ: ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿ ಗೆಲುವಿನೊಂದಿಗೆ ಭಾರತ ತವರಿನಲ್ಲಿ ಸತತ 17 ಟೆಸ್ಟ್ ಸರಣಿಗಳನ್ನು ಗೆದ್ದ ಸಾಧನೆ ಮಾಡಿದೆ. 2013ರಿಂದ 2024ರ ವರೆಗೆ ಭಾರತ ತವರಿನ ಅಂಗಣದಲ್ಲಿ ಯಾವುದೇ ಟೆಸ್ಟ್ ಸರಣಿ ಸೋತಿಲ್ಲ. 2013–14ರ ಭಾರತ ಪ್ರವಾಸದಲ್ಲಿ ಇಂಗ್ಲೆಂಡ್ 4 ಟೆಸ್ಟ್‌ಗಳ ಪಂದ್ಯಗಳ ಸರಣಿಯನ್ನು 2–1 ಅಂತರದಲ್ಲಿ ಗೆದ್ದುಕೊಂಡಿತ್ತು. ಇದಾದ ಬಳಿಕ ಯಾವುದೇ ತಂಡದಿಂದ ಭಾರತದಲ್ಲಿ ಟೆಸ್ಟ್ ಸರಣಿ ಗೆಲ್ಲಲು ಸಾಧ್ಯವಾಗಿಲ್ಲ. ಈ ಬಾರಿ ಮೊದಲ ಪಂದ್ಯ ಗೆದ್ದು ಇಂಗ್ಲೆಂಡ್ ಇತಿಹಾಸ ರಚಿಸುವ ಕನಸು ಕಂಡಿತ್ತು. ಆದರೆ 4 ಪಂದ್ಯಗಳ ಮುಕ್ತಾಯಕ್ಕೆ 1–3 ಅಂತರದಲ್ಲಿ ಸೋಲುಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರಿಂದ 41,000 ಕೋಟಿ ರೂ. ರೈಲ್ವೆ ಯೋಜನೆಗಳಿಗೆ ಶಂಕುಸ್ಥಾಪನೆ

ಮೈಸೂರು ವಿಭಾಗದ 12 ನಿಲ್ದಾಣಗಳು, ಅಮೃತ ಭಾರತ್ ಸ್ಟೇಷನ್‌ಗಳು ಸೇರಿ ಒಟ್ಟು 367.24 ಕೋಟಿ ರೂ. ವೆಚ್ಚದ ಯೋಜನೆಗಳು; ದಡದಹಳ್ಳಿಯಲ್ಲಿ ಆರ್‌ಯುಬಿಗೆ ಸಂಸದ ಪ್ರತಾಪ್ ಸಿಂಹ ಚಾಲನೆ





ಅಶೋಕಪುರಂ–ಕಡಕೊಳ ರೈಲು ನಿಲ್ದಾಣ ನಡುವೆ ದಡದಹಳ್ಳಿಯಲ್ಲಿ ನಿರ್ಮಿಸಿರುವ ರೋಡ್ ಅಂಡರ್ ಬ್ರಿಡ್ಜ್ (ಆರ್‌ಯುಬಿ) ಅನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೋಮವಾರ ವರ್ಚ್ಯುಯಲ್ ಮೂಲಕ ಉದ್ಘಾಟಿಸಿದರು. ಸಂಸದ ಪ್ರತಾಪ್ ಸಿಂಹ ಅವರು ದಡದಹಳ್ಳಿಯಲ್ಲಿ ಯೋಜನೆಗಳ ಫಲಕ ಅನಾವರಣಗೊಳಿಸಿದ್ದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ. 26 (ಆರ್‌ಕೆ)– ಅಮೃತ ಭಾರತ್ ಸ್ಟೇಷನ್ ಯೋಜನೆಯಡಿ ಕೈಗೊಂಡಿರುವ 41,000 ಕೋಟಿ ರೂ. ವೆಚ್ಚದ 554 ರೈಲು ನಿಲ್ದಾಣಗಳ ಅಭಿವೃದ್ಧಿ ಮತ್ತು 1,500 ರೋಡ್ ಓವರ್ ಬ್ರಿಡ್ಜ್ (ಆರ್‌ಓಬಿ)/ರೋಡ್ ಅಂಡರ್ ಬ್ರಿಡ್ಜ್ (ಆರ್‌ಯುಬಿ) ಯೋಜನೆಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಇಂದು ವರ್ಚ್ಯುಯಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು ವಿಭಾಗದಲ್ಲಿ ಕೈಗೊಂಡಿರುವ 367.24 ಕೋಟಿ ರೂ. ವೆಚ್ಚದ ವಿವಿಧ ರೈಲ್ವೆ ಅಭಿವೃದ್ಧಿ ಯೋಜನೆಗಳಿಗೂ ಪ್ರಧಾನ ಮಂತ್ರಿಗಳು ಇದೇ ವೇಳೆ ವರ್ಚ್ಯುಯಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು. ನೈಋತ್ಯ ರೈಲ್ವೆ ಮೈಸೂರು ವಿಭಾಗದ 12 ರೈಲು ನಿಲ್ದಾಣಗಳನ್ನು ಅಮೃತ ಭಾರತ್ ಸ್ಟೇಷನ್ಸ್ ಯೋಜನೆಯಡಿ ಅಭಿವೃದ್ಧಿ ಸೇರಿದಂತೆ 367.24 ಕೋಟಿ ರೂ. ಯೋಜನೆ ಹಾಗೂ ಅಶೋಕಪುರಂ ಮತ್ತು ಕಡಕೊಳ ರೈಲು ನಿಲ್ದಾಣ ನಡುವೆ ದಡದಹಳ್ಳಿಯಲ್ಲಿ ನಿರ್ಮಿಸಿರುವ ರೋಡ್ ಅಂಡರ್ ಬ್ರಿಡ್ಜ್ ಅನ್ನು ಮೋದಿ ಅವರು ಉದ್ಘಾಟಿಸಿದರು.

ಅಮೃತ ಭಾರತ್ ಸ್ಟೇಷನ್ಸ್ ಯೋಜನೆಯು ಪ್ರಸ್ತುತ ಇರುವ ರೈಲ್ವೆ ನಿಲ್ದಾಣಗಳನ್ನು ವೈಬ್ರಂಟ್ ಸಿಟಿ ಸೆಂಟರ್‌ಗಳನ್ನಾಗಿ ಪರಿವರ್ತಿಸಿ ವಿಭಾಗದ ನಗರಗಳಿಗೆ ಸಂಪರ್ಕ ಕಲ್ಪಿಸುವುದಾಗಿದ್ದು, ಪ್ರಯಾಣಿಕರಿಗೆ ಅಗತ್ಯ ಮೂಲಸೌಕರ್ಯ ಒದಗಿಸಿ ಪ್ರಯಾಣಿಕರ ಸ್ನೇಹಿಯನ್ನಾಗಿ ಮಾಡುವ ಉದ್ದೇಶ ಪ್ರಧಾನ ಮಂತ್ರಿಗಳದ್ದಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. ದಡದಹಳ್ಳಿ ಆರ್‌ಯುಬಿ ಜೊತೆಗೆ 63.9 ಕೋಟಿ ರೂ. ವೆಚ್ಚದಲ್ಲಿ ಮೈಸೂರು ವಿಭಾಗದ ಇತರ 7 ಆರ್‌ಯುಬಿಗಳು, 4 ಆರ್‌ಓಬಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಶೌಚಾಲಯ, ಲಿಫ್ಟ್ ಅಳವಡಿಕೆ, ವಿಶ್ರಾಂತಿ ಗೃಹ, ಫುಟ್ ಓವರ್‌ಬ್ರಿಡ್ಜ್ ಸೇರಿದಂತೆ ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ತುಮಕೂರು ಮತ್ತು ಹಾಸನ ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಮೈಸೂರು ರೈಲು ನಿಲ್ದಾಣವನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗಿದ್ದು, ಇದೀಗ ಅಶೋಕಪುರಂ ರೈಲ್ವೆ ಸ್ಟೇಷನ್‌ನಲ್ಲಿ ಟಿಕೆಟ್ ಕೌಂಟರ್, ಫುಟ್ ಓವರ್ ಬ್ರಿಡ್ಜ್, ಪಶ್ಚಿಮ ಭಾಗದ ಪ್ಲಾಟ್‌ಫಾರಂ, ಸೆಲ್ಫಿ ಪಾಯಿಂಟ್‌ಗಳು, ವಾಹನ ನಿಲುಗಡೆ ಸೇರಿದಂತೆ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಪ್ರತಾಪ್ ಸಿಂಹ ಇದೇ ಸಂದರ್ಭ ತಿಳಿಸಿದರು.

ಮೈಸೂರು–ಕೊಡಗು ರೈಲು ಮಾರ್ಗಕ್ಕೆ ರಾಜ್ಯ ಸರ್ಕಾರ ಭೂಸ್ವಾಧೀನ ಮಾಡಬೇಕು: ಸಂಸದ ಪ್ರತಾಪ್ ಸಿಂಹ ಆಗ್ರಹ

ಮೈಸೂರು, ಫೆ.26(ಆರ್‌ಕೆ)–ಮೈಸೂರು–ಕೊಡಗು ರೈಲು ಮಾರ್ಗಕ್ಕೆ ರಾಜ್ಯ ಸರ್ಕಾರ ತಕ್ಷಣ ಭೂಮಿ ಸ್ವಾಧೀನ ಮಾಡಿಕೊಡಬೇಕು ಎಂದು ಸಂಸದ ಪ್ರತಾಪ್ ಸಿಂಹ ಆಗ್ರಹಿಸಿದ್ದಾರೆ.

ರೈಲು ಮಾರ್ಗಕ್ಕೆ ಸಮೀಕ್ಷೆ ಪೂರ್ಣಗೊಂಡು ಸಮಗ್ರ ಯೋಜನಾ ವರದಿ (ಡಿಪಿಆರ್)ಯೂ ಸಿದ್ಧವಾಗಿದೆ. ರಾಜ್ಯ ಸರ್ಕಾರ ಭೂಮಿ ಸ್ವಾಧೀನಪಡಿಸಿ ಹಸ್ತಾಂತರಿಸಿದರೆ ನಾವು ಕಾಮಗಾರಿ ಕೈಗೆತ್ತಿಕೊಳ್ಳಲು ಸಿದ್ಧರಿದ್ದೇವೆ ಎಂದ ಅವರು, ಸಿದ್ದರಾಮಯ್ಯ ಸರ್ಕಾರ ನಮಗೆ ಉಚಿತವಾಗಿ ಭೂಮಿ ಹಸ್ತಾಂತರಿಸಬೇಕು ಎಂದರು. ಮೈಸೂರಿನವರೇ ಆಗಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಯೋಜನೆಗೆ ಭೂಸ್ವಾಧೀನಪಡಿಸಿ ಕೂಡಲೇ ಹಸ್ತಾಂತರಿಸುವರೆಂಬ ವಿಶ್ವಾಸವಿದೆ. ಅತೀ ಶೀಘ್ರ ಮೈಸೂರು–ಕೊಡಗು ರೈಲು ಮಾರ್ಗವನ್ನು ಸಾಕಾರಗೊಳಿಸುವುದಾಗಿಯೂ ಅವರು ಇದೇ ಸಂದರ್ಭ ನುಡಿದರು. ಮೈಸೂರಿನ ಕ್ರಾಫರ್ಡ್ ಭವನ ಬಳಿ ಕುಕ್ಕರಹಳ್ಳಿ–ಭೋಗಾದಿ ರಸ್ತೆಯಲ್ಲಿ ಆರ್‌ಯುಬಿ ನಿರ್ಮಿಸಲು ಕೇಂದ್ರವು 42.14 ಕೋಟಿ ರೂ. ಮಂಜೂರು ಮಾಡಿದೆ. ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಜಂಕ್ಷನ್ ಬಳಿಯೂ 42.88 ಕೋಟಿ ರೂ. ವೆಚ್ಚದ ಆರ್‌ಯುಬಿ ನಿರ್ಮಿಸಲು ಉದ್ದೇಶಿಸಿದ್ದು, 5 ಲೆವೆಲ್ ಕ್ರಾಸಿಂಗ್ ಕಾಮಗಾರಿ ವೇಗವಾಗಿ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ಸಿಬಿಎಸ್‌ಇ ಪಿಯುಸಿ ಪರೀಕ್ಷೆ: ರಾಜ್ಯದಿಂದ 20 ಆಂತರಿಕ ಅಂಕ ಸೇರ್ಪಡೆ

ಉಡುಪಿ: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (CBSE) ಮಾದರಿಯಲ್ಲಿ ಕರ್ನಾಟಕ ಸರ್ಕಾರವು 2023–24ನೇ ಶೈಕ್ಷಣಿಕ ವರ್ಷದಿಂದ ಪ್ರಾಯೋಗಿಕ ಅಲ್ಲದ ವಿಷಯಗಳಲ್ಲಿ ಪಿಯುಸಿ ಪರೀಕ್ಷೆಗಳಿಗೆ 20 ಆಂತರಿಕ ಅಂಕಗಳನ್ನು ನಿಗದಿಪಡಿಸಲು ನಿರ್ಧರಿಸಿದೆ. ಈ ವರ್ಷದಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸೂಚನೆ ಮೇರೆಗೆ ಜಿಲ್ಲಾ ಮಟ್ಟದಲ್ಲಿ ಪ್ರಾಂಶುಪಾಲರು ಹಾಗೂ ಇಬ್ಬರು ಉಪನ್ಯಾಸಕರನ್ನು ಒಳಗೊಂಡ ಸಮಿತಿಗಳನ್ನು ರಚಿಸಲು ರಾಜ್ಯ ಶಿಕ್ಷಣ ಇಲಾಖೆ ಮುಂದಾಗಿದೆ ಎಂದು ವರದಿಗಳು ತಿಳಿಸಿವೆ.

ಸರ್ಕಾರದ ಈ ಸಮಿತಿಯ ಸದಸ್ಯರು ಪಿಯುಸಿ ಕಾಲೇಜುಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳು ಪ್ರಾಜೆಕ್ಟ್ ವರ್ಕ್‌ನ ಅಸೈನ್‌ಮೆಂಟ್‌ಗಳನ್ನು ಪೂರ್ಣಗೊಳಿಸಿದ್ದರ ಕುರಿತು, ಉಪನ್ಯಾಸಕರು ಆಂತರಿಕ ಅಂಕ ನಿಗದಿಪಡಿಸಿದ್ದಾರೆಯೇ? ವಿದ್ಯಾರ್ಥಿಗಳು ಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ಸಿಸ್ಟಮ್ (ಎಸ್‌ಎಟಿಎಸ್) ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ, ವಿದ್ಯಾರ್ಥಿಗಳ ಪರಿಶ್ರಮಕ್ಕೆ ನ್ಯಾಯ ಒದಗಿಸಲಾಗಿದೆಯೇ ಎಂಬುದನ್ನು ಪರಿಶೀಲನೆ ನಡೆಸಲಿದ್ದಾರೆ.

ಕಾಲೇಜುಗಳಲ್ಲಿ ಮೌಲ್ಯಮಾಪಕರು ತಮ್ಮ ವಿದ್ಯಾರ್ಥಿಗಳಿಗೆ ಉದಾರವಾಗಿ ಅಂಕಗಳನ್ನು ನೀಡುವ ಕುರಿತಂತೆಯೂ ಸದಸ್ಯರು ಪರಿಶೀಲನೆ ನಡೆಸಲಿದ್ದಾರೆ.

ಕಾವೇರಿ 2.0 ಸರ್ವರ್‌ಗೆ ಪೂರ್ಣ ಗ್ರಹಣ

ಸಬ್ ರಿಜಿಸ್ಟ್ರಾರ್ ಕಚೇರಿಗಳ ಕಾರ್ಯ ಸಂಪೂರ್ಣ ಸ್ಥಗಿತ

ಮೈಸೂರು, ಫೆ. 26(ಆರ್‌ಕೆ)– ಕಾವೇರಿ 2.0 ಸರ್ವರ್ ಸಮಸ್ಯೆ ಬಗೆಹರಿಯದ ಕಾರಣ, ಐದನೇ ದಿನವಾದ ಇಂದು ಮೈಸೂರು ನಗರ ಸೇರಿದಂತೆ ಜಿಲ್ಲೆಯ ಎಲ್ಲಾ 14 ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲೂ ಯಾವುದೇ ಕಾರ್ಯ ಚಟುವಟಿಕೆಗಳು ನಡೆಯಲಿಲ್ಲ.

ರಾಜ್ಯ ಸರ್ಕಾರದ ಕಂದಾಯ ಇಲಾಖೆಯಡಿ ಬರುವ ಸ್ಟ್ಯಾಂಪ್ ಅಂಡ್ ರಿಜಿಸ್ಟ್ರೇಷನ್ ವ್ಯವಸ್ಥೆಯಲ್ಲಿ ಸ್ವತ್ತುಗಳ ಕ್ರಯ, ಗುತ್ತಿಗೆ ಕರಾರು, ಅಡಮಾನ ನೋಂದಣಿ, ಬಾಡಿಗೆ ಕರಾರು, ವಿವಾಹ ನೋಂದಣಿ, ಇಸಿ, ರಿಜಿಸ್ಟ್ರೇಷನ್ ದಾಖಲೆ ಪ್ರತಿ ನೀಡುವ ಪ್ರಕ್ರಿಯೆಗೆ ಆನ್‌ಲೈನ್ ಪದ್ಧತಿ ಜಾರಿಗೆ ತಂದಿದ್ದು, 2.0 ಸಾಫ್ಟ್‌ವೇರ್ ಅನ್ನು ಬಳಸಲಾಗುತ್ತಿತ್ತು.

ರಿಜಿಸ್ಟ್ರೇಷನ್ ಮತ್ತು ಸಿಟಿಜನ್ ಲಾಗಿನ್‌ಗಳ ಮೂಲಕ ನೋಂದಣಿ ಪ್ರಕ್ರಿಯೆ ನಡೆಯುತ್ತಿತ್ತು. ಇಡೀ ರಾಜ್ಯಾದ್ಯಂತ 2.0 ಸರ್ವರ್ ಕೈಕೊಟ್ಟ ಕಾರಣ ಕಳೆದ 5 ಕೆಲಸದ ದಿನಗಳಿಂದ ನೋಂದಣಿ ಕಾರ್ಯ ಸಂಪೂರ್ಣ ಸ್ಥಗಿತಗೊಂಡು ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂ. ಆದಾಯ ಖೋತಾ ಆಗಿರುವುದಲ್ಲದೇ, ಸಾರ್ವಜನಿಕರಿಗೆ ತೀವ್ರ ತೊಂದರೆಯಾಗಿದೆ.

ಆದರೆ, ಕಂದಾಯ ಇಲಾಖೆಯು 2.0 ಸಾಫ್ಟ್‌ವೇರ್ ಲೋಪ ಸರಿಪಡಿಸುವುದಾಗಲೀ ಅಥವಾ ಈ ಕುರಿತು ಉಪ ನೋಂದಣಾಧಿಕಾರಿಗಳಿಗೆ ಮಾಹಿತಿ ನೀಡುವ ಗೋಜಿಗೆ ಹೋಗದ ಕಾರಣ, ಸಾರ್ವಜನಿಕರಿಗೆ ಉಂಟಾಗುತ್ತಿರುವ ಸಮಸ್ಯೆ ಹೇಗೆ ಪರಿಹರಿಸಬೇಕೆಂದು ತಿಳಿಯದೇ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಂಗಾಲಾಗಿದ್ದಾರೆ.



ಮೈಸೂರಿನ ನಜರ್‌ಬಾದ್‌ನಲ್ಲಿರುವ ಉತ್ತರ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಸರ್ವರ್ ಸಮಸ್ಯೆಯಿಂದಾಗಿ ಕಾದು ಕುಳಿತಿರುವ ಸಾರ್ವಜನಿಕರು.

ಪರಿಣಾಮ ಮೈಸೂರು ನಗರದ ಡಾ.ರಾಜ್ ಕುಮಾರ್ ರಸ್ತೆಯ ಪೂರ್ವ, ವಿಜಯನಗರ ವಾಟರ್ ಟ್ಯಾಂಕ್ ರಸ್ತೆಯ ಪಶ್ಚಿಮ, ನಜರ್‌ಬಾದ್‌ನ ಮಿನಿ ವಿಧಾನ ಸೌಧದ ಉತ್ತರ, ರಾಮಕೃಷ್ಣನಗರದ ದಕ್ಷಿಣ, ಜೆಎಲ್‌ಬಿ ರಸ್ತೆಯ ಮುಡಾ ಕಚೇರಿ, ತಿ.ನರಸೀಪುರ, ಬನ್ನೂರು, ನಂಜನಗೂಡು, ಹೆಚ್.ಡಿ.ಕೋಟೆ, ಹುಣಸೂರು, ಬೆಟ್ಟದಪುರ, ಪಿರಿಯಾಪಟ್ಟಣ, ಮಿರ್ಲೆ ಹಾಗೂ ಕೆ.ಆರ್.ನಗರ ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಬೆಳಗ್ಗೆಯಿಂದ ಸಂಜೆವರೆಗೂ ಕಾದಿದ್ದ ಸಾರ್ವಜನಿಕರು ಸ್ವತ್ತುಗಳ ನೋಂದಣಿಯಾಗದೇ ನಿರಾಶರಾಗಿ ಹಿಂದಿರುಗುವಂತಾಗಿದೆ. ಈ ಮೊದಲಿದ್ದ ಕಾವೇರಿ 1.0 ಸಾಫ್ಟ್ ವೇರ್ ಅನ್ನು, 2023ರ ಮಾರ್ಚ್ 2ರಿಂದ ಕಾವೇರಿ 2.0 ಆಗಿ ಉನ್ನತೀಕರಿಸಿದ ಸಾಫ್ಟ್‌ವೇರ್ ಅನ್ನು ಅನುಸರಿಸಲಾರಂಭಿಸಲಾಗಿತ್ತು. ಹೊಸ ಸಾಫ್ಟ್‌ವೇರ್ ತ್ವರಿತವಾಗಿ ಕಾರ್ಯನಿರ್ವಹಿಸುತ್ತಿದ್ದರಿಂದ ಸ್ವತ್ತುಗಳ ನೋಂದಣಿ ಕಾರ್ಯ 10 ನಿಮಿಷದಲ್ಲೇ ಮುಗಿಯುತ್ತಿತ್ತು. ಇದೀಗ ಸಾಫ್ಟ್‌ವೇರ್‌ನಲ್ಲಿ ತಾಂತ್ರಿಕ ದೋಷ ಕಂಡುಬಂದಿದ್ದು, ಅದನ್ನು ಸರಿಪಡಿಸಲಾಗದೇ ರಾಜ್ಯಾದ್ಯಂತ ಸಾರ್ವಜನಿಕರು ಪರಿತಪಿಸುವಂತಾಗಿದೆ.

ಮಾ.28, ಶ್ರೀವಿಧುಶೇಖರ ಭಾರತೀ ಸ್ವಾಮೀಜಿ ಚಾ.ನಗರದ ಹೆಬ್ಬಸೂರು ಶಂಕರ ಮಠಕ್ಕೆ ಆಗಮನ

ಚಾಮರಾಜನಗರ, ಫೆ.26– ತಾಲೂಕಿನ ಹೆಬ್ಬಸೂರಿನಲ್ಲಿರುವ ಶ್ರೀ ಶೃಂಗೇರಿ ಶಂಕರ ಮಠಕ್ಕೆ ಶೃಂಗೇರಿ ಮಠದ ಶ್ರೀ ದಕ್ಷಿಣಾಮ್ನಾಯ ಶಾರದಾ ಪೀಠಾಧೀಶ್ವರ ಶ್ರೀ ಅನಂತಶ್ರೀ ವಿಭೂಷಿತ



ಶ್ರೀವಿಧುಶೇಖರ ಭಾರತೀ ಸ್ವಾಮೀಜಿಯವರು ಮಾ.28 ರಂದು ಆಗಮಿಸಲಿದ್ದು, 2 ದಿನ ಇಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ.

ಇದೇ ಸಂದರ್ಭದಲ್ಲಿ ಶ್ರೀಗಳು ನೂತನ 'ಶ್ರೀಶಾರದಾ ಕೃಪ' ಕಟ್ಟಡವನ್ನು ಲೋಕಾರ್ಪಣೆಗೊಳಿಸಲಿದ್ದು, ಮಾ.30ರಂದು ಮೈಸೂರಿಗೆ ವಿಜಯ ಯಾತ್ರೆ ಕೈಗೊಳ್ಳಲಿದ್ದಾರೆ. ಮಾ.23ರಿಂದ ಶ್ರೀ ಮಠದಲ್ಲಿ ಶತಚಂಡಿಕಾಯಾಗ, ಋಗ್ವೇದ ಸಂಹಿತಾಯಾಗ, ಶ್ರೀ ಶಾರದಾ, ಚಂದ್ರಮೌಳೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸೇರಿದಂತೆ ಧಾರ್ಮಿಕ ಕೈಂಕರ್ಯಗಳು ನೆರವೇರಲಿವೆ ಎಂದು ಶ್ರೀಮಠದ ಧರ್ಮಾಧಿಕಾರಿ ಹೆಚ್.ಎಸ್.ಶ್ರೀಧರ್ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವನಿಧಿ ಜೊತೆಗೆ ಯುವ ಜನತೆಗೆ ಉದ್ಯೋಗ ಸೃಷ್ಟಿ, ಅದಕ್ಕೆ ಪೂರಕ ತರಬೇತಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ಯುವ ಸಮೃದ್ಧಿ ಸಮ್ಮೇಳನ, ಉದ್ಯೋಗ ಮೇಳ ಆಯೋಜನೆ
- ಯುವನಿಧಿಯಡಿ ನೋಂದಾಯಿಸಿಕೊಂಡವರಿಗೆ ಕೌಶಲ್ಯಾಭಿವೃದ್ಧಿ ತರಬೇತಿ

ಬೆಂಗಳೂರು, ಫೆ.26(ಕೆಎಂಶಿ)–ನಿರುದ್ಯೋಗಿ ಯುವ ಜನರಿಗೆ ಯುವನಿಧಿ ಜೊತೆಗೆ ಉದ್ಯೋಗ ಸೃಷ್ಟಿ ಮತ್ತು ಉದ್ಯೋಗಕ್ಕೆ ಅಗತ್ಯ ತರಬೇತಿಯನ್ನೂ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಬೃಹತ್ ಯುವಸಮೃದ್ಧಿ ಸಮ್ಮೇಳನ ಮತ್ತು ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವಿದ್ಯಾವಂತ ನಿರುದ್ಯೋಗಿಗಳಿಗೆ ಯುವನಿಧಿಯಡಿ ನಿರುದ್ಯೋಗ ಭತ್ಯೆ ನೀಡುತ್ತಿದೆ, ಜೊತೆಗೆ ಉದ್ಯೋಗಗಳ ಸೃಷ್ಟಿ ಅಲ್ಲದೆ, ಉದ್ಯೋಗಕ್ಕೆ ಅಗತ್ಯವಿರುವ ಕೌಶಲ್ಯ ತರಬೇತಿಯನ್ನೂ ನೀಡಲಾಗುತ್ತಿದೆ, ಇದು ಸರ್ಕಾರ ಯುವಜನರಿಗೆ ನೀಡುವ ಅಭಯ ಎಂದರು. ಹೊಸ ಹೊಸ ಉದ್ಯೋಗ ಸೃಷ್ಟಿ ಮತ್ತು ಅದಕ್ಕೆ ಅಗತ್ಯವಿರುವ ತರಬೇತಿಯನ್ನೂ ಸರ್ಕಾರ ನೀಡುತ್ತಿದ್ದು, ಈ ಗುರಿ ಸಾಧನೆಗೆ ಈಗಿರುವ ಸರ್ಕಾರಿ ತರಬೇತಿ ಕೇಂದ್ರಗಳ ಜೊತೆಗೆ ಹೊಸದಾಗಿ ಇನ್ನಷ್ಟು ಡಿಜಿಟಲೀಕೃತ ಸರ್ಕಾರಿ ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುವುದು ಎಂದು ಘೋಷಣೆ ಮಾಡಿದರು. ನಿರುದ್ಯೋಗ ದೇಶದ ಪ್ರಮುಖ ಸಮಸ್ಯೆಯಾಗಿದೆ, ಪ್ರತಿವರ್ಷ ನಿರುದ್ಯೋಗ ಪ್ರಮಾಣ ಬೃಹತ್ತಾಗಿ ಬೆಳೆಯುತ್ತಿದ್ದು ಶೇ.8.40ಕ್ಕೆ ಏರಿಕೆಯಾಗಿದೆ.

ಕೇಂದ್ರ ಇದ್ದ ಉದ್ಯೋಗ ಕಸಿದುಕೊಂಡಿದೆ: ಪ್ರಧಾನಿ ನರೇಂದ್ರ ಮೋದಿ, ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ





2014ರಲ್ಲಿ ಭರವಸೆ ನೀಡುವ ಮೂಲಕ ಯುವ ಸಮೂಹದ ಮತ ಗಳಿಸಿದರು, ಇದುವರೆಗೆ 10 ವರ್ಷದಲ್ಲಿ 20 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು ಆದರೆ, ಇದ್ದ ಉದ್ಯೋಗಗಳನ್ನೂ ಕಸಿದುಕೊಂಡಿದ್ದಾರೆ ಎಂದು ಟೀಕಿಸಿದರು. ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಮಾತನಾಡಿ, ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಇಂಜಿನಿಯರಿಂಗ್, ಐಟಿಐ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಹತೆ ಹೊಂದಿದ ಉದ್ಯೋಗಾಕಾಂಕ್ಷಿಗಳಿಗೆ ಮೇಳದಲ್ಲಿ ಒಂದು ಲಕ್ಷ ಉದ್ಯೋಗ ನೀಡುವ ಗುರಿ ಹೊಂದಲಾಗಿದೆ ಎಂದರು.

ನಿರುದ್ಯೋಗಿಗಳಿಗೆ ಇದ್ದಲ್ಲೇ ಉದ್ಯೋಗ: ನಿರುದ್ಯೋಗಿ ಯುವಜನರಿಗೆ ಸ್ಥಳದಲ್ಲೇ ಉದ್ಯೋಗ ನೀಡಬೇಕು ಎಂಬುದು ಸರ್ಕಾರದ ಪ್ರಮುಖ ಆದ್ಯತೆಯಲ್ಲೊಂದಾಗಿದ್ದು, ಉದ್ಯೋಗದ ನಿರೀಕ್ಷೆಯಲ್ಲಿದ್ದ ಯುವಜನರಿಗೆ ಸ್ಥಳದಲ್ಲೇ ಉದ್ಯೋಗ ಒದಗಿಸಲು ಯುವಜನ ಸಮೃದ್ಧಿ ಸಮ್ಮೇಳನ ಏರ್ಪಡಿಸಿರುವುದು ರಾಜ್ಯದ ಇತಿಹಾಸದಲ್ಲೇ ಚಾರಿತ್ರಿಕ ದಾಖಲೆಯಾಗಲಿದೆ. ಉದ್ಯೋಗ ನಿರೀಕ್ಷಿಸಿ ಮೇಳದಲ್ಲಿ 75 ಸಾವಿರ ಯುವಜನರು ಹೆಸರು ನೋಂದಣಿ ಮಾಡಿಸಿಕೊಂಡಿರುವುದು ದೇಶದ ಇತಿಹಾಸದಲ್ಲೇ ದಾಖಲೆಯಾಗಿದೆ. ಎಸ್ಸೆಸ್ಸೆಲ್ಸಿಯಿಂದ ಸ್ನಾತಕೋತ್ತರದವರೆಗೂ ವಿವಿಧ ವಿದ್ಯಾರ್ಹತೆ ಹೊಂದಿರುವವರು ಮೇಳದಲ್ಲಿ ಭಾಗವಹಿಸಿದ್ದು, ಒಂದು ಲಕ್ಷ ಉದ್ಯೋಗಗಳ ನೇಮಕಾತಿಗೆ ಖಾಸಗಿ ಕಂಪನಿಗಳು ಮುಂದೆ ಬಂದಿವೆ, ಇದು ಸಹಾ ದಾಖಲೆಯಾಗಿದೆ. ಪಂಚ ಗ್ಯಾರಂಟಿಗಳಲ್ಲಿ ಒಂದಾಗಿರುವ ಯುವನಿಧಿ ಯೋಜನೆ ನಿರುದ್ಯೋಗಿ ಯುವ ಸಮುದಾಯದ ಬೆನ್ನೆಲುಬಾಗಿದೆ, 1.40 ಲಕ್ಷ ಪದವೀಧರರು ಹಾಗೂ ಡಿಪ್ಲೊಮಾದಾರರ ಬ್ಯಾಂಕ್ ಖಾತೆಗಳಿಗೆ ಯೋಜನೆಯ ಹಣ ಸಂದಾಯವಾಗುತ್ತಿದೆ. ಸರ್ಕಾರ ಯುವ ಸಮುದಾಯದ ಜೊತೆಗಿದೆ ಎಂದು ಭರವಸೆ ನೀಡಿದರು.

ಯುವನಿಧಿ ಯೋಜನೆಯಡಿ ನೋಂದಣಿ ಮಾಡಿಸಿಕೊಂಡವರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುತ್ತಿದೆ, ಇದರೊಂದಿಗೆ ಉದ್ಯೋಗಿಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುವುದು, ಇದು ನೆಪಮಾತ್ರದ ಉದ್ಯೋಗ ಮೇಳವಲ್ಲ, ಎಲ್ಲರಿಗೂ ಉದ್ಯೋಗ ಕೊಡಿಸಲಾಗುತ್ತಿದೆ. ಮೇಳದಲ್ಲಿ ಉದ್ಯೋಗ ದೊರೆಯದ ನೋಂದಾಯಿತರ ದತ್ತಾಂಶಗಳನ್ನು ಆಧರಿಸಿ, ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅಗತ್ಯ ತರಬೇತಿ ಹಾಗೂ ಕೌಶಲ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು, ದೇಶದ ಎಲ್ಲಾ ರಾಜ್ಯಕ್ಕಿಂತ ಕರ್ನಾಟಕ ಮಾದರಿಯಾಗಿ ನಿರುದ್ಯೋಗ ನಿವಾರಣೆಗೆ ಕ್ರಮ ಕೈಗೊಳ್ಳುತ್ತಿದೆ. ಎರಡು ದಿನಗಳ ಉದ್ಯೋಗ ಮೇಳದಲ್ಲಿ ಯುವಜನರ ಸಮಸ್ಯೆಗಳಿಗೆ ಸರ್ಕಾರಿ ಯಂತ್ರ ಸ್ಪಂದಿಸಲಿದೆ. ಮುಖ್ಯಮಂತ್ರಿ ಅವರು ಬಜೆಟ್‌ನಲ್ಲಿ ಶಿಕ್ಷಣಕ್ಕಿಂತಲೂ ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದಾರೆ, ಮುಂದಿನ ದಿನಗಳಲ್ಲಿ ಯುವಜನರ ಸಮಗ್ರ ಅಭಿವೃದ್ಧಿಗೆ ಅಗತ್ಯ ಯೋಜನೆಗಳನ್ನು ರೂಪಿಸಲಾಗುವುದು ಎಂದರು. ಮೇಳದಲ್ಲಿ ನೂರಾರು ಉದ್ಯಮಿಗಳು, ಸುಮಾರು 80 ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಯುವ ಸಮೃದ್ಧಿ ಲಾಂಛನ ಅನಾವರಣಗೊಳಿಸಲಾಯಿತು.

ಪ್ರಜಾಪಿತ ಬ್ರಹ್ಮಾಕುಮಾರಿ ವಿವಿಯಿಂದ ಉತ್ತಮ ಕಾರ್ಯ



ವಿರಾಜಪೇಟೆಯ ತಾಲೂಕು ಮೈದಾನದಲ್ಲಿ ಆಯೋಜಿಸಿರುವ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ ಮತ್ತು ಆಧ್ಯಾತ್ಮಿಕ ಚಿತ್ರ ಪ್ರದರ್ಶನಕ್ಕೆ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಚಾಲನೆ ನೀಡಿದರು.

ವಿರಾಜಪೇಟೆ, ಫೆ.26– ಅಜ್ಞಾನದ ಕತ್ತಲನ್ನು ಹೋಗಲಾಡಿಸಿ, ಎಲ್ಲರ ಅಂತರಂಗದಲ್ಲಿ ಜ್ಞಾನದ ಬೆಳಕನ್ನು ಚೆಲ್ಲುವಂತ ಕಾರ್ಯವನ್ನು ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವವಿದ್ಯಾಲಯ ಹಮ್ಮಿಕೊಂಡಿರುವುದು ಉತ್ತಮ ಕಾರ್ಯವಾಗಿದೆ ಎಂದು ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಮೈದಾನದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವಿರಾಜಪೇಟೆ ಶಾಖೆ ಹಾಗೂ ಅಪ್ಪಯ್ಯಸ್ವಾಮಿ ರಸ್ತೆಯ ಜ್ಞಾನಗಂಗಾ ಭವನದ ವತಿಯಿಂದ 88ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ ಪ್ರಯುಕ್ತ ಐದು ದಿನ ಆಯೋಜಿಸಿರುವ ಭಾರತದ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ ಮತ್ತು ಆಧ್ಯಾತ್ಮಿಕ ಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಾನವ ಶಾಂತಿ ನೆಮ್ಮದಿಯಿಂದ ಬದುಕಲು ದ್ವೇಷ, ಅಹಂಕಾರ ದೂರ ಮಾಡಿ, ಎಲ್ಲರನ್ನು ಪ್ರೀತಿ ವಾತ್ಸಲ್ಯದಿಂದ ಕಾಣಬೇಕು. ಧರ್ಮದ ಉಳಿವಿಗಾಗಿ ದೇವರನ್ನು ಪ್ರಾರ್ಥಿಸಬೇಕು. ಜನರಿಗೆ ಅಂತಹ ಅವಕಾಶವನ್ನು ಬ್ರಹ್ಮಾಕುಮಾರಿ ವಿಶ್ವವಿದ್ಯಾಲಯ ಮಾಡಿದೆ ಎಂದರು.

ಮೈಸೂರಿನ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ಮಾತನಾಡಿ, ಮೊದಲ ಬಾರಿಗೆ ಕೊಡಗಿನ ವಿರಾಜಪೇಟೆಯಲ್ಲಿ ಜ್ಯೋತಿರ್ಲಿಂಗಗಳ ಪುಣ್ಯದರ್ಶನ ಮತ್ತು ಆಧ್ಯಾತ್ಮಿಕ ಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಪಾಪವನ್ನು ಹೋಗಲಾಡಿಸಲು ಹಾಗೂ ಲೋಕ ಕಲ್ಯಾಣಕ್ಕಾಗಿ ಭಗವಂತನ ಕಾರ್ಯಗಳು ನಡೆಯುತ್ತಲೇ ಇರುತ್ತವೆ. ಮಾನವ ಜೀವನದಲ್ಲಿ ಏರು–ಪೇರುಗಳಾಗದಂತೆ ಸಮತೋಲನ ಮಾಡಿಕೊಂಡು ಮನಶುದ್ಧಿಯಿಂದ ಶಾಂತಿಯುತ ಜೀವನ ನಡೆಸಲು ನಿತ್ಯ ಕಾಯಕದಲ್ಲಿ ಭಗವಂತನ ದರ್ಶನ ಪಡೆಯುವಂತಾಗಲಿ ಎಂದು ಆಶಿಸಿದರು.

ಹಾಕಿ ತರಬೇತುದಾರ ಪ್ರಿನ್ಸ್ ಕುಂಬಯ್ಯ, ಮೈಸೂರು ಸಂಸ್ಥೆಯ ಬಿ.ಕೆ.ರಂಗನಾಥಣ್ಣ, ಪ್ರಜಾಪಿತ ಬ್ರಹ್ಮಾಕುಮಾರಿ ಮಡಿಕೇರಿಯ ಬಿ.ಕೆ.ಧನಲಕ್ಷ್ಮೀ ಮಾತನಾಡಿದರು. ಇದೇ ವೇಳೆ ಗೋಣಿಕೊಪ್ಪಲಿನ ರಮೇಶ್ ತಂಡ ಹಾಗೂ ಮಟಣಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಮೈಸೂರಿನ ಬಿ.ಕೆ. ಪ್ರಾಣೇಶಣ್ಣ ದ್ವಾದಶ ಲಿಂಗಗಳ ಮಹತ್ವ ತಿಳಿಸಿದರು. ಮೈಸೂರಿನ ಬಿ.ಕೆ.ಯತ್ನಕ್ಕ ತಿಲಕ, ಸಂಸ್ಥೆಯ ವಿರಾಜಪೇಟೆ ಟಿ.ಕೆ. ಕೋಮಲಾಕ್ಕ, ಟಿ.ಕೆ.ಸತೀಶಣ್ಣ ಇದ್ದರು.

ಪರೀಕ್ಷಾ ವಿದ್ಯಾರ್ಥಿಗಳಿಗೆ ಬಸ್ ಕಲ್ಪಿಸಿ

ಕೆಎಸ್‌ಆರ್‌ಟಿಸಿ ಘಟಕ ವ್ಯವಸ್ಥಾಪಕರಿಗೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಸೂಚನೆ

ಮಡಿಕೇರಿ, ಫೆ26–ಮಾ.1ರಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಆರಂಭವಾಗಲಿದ್ದು, ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಕೆಎಸ್‌ಆರ್‌ಟಿಸಿಯ ಮಡಿಕೇರಿ ಘಟಕ ವ್ಯವಸ್ಥಾಪಕರಿಗೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬಸ್‌ಗಳಲ್ಲಿ ಜನದಟ್ಟಣೆ ಹೆಚ್ಚು ಇದೆ ಎಂದು ನಿಲ್ದಾಣದಲ್ಲಿ ಬಸ್ ನಿಲ್ಲಿಸದೆ ಹೋಗಬಾರದು. ವಿದ್ಯಾರ್ಥಿಗಳನ್ನು ಹತ್ತಿಸಿಕೊಂಡು ಬರಬೇಕು. ಈಗಾಗಲೇ ಸರ್ಕಾರ ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ತೋರಿಸಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದೆ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಗಮನಹರಿಸುವಂತೆ ನಿರ್ದೇಶನ ನೀಡಿದರು.

ಪ್ರಶ್ನೆಪತ್ರಿಕೆಯನ್ನು ತೆಗೆದುಕೊಂಡು ಹೋಗುವಾಗ ಮಾರ್ಗದಲ್ಲಿ ಪೊಲೀಸರ ನಿಯೋಜನೆ, ಪರೀಕ್ಷಾ ಕೇಂದ್ರದಲ್ಲಿ ಶುಶ್ರೂಷಕರು ಹಾಗೂ ಬ್ಯಾಗ್ ಇಟ್ಟುಕೊಳ್ಳಲು ಪ್ರತ್ಯೇಕ ಕೊಠಡಿ ವ್ಯವಸ್ಥೆ, ಕುಡಿಯುವ ನೀರು ಕಲ್ಪಿಸುವುದು, ಮತ್ತಿತರ ಅಗತ್ಯ ಮೂಲಸೌಲಭ್ಯ ಒದಗಿಸುವಂತೆ ಶಿಕ್ಷಣ ಇಲಾಖೆಯ ಮುಖ್ಯಸ್ಥರಿಗೆ ಸಲಹೆ ನೀಡಿದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯ ಪೂರ್ವಭಾವಿ ಸಭೆ ಡಿಸಿ ವೆಂಕಟ್‌ರಾಜಾ ಅಧ್ಯಕ್ಷತೆಯಲ್ಲಿ ನಡೆಯಿತು. ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಇದ್ದರು.

ಪರೀಕ್ಷೆ ಸಂದರ್ಭದಲ್ಲಿ ಸೆಸ್ಕ್ ವಿದ್ಯುತ್ ವ್ಯತ್ಯಯವಾಗದಂತೆ ಗಮನಹರಿಸಬೇಕು. ಯಾವುದೇ ಗೊಂದಲಗಳಿಗೆ ಅವಕಾಶ ನೀಡದೆ ಪರೀಕ್ಷೆ ನಡೆಸಬೇಕು. ಸರ್ಕಾರದ ನಿಯಮದಂತೆ ವಸ್ತ್ರಸಂಹಿತೆ (ಡ್ರೆಸ್‌ಕೋಡ್) ಯನ್ನು ಪಾಲಿಸುವ ಸಂಬಂಧ ವಿದ್ಯಾರ್ಥಿಗಳಿಗೆ ಮೊದಲೇ ಮಾಹಿತಿ ನೀಡುವಂತೆ ಆಯಾ ಕಾಲೇಜಿನ ಪ್ರಾಂಶುಪಾಲರಿಗೆ ಜಿಲ್ಲಾಧಿಕಾರಿ ಸೂಚಿಸಿದರು.


ಪರೀಕ್ಷೆಗೆ ನಿಯೋಜಿಸಿರುವ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ಕೆಲಸವನ್ನು ವ್ಯವಸ್ಥಿತ ಮತ್ತು ಗಂಭೀರವಾಗಿ ನಿರ್ವಹಿಸಬೇಕು. ಆ ನಿಟ್ಟಿನಲ್ಲಿ ಬದ್ಧತೆಯಿಂದ ಕಾರ್ಯನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಪುಟ್ಟರಾಜು ಮಾತನಾಡಿ, ಜಿಲ್ಲೆಯಲ್ಲಿ 19 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಮಡಿಕೇರಿ ತಾಲೂಕಿನಲ್ಲಿ 5, ಸೋಮವಾರಪೇಟೆಯಲ್ಲಿ 8 ಮತ್ತು ವಿರಾಜಪೇಟೆಯಲ್ಲಿ 6 ಕೇಂದ್ರಗಳನ್ನು ಗುರುತಿಸಲಾಗಿದೆ. ಪ್ರಶ್ನೆಪತ್ರಿಕೆಗಳ ರಹಸ್ಯ ಬಂಡಲ್‌ಗಳನ್ನು ಸರಬರಾಜು ಮಾಡಲು ಮಡಿಕೇರಿ 2, ಸೋಮವಾರಪೇಟೆ 3 ಮತ್ತು ವಿರಾಜಪೇಟೆ ತಾಲೂಕಿನಲ್ಲಿ 2 ಒಟ್ಟು 7 ಮಾರ್ಗಗಳನ್ನು ಗುರುತಿಸಲಾಗಿದ್ದು, ಈ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗುವುದು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಪರೀಕ್ಷೆಯನ್ನು ಸುಗಮ ಹಾಗೂ ಸುವ್ಯವಸ್ಥಿತವಾಗಿ ನಡೆಸಲು ಅಗತ್ಯ ಮಾಹಿತಿ ನೀಡಲಾಗಿದೆ ಎಂದರು. ಸಭೆಯಲ್ಲಿ ಡಾ.ಕೆ.ಎಂ. ಸತೀಶ್ ಕುಮಾರ್, ರಘುನಾಥ್, ಪೊಲೀಸ್ ಅಧಿಕಾರಿಗಳು, ವಿವಿಧ ಕಾಲೇಜುಗಳ ಪ್ರಾಂಶುಪಾಲರು ಇತರರಿದ್ದರು.

> ಕೊಡಗು ಜಿಲ್ಲೆಯಲ್ಲಿ ಈ ಬಾರಿ 5251 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ತೆಗೆದುಕೊಂಡಿದ್ದು, ಇದರಲ್ಲಿ 4709 ಹೊಸ ವಿದ್ಯಾರ್ಥಿಗಳು, 402 ಖಾಸಗಿ ವಿದ್ಯಾರ್ಥಿಗಳು ಮತ್ತು 140 ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.
> –ಪುಟ್ಟರಾಜು, ಉಪನಿರ್ದೇಶಕ, ಪದವಿಪೂರ್ವ ಶಿಕ್ಷಣ ಇಲಾಖೆ

ನದಿಯಲ್ಲಿ ಈಜಲು ತೆರಳಿದ್ದ ವಿದ್ಯಾರ್ಥಿ ಸಾವು



ಮಡಿಕೇರಿ, ಫೆ26–ಕಾವೇರಿ ನದಿಯಲ್ಲಿ ಈಜಲು ತೆರಳಿದ್ದ ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಕೂಡಿಗೆ ಬಳಿಯ ಕಣಿವೆ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಹುಣಸೂರು ತಾಲೂಕಿನ ಬಿಳಿಕೆರೆ ಬಳಿಯ ರಂಗಯ್ಯನಕೊಪ್ಪಲು ಗ್ರಾಮದ ರವಿಕುಮಾರ್ ಅವರ ಪುತ್ರ ಹೃತ್ವಿಕ್(16) ಮೃತ ವಿದ್ಯಾರ್ಥಿ.

ಈತ ಮೈಸೂರಿನ ತ್ರೀನಿತಿ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಯಾಗಿದ್ದು, ಪಿರಿಯಾಪಟ್ಟಣ ತಾಲೂಕಿನ ಚೆನ್ನಕೇಶವಪುರದ ತನ್ನ ಸ್ನೇಹಿತನ ಮನೆಗೆ ಭಾನುವಾರ ಬಂದಿದ್ದ. ನಂತರ ಬೆಟ್ಟದಪುರದ ಜಾತ್ರೆಯಲ್ಲಿ ಪಾಲ್ಗೊಂಡಿದ್ದ. ಸೋಮವಾರ ಸ್ನೇಹಿತರೊಂದಿಗೆ ಕೂಡಿಗೆ ಬಳಿಯ ಕಣಿವೆ ಗ್ರಾಮಕ್ಕೆ ಆಗಮಿಸಿ, ಕಾವೇರಿ ನದಿಯಲ್ಲಿ ಈಜಲು ತೆರಳಿದ್ದಾನೆ. ಈ ವೇಳೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ. ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹವನ್ನು ನದಿಯಿಂದ ಮೇಲೆತ್ತಿದ್ದಾರೆ. ನದಿಯ ಬಳಿ ಈತನ ಸಂಬಂಧಿಕರ ರೋದನ ಮುಗಿಲು ಮುಟ್ಟಿತ್ತು. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಖ್ಯಮಂತ್ರಿ, ಸಚಿವರೊಂದಿಗೆ ಚರ್ಚಿಸುವ ಭರವಸೆ



ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಪದವೀಧರರ ಅಸೋಸಿಯೇಷನ್ ಹಾಗೂ ಅರಣ್ಯ ವಿದ್ಯಾರ್ಥಿಗಳು ನಡೆಸುತ್ತಿರುವ ಮುಷ್ಕರ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಎ.ಎಸ್.ಪೊನ್ನಣ್ಣ ಮನವಿ ಸ್ವೀಕರಿಸಿದರು.

ಮಡಿಕೇರಿ, ಫೆ26–ಕಾನೂನಾತ್ಮಕವಾಗಿ ಸುಪ್ರೀಂ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯ ತೀರ್ಪುಗಳನ್ನು ಅಧ್ಯಯನ ಮಾಡಿ, ಮುಖ್ಯಮಂತ್ರಿಗಳು ಮತ್ತು ಅರಣ್ಯ ಸಚಿವರೊಂದಿಗೆ ಚರ್ಚಿಸಿ ಅರಣ್ಯಶಾಸ್ತ್ರ ಪದವೀಧರರ ಸಮಸ್ಯೆ ಪರಿಹರಿಸುವುದಾಗಿ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಪ್ರತಿಭಟನಾ ವಿದ್ಯಾರ್ಥಿಗಳಿಗೆ ಭರವಸೆ ನೀಡಿದರು.

ಕರ್ನಾಟಕ ಅರಣ್ಯ ವಿದ್ಯಾರ್ಥಿಗಳು ಮತ್ತು ಪದವೀಧರರ ಅಸೋಸಿಯೇಷನ್ ವತಿಯಿಂದ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ನಡೆಸುತ್ತಿರುವ ಮುಷ್ಕರ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಅರಣ್ಯ ಪದವೀಧರ ವಿದ್ಯಾರ್ಥಿಗಳ ವೃತ್ತಿ ಜೀವನ ಮತ್ತು ಭವಿಷ್ಯದ ಹಿತದೃಷ್ಟಿಯಿಂದ ಅರಣ್ಯ ವಿದ್ಯಾರ್ಥಿಗಳ ಬೇಡಿಕೆಗಳನ್ನು ಕಾನೂನಾತ್ಮಕವಾಗಿ ಸ್ವೀಕರಿಸಿ ಪುರಸ್ಕರಿಸಬೇಕೆಂದು ಮುಖ್ಯಮಂತ್ರಿಗಳು ಹಾಗೂ ಅರಣ್ಯ ಮತ್ತು ಕೃಷಿ ಸಚಿವರಿಗೆ ಪತ್ರ ಬರೆದಿದ್ದೇನೆ ಎಂದು ತಿಳಿಸಿದರು. ಟಿ.ಎಂ.ವಿಜಯಭಾಸ್ಕರ್ ಅವರು ಸಲ್ಲಿಸಿರುವ ಆಡಳಿತ ಸುಧಾರಣೆ ವರದಿಯನ್ನು ತಕ್ಷಣಕ್ಕೆ ಜಾರಿ ಮಾಡುವುದಿಲ್ಲ ಎಂದು ಅರಣ್ಯ ಸಚಿವರು ದೂರವಾಣಿ ಮೂಲಕ ನನಗೆ ತಿಳಿಸಿದ್ದಾರೆ. ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ಸೂಕ್ತ ಕ್ರಮವನ್ನು ಜರುಗಿಸುತ್ತೇವೆ ಎಂದು ಆಶ್ವಾಸನೆ ನೀಡಿದ್ದಾರೆ ಎಂದರು.

ನಾನು ಕೂಡ ಕಾನೂನಾತ್ಮಕವಾಗಿ ನ್ಯಾಯಾಲಯ ತೀರ್ಪುಗಳನ್ನು ಅಧ್ಯಯನ ಮಾಡಿ, ಮುಖ್ಯಮಂತ್ರಿಗಳಿಗೆ ಮತ್ತು ಅರಣ್ಯ ಸಚಿವರಿಗೆ ಕಾನೂನಿನ ಮಾಹಿತಿ ನೀಡಿ ಇದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ. ಮುಖ್ಯ ಬೇಡಿಕೆಯಾದ ಅರಣ್ಯ ಪದವೀಧರರಿಗೆ ಮಾತ್ರ ಹುದ್ದೆಯನ್ನು ಮೀಸಲಿಡುವ ಬಗ್ಗೆ ಅಧ್ಯಯನ ಮಾಡಬೇಕಾಗಿದ್ದು, ಅದಕ್ಕೆ ಕಾಲಾವಕಾಶ ಬೇಕು. ನಿಮ್ಮ ಬೇಡಿಕೆಗಳನ್ನು ಈಡೇರಿಸಲು ನಾನು ಸಂಪೂರ್ಣವಾಗಿ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು. ಇದೇ ವೇಳೆ ಶಾಸಕರು ಮುಷ್ಕರ ಕೈಬಿಟ್ಟು ಕೂಡಲೇ ಕಾಲೇಜಿಗೆ ತೆರಳುವಂತೆ ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದರು.

ಈದ್ಗಾ ಮೈದಾನದಲ್ಲಿ ಬೆಂಕಿ



ಮಡಿಕೇರಿ, ಫೆ.26–ಮಂಜಿನನಗರಿ ಮಡಿಕೇರಿಯಲ್ಲಿ ಬಿಸಿಲಿನ ಕಾವು ದಿನೇ ದಿನೆ ಏರುತ್ತಲಿದ್ದು, ಇದರ ಪರಿಣಾಮ ನಗರದ ಕೆಲವು ಪ್ರದೇಶಗಳಲ್ಲಿ ಕಾಡ್ಗಿಚ್ಚು ಕಾಣಿಸಿಕೊಳ್ಳತೊಡಗಿದೆ.

ಸೋಮವಾರ ನಗರದ ಈದ್ಗಾ ಮೈದಾನದಲ್ಲಿ ಸುಮಾರು ಮೂರು ಎಕರೆ ಪ್ರದೇಶದಲ್ಲಿ ಎರಡು ಬಾರಿ ಬೆಂಕಿ ಕಾಣಿಸಿಕೊಂಡಿತು. ತಕ್ಷಣ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಿಯಂತ್ರಿಸಿ, ಹೆಚ್ಚಿನ ಅಪಾಯ ತಪ್ಪಿಸಿದರು.

ಇತ್ತೀಚೆಗೆ ಜಿಲ್ಲೆಯ ವಿವಿಧೆಡೆ ಅರಣ್ಯ ಮತ್ತು ಕಾಫಿ ತೋಟಗಳಲ್ಲಿ ಕಾಡ್ಗಿಚ್ಚು ಕಾಣಿಸಿಕೊಳ್ಳುತ್ತಿದ್ದು, ಇದರಿಂದ ಬೆಳೆಗಾರರು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿದೆ. ಸಾರ್ವಜನಿಕರು ಅರಣ್ಯ ಇಲಾಖೆ ಮತ್ತು ಅಗ್ನಿಶಾಮಕ ದಳದೊಂದಿಗೆ ಸಹಕರಿಸಬೇಕೆಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ಹಾವು ಕಚ್ಚಿ ಬಾಲಕ ಸಾವು



ದೇವಯ್ಯ

ಕುಶಾಲನಗರ, ಫೆ.26–ಹಾವು ಕಚ್ಚಿ ಬಾಲಕ ಮೃತಪಟ್ಟಿರುವ ಘಟನೆ ಸಮೀಪದ ಕೊಪ್ಪದಲ್ಲಿ ಸೋಮವಾರ ನಡೆದಿದೆ.

ಕೊಪ್ಪ ಗ್ರಾಮದ ನಿವಾಸಿ ಮೂಲತಃ ಸೋಮವಾರಪೇಟೆ ತಾಲೂಕಿನ ಸೂರ್ಲಬಿ ಗ್ರಾಮದ ಅಡ್ಡಂಡ ಪೊನ್ನಪ್ಪ ಹಾಗೂ ಪವಿತ್ರ ದಂಪತಿಯ ಪುತ್ರ ದೇವಯ್ಯ(9) ಮೃತ ಬಾಲಕ. ಈತ ಕುಶಾಲನಗರದ ಫಾತಿಮಾ ಕಾನ್ವೆಂಟ್‌ನ 3ನೇ ತರಗತಿ ವಿದ್ಯಾರ್ಥಿಯಾಗಿದ್ದಾನೆ. ಭಾನುವಾರ ರಾತ್ರಿ ಮನೆಯಲ್ಲಿ ಮಲಗಿದ್ದಾಗ ಈತನಿಗೆ ಹಾವು ಕಚ್ಚಿದ್ದು, ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಈ ಸಂಬಂಧ ಬೈಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

24.58 ಕೋಟಿ ವೆಚ್ಚದಲ್ಲಿ ರೈಲು ನಿಲ್ದಾಣ ಅಭಿವೃದ್ಧಿ

ಚಾಮರಾಜನಗರದಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್ ಮಾಹಿತಿ

ಚಾಮರಾಜನಗರ, ಫೆ26–ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಚಾಮರಾಜನಗರದ ರೈಲು ನಿಲ್ದಾಣ 24.58 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಗೊಳ್ಳಲಿದೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು 554 ರೈಲು ನಿಲ್ದಾಣಗಳ ಅಭಿವೃದ್ಧಿ ಮತ್ತು 1500 ರಸ್ತೆ ಮೇಲ್ಸೇತುವೆ, ಕೆಳಸೇತುವೆಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯನ್ನು ವರ್ಚುವಲ್ ಮೂಲಕ ನೆರವೇರಿಸಿದ ಬಳಿಕ ನಗರದ ರೈಲು ನಿಲ್ದಾಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೈಲು ನಿಲ್ದಾಣಗಳ ಆಧುನೀಕರಣ ಅಭಿವೃದ್ಧಿಯಿಂದ ಈ ಭಾಗದ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ದೇಶದ ವಿವಿಧ ರೈಲು ನಿಲ್ದಾಣಗಳ ಅಭಿವೃದ್ಧಿಯೊಂದಿಗೆ ಚಾಮರಾಜನಗರ ರೈಲು ನಿಲ್ದಾಣವನ್ನು ಅಭಿವೃದ್ಧಿ ಪಡಿಸಲು ಏಕಕಾಲಕ್ಕೆ ಚಾಲನೆ ದೊರೆತಿದೆ. ರೈಲು ನಿಲ್ದಾಣದಲ್ಲಿ ಇದರಿಂದ ಹೆಚ್ಚಿನ ಸೌಲಭ್ಯ ಲಭ್ಯವಾಗಲಿವೆ ಎಂದರು.



ಚಾಮರಾಜನಗರದ ರೈಲು ನಿಲ್ದಾಣದಲ್ಲಿ ಸೋಮವಾರ ಕೆಲ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಸದ ವಿ.ಶ್ರೀನಿವಾಸಪ್ರಸಾದ್ ಚಾಲನೆ ನೀಡಿದರು. ಮಾಜಿ ಸಚಿವ ಎನ್.ಮಹೇಶ್, ಡಿಸಿ ಶಿಲ್ಪನಾಗ್, ಎಸ್ಪಿ ಪದ್ಮಿನಿ ಸಾಹು, ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹೆಚ್ಚುವರಿ ಮಂಡಲ ಪ್ರಬಂಧಕಿ ಇ.ವಿಜಯಾ ಇದ್ದರು.

ಮೈಸೂರಿನಿಂದ ಚಾಮರಾಜನಗರದವರೆಗೆ ಇದ್ದ ಮೀಟರ್‌ಗೇಜ್ ಅನ್ನು ಬ್ರಾಡ್‌ಗೇಜ್ ಮಾಡಲಾಯಿತು. ಕೆಲವು ರೈಲುಗಳ ವಿಸ್ತರಣೆಯು ಆಗಿವೆ. ಜೊತೆಗೆ ಆಧುನಿಕವಾಗಿ ಅಭಿವೃದ್ಧಿ ಪಡಿಸಲು ಪ್ರಧಾನಿಗಳು ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಈ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದರು.

ರೈಲ್ವೆ ಕ್ಷೇತ್ರದಲ್ಲಿ ಏನೇನು ಅಭಿವೃದ್ಧಿಯಾಗಿದೆ. ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನು ಕಾರ್ಯಕ್ರಮದಲ್ಲಿ ವಿವರಿಸಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಎಸ್.ಬಾಲರಾಜ್, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹೆಚ್ಚುವರಿ ಮಂಡಲ ಪ್ರಬಂಧಕರಾದ ಇ.ವಿಜಯಾ, ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿ ಚಂದ್ರಶೇಖರ್, ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ನನ್ನ ಇಬ್ಬರೂ ಅಳಿಯಂದಿರು ಬಿಜೆಪಿ ಟಿಕೆಟ್ ಆಕಾಂಕ್ಷಿಗಳು

ನನ್ನ ಅಭಿಪ್ರಾಯವನ್ನು ವರಿಷ್ಠರಿಗೆ ಗೌಪ್ಯವಾಗಿ ತಿಳಿಸುತ್ತೇನೆ: ಸಂಸದ ವಿ.ಶ್ರೀನಿವಾಸಪ್ರಸಾದ್

ಚಾಮರಾಜನಗರ: ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರಕ್ಕೆ ಬಿಜೆಪಿಯಿಂದ ನನ್ನ ಇಬ್ಬರೂ ಅಳಿಯಂದಿರು ಸೇರಿದಂತೆ ಹಲವು ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಅಭ್ಯರ್ಥಿ ಆಯ್ಕೆಗೆ ನನ್ನ ಅಭಿಪ್ರಾಯ ಕೇಳಿದರೆ ಅದನ್ನು ತಿಳಿಸುತ್ತೇನೆ. ಆದರೆ, ನನ್ನ ಅಭಿಪ್ರಾಯವನ್ನು ಬಹಿರಂಗಪಡಿಸಲಾಗದು ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ಚಾಮರಾಜನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಚುನಾವಣೆಯಲ್ಲಿ ಸ್ಪರ್ಧಿಸಬಹುದು ಹಾಗೂ ಟಿಕೆಟ್ ಆಕಾಂಕ್ಷಿಯೂ ಆಗಬಹುದು. ಆದರೆ, ನಮ್ಮದು ರಾಷ್ಟ್ರೀಯ ಪಕ್ಷವಾಗಿದ್ದು, ಅಭ್ಯರ್ಥಿ ಆಯ್ಕೆಗೂ ಮುನ್ನ ಪಕ್ಷ ಸಮೀಕ್ಷೆ ನಡೆಸುತ್ತದೆ. ಪಕ್ಷದ ರಾಜ್ಯ ನಾಯಕರು ಹಾಗೂ ರಾಷ್ಟ್ರೀಯ ನಾಯಕರು ಚರ್ಚೆ ನಡೆಸಿ ಅಭ್ಯರ್ಥಿ ಘೋಷಣೆ ಮಾಡುತ್ತಾರೆ. ಅದಕ್ಕೆ ಎಲ್ಲರೂ ಬದ್ಧರಾಗಬೇಕು ಎಂದರು.

ಕಳೆದ ಐದು ವರ್ಷ ಸಂಸದನಾಗಿ ಮಾಡಿರುವ ಕೆಲಸ ನನಗೆ ತೃಪ್ತಿ ತಂದಿದೆ. ಸಂಸದರ ಪ್ರದೇಶಾಭಿವೃದ್ಧಿ ನಿಧಿಗೆ 17.5 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡಿದ್ದೇನೆ. ಅಂಗವಿಕಲರು, ಹಿರಿಯ ನಾಗರಿಕರಿಗೆ ಅಗತ್ಯ ಸಾಧನ–ಸಲಕರಣೆಗಳನ್ನು ವಿತರಣೆ ಮಾಡಿದ್ದೇನೆ. ಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿ, ಭವನಗಳ ನಿರ್ಮಾಣ ಸೇರಿದಂತೆ ಅನೇಕ ಕೆಲಸಗಳನ್ನು ಮಾಡಿದ್ದೇನೆ ಎಂದು ತಿಳಿಸಿದರು.

ನಾನು ಚುನಾವಣಾ ರಾಜಕೀಯಕ್ಕೆ ಬಂದು 50 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮಾ.17ರಂದು ನನ್ನ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಕಾರ್ಯಕ್ರಮ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 11 ಗಂಟೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪ ಮೊಯ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರರು 'ಸ್ವಾಭಿಮಾನಿ ನೆನಪುಗಳು' ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಿದ್ದಾರೆ. ಮಾಜಿ ಸ್ಪೀಕರ್ ಕಾಗೋಡು ತಿಮ್ಮಪ್ಪ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಸ್ವಾಗತಿಸಲಿದ್ದಾರೆ ಎಂದು ಪ್ರಸಾದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯೂ ಆದ ವಿ.ಶ್ರೀನಿವಾಸಪ್ರಸಾದ್ ಅಳಿಯ ಡಾ.ಮೋಹನ್, ಮುಖಂಡರಾದ ಅಯ್ಯನಪುರ ಶಿವಕುಮಾರ್ ಇತರರು ಇದ್ದರು.

ನಗರದಲ್ಲಿ ಮತದಾನ ಜಾಗೃತಿಗಾಗಿ ವಾಕಥಾನ್



ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ ಆವರಣದಿಂದ ವಾಕಥಾನ್‌ಗೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಚಾಲನೆ ನೀಡಿದರು.

ಚಾಮರಾಜನಗರ, ಫೆ26–ಈ ಬಾರಿಯ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಅಂಗವಾಗಿ ಮತದಾನ ಜಾಗೃತಿ ಮೂಡಿಸಲು ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ನೌಕರರು ನಗರದಲ್ಲಿ ಸೋಮವಾರ ವಾಕಥಾನ್ ನಡೆಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ನಗರಸಭೆ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದಲ್ಲಿ ಚಾಮರಾಜೇಶ್ವರ ದೇವಾಲಯ ಆವರಣದಿಂದ ಜಿಲ್ಲಾಡಳಿತ ಭವನದವರೆಗೆ ಹಮ್ಮಿಕೊಂಡಿದ್ದ ವಾಕಥಾನ್ ನಡಿಗೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಈ ಬಾರಿ ಚುನಾವಣಾ ಪರ್ವ–ದೇಶದ ಗರ್ವ ಎಂಬ ಘೋಷಣೆಯೊಂದಿಗೆ ಮತದಾನದ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಾಕಥಾನ್ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಸಾರ್ವಜನಿಕರು, 18 ವರ್ಷ ತುಂಬಿದ ಯುವ ಮತದಾರರು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮತದಾನ ಮಾಡಬೇಕು. ದೇಶದ ಪ್ರಜಾಪ್ರಭುತ್ವ ಬಲಿಷ್ಠತೆಗೆ ಯುವ ಜನತೆ ಮುಂದಾಗಬೇಕು ಎಂದರು.

ಚಾಮರಾಜೇಶ್ವರ ದೇವಾಲಯದಿಂದ ಆರಂಭವಾದ ವಾಕಥಾನ್ ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನ ತಲುಪಿತು. ವಾಕಥಾನ್‌ನಲ್ಲಿ ಮತದಾನ ಜಾಗೃತಿ ಮೂಡಿಸುವ ಫಲಕಗಳನ್ನು ಹಿಡಿದ ಅಧಿಕಾರಿಗಳು, ನೌಕರರು ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡುವಂತೆ ಘೋಷಣೆ ಮೊಳಗಿಸಿದರು.

ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ಎಂ.ವಿ.ಸುಧಾ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸುರೇಶ್, ತಾಪಂ ಕಾರ್ಯನಿರ್ವಾಹಕಾಧಿಕಾರಿ ಪೂರ್ಣಿಮಾ, ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ಸಮಿತಿ ಸದಸ್ಯ ಶ್ರೀನಿವಾಸ ಪ್ರಸಾದ್ ಇತರರು ಭಾಗವಹಿಸಿದ್ದರು.

ತಿಮ್ಮಮ್ಮ ನಿಧನ



ಹನೂರು: ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತೆಳ್ಳನೂರು ಗ್ರಾಮದ ನಿವಾಸಿ ತಿಮ್ಮಮ್ಮ(85) ಸೋಮವಾರ ಸಂಜೆ ನಿಧನರಾಗಿದ್ದಾರೆ.

ಮೃತರು ಐವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ತೆಳ್ಳನೂರು ಗ್ರಾಮದ ಮೃತರ ಜಮೀನಿನಲ್ಲಿ ಮಂಗಳವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸಂತಾಪ: ಮಾಜಿ ಶಾಸಕ ಆರ್.ನರೇಂದ್ರ, ಬಿಜೆಪಿ ಜಿಲ್ಲಾ ಹಿಂದುಳಿದವರ್ಗ ಮೋರ್ಚಾದ ಅಧ್ಯಕ್ಷ ಹನೂರು ವೆಂಕಟೇಶ್, ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ದತ್ತೇಶ್ ಕುಮಾರ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಹಾದೇಶ್ ಸಂತಾಪ ಸೂಚಿಸಿದ್ದಾರೆ.

ಆದಾಯ ಪ್ರಮಾಣ ಪತ್ರ ಸಲ್ಲಿಸಲು ಅವಕಾಶ

ಚಾಮರಾಜನಗರ, ಫೆ.26– 2023–24ನೇ ಸಾಲಿನಲ್ಲಿ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಕಾರ್ಯಕ್ರಮದಡಿ ವಿದ್ಯಾರ್ಥಿವೇತನಕ್ಕಾಗಿ ಪೋಷಕರ ಆದಾಯ ಪ್ರಮಾಣಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಪೋಷಕರ ಆದಾಯ 2.5 ಲಕ್ಷ ರೂ. ಮೀರಿರಬಾರದು ಎಂಬ ಷರತ್ತನ್ನು ವಿಧಿಸಿರುವುದರಿಂದ ಸಾಮಾನ್ಯ ವರ್ಗದಡಿ ಬರುವ ರೈತರ ಮಕ್ಕಳು ತಮ್ಮ ಪೋಷಕರ ಆದಾಯ ಪ್ರಮಾಣ ಪತ್ರವನ್ನು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ವಿದ್ಯಾರ್ಥಿಗಳ ಲಾಗಿನ್‌ನಲ್ಲಿ ಫೆ.29ರೊಳಗೆ ಸಲ್ಲಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಲೂರು ಡೈರಿಗೆ ಚಂದ್ರು ಅಧ್ಯಕ್ಷ

ಆಲೂರು: ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಎ.ಆರ್. ಚಂದ್ರು ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ನಡೆದ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎ.ಆರ್.ಚಂದ್ರು ಹಾಗೂ ನಾಗಣ್ಣ ನಡುವೆ ಪೈಪೋಟಿ ನಡೆದಿತ್ತು. 8 ಮತಗಳನ್ನು ಚಂದ್ರು ಪಡೆದರೆ ಎದುರಾಳಿ ನಾಗಣ್ಣ 4 ಮತ ಪಡೆದು ಪರಾಭವಗೊಂಡರು.

ಯರಿಯೂರಿನಲ್ಲಿ ಮಂಟೇಸ್ವಾಮಿ ಕೊಂಡೋತ್ಸವ



ಯಳಂದೂರು ತಾಲೂಕಿನ ಯರಿಯೂರು ಗ್ರಾಮದಲ್ಲಿ ಮಂಟೇಸ್ವಾಮಿ, ಸಿದ್ದಪ್ಪಾಜಿ, ದೊಡ್ಡಮ್ಮತಾಯಿಯ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಯಳಂದೂರು, ಫೆ.26–ತಾಲೂಕಿನ ಯರಿಯೂರು ಗ್ರಾಮದ ಅಂಬೇಡ್ಕರ್ ಭವನ ಆವರಣದಲ್ಲಿ ಧರೆಗೆ ದೊಡ್ಡವರಾದ ಮಂಟೇಸ್ವಾಮಿ, ಸಿದ್ದಪ್ಪಾಜಿ, ದೊಡ್ಡಮ್ಮತಾಯಿಯ ಕೊಂಡೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ಭಾನುವಾರ ಸಂಜೆ ಕುರುಬನಕಟ್ಟೆ ಕಂಡಾಯಗಳಿಗೆ ಗ್ರಾಮಸ್ಥರು ಪೂಜೆ ಮಾಡಿ ಬರಮಾಡಿಕೊಂಡರು. ರಾತ್ರಿ 10 ಗಂಟೆಗೆ ಮರಗಳಿಂದ ಜೋಡಿಸಿದ ಕೊಂಡದ ಸೌದೆಗೆ ಕಂಡಾಯ ಹೊತ್ತವರು ಕಿಚ್ಚನ್ನು ಇಟ್ಟರು. ಮಂಗಳವಾದ್ಯಗಳೊಂದಿಗೆ ಕಂಡಾಯ ಮೂರ್ತಿ ಹಾಗೂ ಸತ್ತಿಗೆಗಳು ಕೊಂಡದ ಸುತ್ತಲೂ ಮೂರು ಬಾರಿ ಪ್ರದಕ್ಷಿಣೆ ಹಾಕಿದರು.

ಸೋಮವಾರ ಮುಂಜಾನೆ ಪಟ್ಟಣದ ಆಸ್ಪತ್ರೆ ಹಿಂಭಾಗದ ತೋಟಕ್ಕೆ ತೆರಳಿ ಅಲ್ಲಿನ ಬಾವಿಯಿಂದ ನೀರನ್ನು ತಂದು ಕಂಡಾಯ, ಛತ್ರಿ, ಚಾಮರ ಹಾಗೂ ಸತ್ತಿಗೆಗಳನ್ನು ತೊಳೆದು ಹೂ–ಹೊಂಬಾಳೆಗಳಿಂದ ಅಲಂಕರಿಸಲಾಯಿತು.


ಅಲಂಕೃತಗೊಂಡ ಕಂಡಾಯ ಮೂರ್ತಿಗಳು, ಸತ್ತಿಗೆ, ಛತ್ರಿ ಚಾಮರಗಳು ಹಾಗೂ ನೀಲಗಾರರ ಜಾಗಟೆ ಸದ್ದು, ಮಂಗಳವಾದ್ಯಗಳೊಂದಿಗೆ ರಾಷ್ಟ್ರೀಯ ಹೆದ್ದಾರಿ ಮೂಲಕ ಉತ್ಸವ ತೆರಳಿತು.

ಬೆಳಗ್ಗೆ 8.45ಕ್ಕೆ ಮಂಟೇಸ್ವಾಮಿ, ಸಿದ್ದಪ್ಪಾಜಿ, ದೊಡ್ಡತಾಯಮ್ಮ ಹಾಗೂ ಗ್ರಾಮ ದೇವತೆಯ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು. ಭಕ್ತರು ಕೊಂಡಹಾಯ್ದು ಹರಕೆ ತೀರಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಯಜಮಾನರು, ಮುಖಂಡರು, ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ರಾಜ್ಯಸಭೆ ಚುನಾವಣೆ ಹಿನ್ನೆಲೆ ಕಾಂಗ್ರೆಸ್ ಶಾಸಕರಿಗೆ ವಿಪ್ ಜಾರಿ

ಅಡ್ಡಮತದಾನ ಮಾಡಿದ್ರೆ ಶಾಸಕ ಸ್ಥಾನದಿಂದ ವಜಾ



ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ಮತ ಚಲಾವಣೆಗೆ ಕಡ್ಡಾಯ ಹಾಜರಾತಿಗೆ ಕಾಂಗ್ರೆಸ್ ಶಾಸಕರಿಗೆ ವಿಪ್ ಜಾರಿ ಮಾಡಲಾಗಿದೆ ಎಂದು ಸರ್ಕಾರದ ಮುಖ್ಯ ಸಚೇತಕ ಅಶೋಕ್ ಪಟ್ಟಣ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಎಲ್ಲಾ ಶಾಸಕರಿಗೂ ವಿಪ್ ಕೊಟ್ಟಿದ್ದೀವಿ. ಸಂಜೆ 6 ಗಂಟೆಗೆ ಕಂಪಲ್ಸರಿ ಹಾಜರಾಗಲು ಹೇಳಿದ್ದೀವಿ ಹಿಲ್ಟನ್ ಹೋಟೆಲ್‌ಗೆ ಬರುವಂತೆ ವಾಟ್ಸಪ್‌ನಲ್ಲಿ ಸಂದೇಶ ಕಳಿಸಿದ್ದೀವಿ, ವೈಯಕ್ತಿಕವಾಗಿಯೂ ಫೋನ್ ಮಾಡಿ ಹೇಳಿದ್ದೀವಿ. ಎಲ್ಲಾ ಶಾಸಕರು ರಾತ್ರಿ ಅಲ್ಲೇ ಉಳಿದುಕೊಳ್ತೀವಿ ಎಂದು ಹೇಳಿದ್ದಾರೆ. ಮಂಗಳವಾರ ಬೆಳಗ್ಗೆ ಎಲ್ಲಾ ಶಾಸಕರು ಹೋಟೆಲ್‌ನಿಂದ ಬಸ್‌ನಲ್ಲಿ ಬರ್ತೀವಿ. ಬಸ್ ವ್ಯವಸ್ಥೆ ಆಗಿದೆ, ಎಲ್ಲರೂ ಒಟ್ಟಿಗೆ ಬಂದು ಮತ ಹಾಕಿ ಹೋಗ್ತೀವಿ. ವೋಟಿಂಗ್ ಪ್ಯಾಟ್ರನ್ ಟ್ರೈನಿಂಗ್ ಕೊಡೋಕೆ, ಯಾವ ರೀತಿ ಮಾರ್ಕ್ ಮಾಡಬೇಕು ಅಂತಲೇ ಶಾಸಕಾಂಗ ಪಕ್ಷದ ಸಭೆ ಕರೆದಿರೋದು. ಅಡ್ಡ ಮತದಾನದ ಭೀತಿನೇ ಇಲ್ಲ ಏಕೆಂದರೆ ತೋರಿಸಿ ವೋಟ್ ಹಾಕಬೇಕು, ಆದ್ದರಿಂದ ಯಾರೂ ಬೇರೆಯವರಿಗೆ ಮತ ಹಾಕಲ್ಲ. ಅಡ್ಡ ಮತದಾನ ಮಾಡಿದ್ರೆ ಸ್ಪೀಕರ್‌ಗೆ ದೂರು ಕೊಟ್ಟು ಶಾಸಕ ಸ್ಥಾನದಿಂದ ವಜಾ ಗೊಳಿಸ್ತೀವಿ, ಕ್ರಮ ಕೈಗೊಳ್ತೀವಿ ಎಂದು ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಶಿಕ್ಷಣ ನೀತಿ ಸಮಿತಿ ಅವಧಿ ಆಗಸ್ಟ್‌ವರೆಗೂ ವಿಸ್ತರಣೆ



ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ರಚನಾ ಸಮಿತಿಯ ಅವಧಿಯನ್ನು ರಾಜ್ಯ ಸರ್ಕಾರ ವಿಸ್ತರಣೆ ಮಾಡಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಸ್ಟ್‌ವರೆಗೂ ಎಸ್‌ಇಪಿ ಸಮಿತಿ ಅವಧಿ ವಿಸ್ತರಣೆ ಮಾಡಲಾಗಿದೆ. ಎಸ್‌ಇಪಿ ಸಮಿತಿ ವರದಿ ವಿಸ್ತರಣೆ ಮಾಡಲಾಗಿದ್ದು, ಫೆಬ್ರವರಿವರೆಗೂ ಸಮಿತಿಗೆ ವರದಿ ಕೊಡಲು ಸಮಯ ಕೊಡಲಾಗಿತ್ತು. ಸಮಿತಿಯಿಂದ ಸಮಯ ಕೇಳಿದ ಹಿನ್ನಲೆಯಲ್ಲಿ ಆಗಸ್ಟ್ ವರೆಗೂ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಮಾಡದೇ ಹೋದರೆ ಕೇಂದ್ರದ ಅನುದಾನ ಕಡಿಮೆ ಆಗುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಕೇಂದ್ರ ಸರ್ಕಾರ ಒತ್ತಡ ಹಾಕಿ ಎನ್‌ಇಪಿ ಅನುಷ್ಠಾನ ಮಾಡಿ ಅಂತ ಹೇಳೋದು ಸರಿಯಲ್ಲ. ಈಗಾಗಲೇ ಕೇರಳ, ತಮಿಳುನಾಡು ಸರ್ಕಾರ ರಾಜ್ಯ ಶಿಕ್ಷಣ ನೀತಿ ಅನುಷ್ಠಾನ ಮಾಡಿವೆ. ಹೀಗಿದ್ದರೂ ಆ ರಾಜ್ಯಗಳಿಗೆ ಕೇಂದ್ರ ಅನುದಾನ ಕೊಟ್ಟಿದೆ. 60:40 ಶೇರ್‌ನಲ್ಲಿ ಅನುದಾನ ಬರಬೇಕು. ಕೇಂದ್ರ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಲಿದೆ ಎಂದು ನೋಡೋಣ. ಅನುದಾನ ಬಿಡುಗಡೆ ಮಾಡದೇ ಹೋದ್ರೆ ಮುಂದೆ ಏನು ಮಾಡಬೇಕು ಎಂದು ತೀರ್ಮಾನ ಮಾಡುತ್ತೇವೆ ಎಂದಿದ್ದಾರೆ.

ಮೂರನೇ ಪುಟದಿಂದ

ಬಿಜೆಪಿ ಟಿಕೆಟ್ ನೀಡಲು ಶಿಫಾರಸು

ಅವರನ್ನು ಹೊರತುಪಡಿಸಿ, ಉಳಿದಂತೆ ಬಹುತೇಕ ಹಾಲಿ ಸಂಸದರಿಗೆ ಟಿಕೆಟ್ ನೀಡುವುದು ಸೂಕ್ತ ಎಂದು ರಾಜ್ಯ ಬಿಜೆಪಿ ನಾಯಕರು ತೀರ್ಮಾನಿಸಿದ್ದಾರೆ.

ಸ್ಪರ್ಧಾ ಕಣಕ್ಕಿಳಿಯಲು ಆಸಕ್ತಿ ಹೊಂದಿರುವ ಹಾಲಿ ಸಂಸದರಿಗೆ ಬಲವಂತವಾಗಿ ಟಿಕೆಟ್ ತಪ್ಪಿಸಿದರೆ ಈ ಅಂಶವೇ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗೆ ತಿರುಗುಬಾಣ ಆಗುವ ಸಾಧ್ಯತೆಗಳು ಇವೆ. ಕಣಕ್ಕಿಳಿಯುವ ಆಸಕ್ತಿ ಇಲ್ಲದವರನ್ನು ಹೊರತುಪಡಿಸಿ ಉಳಿದಂತೆ ಬಹುತೇಕರಿಗೆ ಟಿಕೆಟ್ ನೀಡುವಂತೆ ಶಿಫಾರಸು ಮಾಡಲಾಗಿದೆ. ಕರ್ನಾಟಕದ 28 ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ದೆಹಲಿ ವರಿಷ್ಠರು ಇದುವರೆಗೂ ನಾಲ್ಕು ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದ್ದಾರೆ. ಇದರ ಪ್ರಕಾರ ಐದು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ವರದಿ ಸಮೀಕ್ಷೆ ತೃಪ್ತಿ ತಂದಿಲ್ಲ, ಆದ್ದರಿಂದ ಬಿಜೆಪಿಯ ಅಂಗ ಸಂಸ್ಥೆಗಳ ಮೂಲಕ ವಾಸ್ತವಾಂಶ ತಿಳಿಯಲು ಮತ್ತೊಂದು ಸಮೀಕ್ಷೆ ನಡೆಸಿದ್ದಾರೆ.

ಇದರ ನಡುವೆಯೇ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಆರ್‌ಎಸ್‌ಎಸ್‌ನ ಮುಕುಂದ್, ತಿಪ್ಪೇಸ್ವಾಮಿ ಸೇರಿದಂತೆ ಪ್ರಮುಖರು, ರಾಜ್ಯ ಬಿಜೆಪಿ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಆರ್.ಅಶೋಕ್, ಸಿ.ಟಿ.ರವಿ, ಗೋವಿಂದ ಕಾರಜೋಳ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಜೊತೆ ಸುದೀರ್ಘ ಸಮಾಲೋಚನೆ ನಡೆಸಿ ಈ ಶಿಫಾರಸು ಮಾಡಿದ್ದಾರೆ. ವರಿಷ್ಠರು ರಾಜ್ಯ ಘಟಕ ಮಾಡಿರುವ ಶಿಫಾರಸ್ಸನ್ನು ಚುನಾವಣಾ ಸಮೀಕ್ಷೆ ಜೊತೆ ತಾಳೆ ಹಾಕಿ ಮಾರ್ಚ್ ಮೊದಲ ವಾರದಲ್ಲಿ ಪಟ್ಟಿ ಬಿಡುಗಡೆ ಮಾಡಲಿದ್ದಾರೆ.

ಸಭೆಯಲ್ಲಿ ಭಾಗವಹಿಸಿದ್ದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯರೂ ಆಗಿರುವ ಯಡಿಯೂರಪ್ಪ ಅವರು, ನಿನ್ನೆಯಷ್ಟೇ ಅಭ್ಯರ್ಥಿಗಳ ಪಟ್ಟಿ ಇನ್ನು ಮೂರು–ನಾಲ್ಕು ದಿನಗಳಲ್ಲಿ ಬಿಡುಗಡೆಯಾಗಲಿದೆ ಎಂದು ತಿಳಿಸಿದ್ದಾರೆ.

ಇಂದು ಮತದಾನ

ಯಾರು ಮೊದಲು ಕನಿಷ್ಠ 44.65 ಮತಗಳ ಗೆಲುವಿನ ಗುರಿ ಮುಟ್ಟುತ್ತಾರೋ ಅವರು ಜಯಶೀಲರಾಗುತ್ತಾರೆ ಕಡೇ ಘಳಿಗೆಯಲ್ಲಿ ಕಾಂಗ್ರೆಸ್‌ಗೆ ಒಂದು ಮತ ಕಡಿಮೆಯಾಗಿರುವುದರಿಂದ ನಾಲ್ವರು ಪಕ್ಷೇತರರಿಗೆ ಬೇಡಿಕೆ ಹೆಚ್ಚಾಗಿದೆ. ಅವರಲ್ಲಿ ಬಹುತೇಕರು ಆಡಳಿತ ಪಕ್ಷದ ಕಡೆ ಒಲವು ತೋರಿದ್ದರೂ ಕಾಂಗ್ರೆಸ್‌ಗೆ ಭಯ ದೂರವಾಗಿಲ್ಲ. ಈ ಕಾರಣಕ್ಕಾಗಿಯೇ ತಮ್ಮ ಎಲ್ಲಾ ಶಾಸಕರನ್ನು ಪಂಚತಾರಾ ಹೋಟೆಲ್‌ನಲ್ಲಿ ಹಿಡಿದಿಟ್ಟುಕೊಂಡಿದ್ದು, ಅಲ್ಲಿಯೇ ತಮ್ಮ ಅಭ್ಯರ್ಥಿಗಳಿಗೆ ಯಾವ ರೀತಿ ಮತ ಚಲಾಯಿಸಬೇಕು ಎಂಬ ಬಗ್ಗೆ ತರಬೇತಿ ನೀಡಿ, ನಾಳೆ ಬೆಳಗ್ಗೆ ಹೋಟೆಲ್ ನಿಂದ ನೇರವಾಗಿ ವಿಧಾನಸೌಧಕ್ಕೆ ಕರೆತರಲಿದ್ದಾರೆ.

ಪಕ್ಷಗಳ ಬಲಾಬಲ

ಕಾಂಗ್ರೆಸ್ –	134
ಬಿಜೆಪಿ –	66
ಜೆಡಿಎಸ್ –	19
ಪಕ್ಷೇತರ –	04

ಕಾಂಗ್ರೆಸ್ ಶಾಸಕ ರಾಜಾವೆಂಕಟಪ್ಪ ನಾಯಕ ನಿಧನರಾದ ಹಿನ್ನೆಲೆಯಲ್ಲಿ ಅವರ ಸ್ಥಾನವನ್ನು ರದ್ದುಪಡಿಸಿದ ಕಾರಣ ಕಾಂಗ್ರೆಸ್ ಬಲ 134 ಆಗಿದೆ.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಏಕೈಕ ಶಾಸಕ ಜಿ.ಜನಾರ್ದನ ರೆಡ್ಡಿ, ಎನ್‌ಡಿಎ ಕಡೆ ಗುರುತಿಸಿಕೊಂಡಿದ್ದರೂ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು, ತಮ್ಮ ಸ್ನೇಹದ ಪ್ರಭಾವ ಬೆಳೆಸಿ ಅವರನ್ನು ರಾತ್ರೋರಾತ್ರಿ ತಮ್ಮ ಕಡೆ ಒಲಿಸಿಕೊಂಡಿದ್ದಾರೆ.

ಅಷ್ಟೇ ಅಲ್ಲ, ಗಣಿ ಹಗರಣದ ವಿರುದ್ಧ ಹೋರಾಟ ನಡೆಸಿ ಯಾರನ್ನು ವಿರೋಧ ಮಾಡಿದ್ದರೋ ಅದೇ ಜನಾರ್ದನ ರೆಡ್ಡಿ ಅವರನ್ನು ಅದೇ ಸಿದ್ದರಾಮಯ್ಯ ಇಂದು ಅಪ್ಪಿಕೊಂಡಿದ್ದಾರೆ. ಆಡಳಿತಾರೂಢ ಪಕ್ಷ ತನಗೆ ಬಹುಮತವಿದ್ದರೂ ಮೂವರು ಅಭ್ಯರ್ಥಿಗಳ ಗೆಲುವಿಗೆ ನಡೆಸುತ್ತಿರುವ ರಾಜಕೀಯ ತಂತ್ರಗಾರಿಕೆ ನಡುವೆಯೂ ಬಿಜೆಪಿ–ಜೆಡಿಎಸ್ ತನ್ನ ಎರಡನೇ ಅಭ್ಯರ್ಥಿಯ ಗೆಲುವಿಗಾಗಿ ಕಸರತ್ತು ಮುಂದುವರೆಸಿವೆ.

ಮಾಜಿ ಮುಖ್ಯಮಂತ್ರಿಗಳಾದ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಅವರ ಸಮ್ಮುಖದಲ್ಲಿ ಉಭಯ ಪಕ್ಷಗಳ ಮುಖಂಡರು ಸಭೆ ನಡೆಸಿ ತಮ್ಮ ಮತಗಳನ್ನು ಹಿಡಿದಿಟ್ಟುಕೊಳ್ಳುವುದರ ಜೊತೆಗೆ ತಮ್ಮದಲ್ಲದ ಮತಗಳನ್ನು ಪಡೆಯಲು ನಾಲ್ಕುಗೋಡೆಗಳ ನಡುವೆ ತಂತ್ರಗಾರಿಕೆ ನಡೆಸಿದ್ದಾರೆ.

ಅಲ್ಲದೆ, ಉಭಯ ಪಕ್ಷಗಳು ಪ್ರತ್ಯೇಕವಾಗಿ ಶಾಸಕಾಂಗ ಪಕ್ಷದ ಸಭೆಗಳನ್ನು ನಡೆಸಿ, ತಮ್ಮ ಶಾಸಕರನ್ನು ಹಿಡಿದಿಟ್ಟುಕೊಳ್ಳುವ ಕೆಲಸ ಮಾಡಿದ್ದಾರೆ. ಅಲ್ಲಿಯೇ ತಮ್ಮವರಿಗೂ ಮತದಾನ ಮಾಡುವ ಪಾಠ ಮಾಡಿದ್ದಾರೆ. ಮೂರೂ ಪಕ್ಷಗಳು ತಮ್ಮ ಶಾಸಕರಿಗೆ ವಿಪ್ ಜಾರಿಗೊಳಿಸಿರುವುದಲ್ಲದೆ, ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಪಂಚತಾರ ಹೋಟೆಲ್‌ಗೆ ತೆರಳಿದ್ದಾರೆ. ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್ ಮೂರು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ. ಬಿಜೆಪಿ ತನಗಿರುವ ಸಂಖ್ಯಾಬಲದ ಮೇಲೆ ತನ್ನ ಅಧಿಕೃತ ಅಭ್ಯರ್ಥಿ ಗೆಲ್ಲಿಸಿಕೊಂಡು ಹೆಚ್ಚುವರಿಯಾಗಿರುವ 21 ಮತಗಳನ್ನು ಎನ್‌ಡಿಎ ಮೈತ್ರಿಕೂಟದ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿಗೆ ನೀಡಲಿದೆ. ಜೆಡಿಎಸ್ ವಿಧಾನಸಭೆಯಲ್ಲಿ ಕೇವಲ 19 ಶಾಸಕರನ್ನು ಮಾತ್ರ ಹೊಂದಿದ್ದರೂ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಹೆಚ್ಚುವರಿಯಾಗಿರುವ ಬಿಜೆಪಿ, ಪಕ್ಷೇತರರ ಶಾಸಕರ ಬೆಂಬಲ ಒಳಗೊಂಡಂತೆ ತನ್ನ ಅಭ್ಯರ್ಥಿ ಗೆಲುವಿಗೆ ಇಂದು ಇಡೀ ದಿನ ಅಳೆದು ತೂಗಿ ನೋಡಿದರು. ರಾಜ್ಯಸಭೆಯ ಚುನಾವಣೆಯಲ್ಲಿ ಪ್ರಾಶಸ್ತ್ಯದ ಮತದಾನ ಮಾಡಬೇಕು. ಮತಪತ್ರದಲ್ಲಿ ಅಂಕಿಯಲ್ಲಿ 1, 2 ಎಂದು ನಮೂದಿಸುವ ಮೂಲಕ ಪ್ರಾಶಸ್ತ್ಯ ಕ್ರಮದಲ್ಲಿ ಮತ ಚಲಾಯಿಸಬೇಕು. ಅಕ್ಷರಗಳಲ್ಲಿ ನಮೂದಿಸಿ ಮತದಾನ ಮಾಡಿದರೂ, ಆಯಾ ಪಕ್ಷದ ಚುನಾವಣಾ ಏಜೆಂಟ್‌ಗೆ ತೋರಿಸಬೇಕು. ಬೇರೆ ಯಾರಿಗೂ ತೋರಿಸುವಂತಿಲ್ಲ. ಒಂದು ವೇಳೆ ಆಯಾ ಪಕ್ಷದ ಚುನಾವಣಾ ಏಜೆಂಟರನ್ನು ಹೊರತುಪಡಿಸಿ ಬೇರೆ ಯಾರಿಗೇ ತೋರಿಸಿದರೂ ಆ ಮತ ಅಸಿಂಧುವಾಗಲಿದೆ. ಆಯಾ ಅಭ್ಯರ್ಥಿಗೆ ಮತವನ್ನು ಸರಿಯಾಗಿ ಚಲಾಯಿಸಬೇಕು. ಇಬ್ಬರು ಅಭ್ಯರ್ಥಿಗಳ ಹೆಸರಿನ ನಡುವಿನ ಗೆರೆ ದಾಟಿದರೂ ಅಸಿಂಧುವಾಗಲಿದೆ. ಹೀಗಾಗಿ ರಾಜಕೀಯ ಪಕ್ಷಗಳು ಮತದಾನ ಮಾಡುವ ಬಗ್ಗೆ ಶಾಸಕರಿಗೆ ತರಬೇತಿಯನ್ನು ನೀಡಿವೆ. ಪಕ್ಷೇತರ ಅಭ್ಯರ್ಥಿಗಳು ಮತದಾನ ಮಾಡಿದ ಮತಪತ್ರ ಯಾರಿಗೂ ತೋರಿಸಬೇಕಿಲ್ಲ. ಒಂದು ವೇಳೆ ತೋರಿಸಿದರೆ ಆ ಮತ ಅಸಿಂಧುವಾಗಲಿದೆ.

ವಿಧಾನಸಭೆಯ 223 ಶಾಸಕರು ಮತದಾನ ಮಾಡುವ ಹಕ್ಕು ಪಡೆದಿದ್ದಾರೆ. ವಿಧಾನಸೌಧದಲ್ಲಿ ಬೆಳಗ್ಗೆ 9 ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೆ ಮತದಾನ ನಡೆಯಲಿದೆ. ಐದು ಗಂಟೆ ಬಳಿಕ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಮತದಾನ ಕೇಂದ್ರವು ಭಾರತ ಚುನಾವಣಾ ಆಯೋಗದ ವೆಬ್‌ಕಾಸ್ಟ್‌ಗೆ ಒಳಪಟ್ಟಿರುತ್ತದೆ. ಅಲ್ಲದೆ, ಸಿಸಿ ಕ್ಯಾಮೆರಾದ ನಿಗಾವಣೆಯಲ್ಲಿರುತ್ತದೆ.

ಮೈಸೂರಲ್ಲಿ ಪಂಜಿನ ಮೆರವಣಿಗೆ ಮೂಲಕ ವೀರ ಸಾವರ್ಕರ್ ಸ್ಮರಣೆ

ಸಾವರ್ಕರ್ ದಿಟ್ಟತನ, ತ್ಯಾಗ ಬಗ್ಗೆ ವಿವರಿಸಿದ ಹಿರಿಯ ನ್ಯಾಯವಾದಿ ಸಿ.ವಿ.ಕೇಶವಮೂರ್ತಿ

ಮೈಸೂರು,ಫೆ.26(ಪಿಎಂ)– ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಸ್ವಾತಂತ್ರ್ಯ ವೀರ ಸಾವರ್ಕರ್ ಸ್ಮೃತಿ ದಿನದ (ಪುಣ್ಯ ಸ್ಮರಣೆ) ಅಂಗವಾಗಿ ಸೋಮವಾರ ಸಂಜೆ ಪಂಜಿನ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ಗನ್‌ಹೌಸ್ ವೃತ್ತದ ಸಮೀಪದ ಬಸವೇಶ್ವರರ ಪ್ರತಿಮೆ ಎದುರಿನಿಂದ ಆರಂಭವಾದ ಮೆರವಣಿಗೆಯು, ಚಾಮರಾಜ ಜೋಡಿ ರಸ್ತೆಯಲ್ಲಿ ಸಾಗಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದ ಮುಖ್ಯದ್ವಾರದಲ್ಲಿ ಮುಕ್ತಾಯ ಕಂಡಿತು.

ಇದೇ ಸ್ಥಳದಲ್ಲಿ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ನ್ಯಾಯವಾದಿ ಸಿ.ವಿ.ಕೇಶವಮೂರ್ತಿ, ಸಾವರ್ಕರ್ ಅವರ ಅಭಿಲಾಷೆ, ಆಕಾಂಕ್ಷೆ, ಬದುಕು, ತ್ಯಾಗ, ಬಲಿದಾನದ ಫಲವನ್ನು ಕಂಡ ಈ ದೇಶ ಸಾವರ್ಕರ್ ಅವರನ್ನು ಸ್ಮರಿಸುವುದಿಲ್ಲ ಮತ್ತು ಅನುಸರಿಸುವುದಿಲ್ಲ. ಅಲ್ಲದೆ, ದ್ವೇಷಿಸುವವರು ಹೆಚ್ಚಾಗುತ್ತಿದ್ದಾರೆ. ಸಾವರ್ಕರ್ ಅವರನ್ನು ದ್ವೇಷಿಸುವುದು ಎಂದರೆ ಭಾರತವನ್ನು ದ್ವೇಷ ಮಾಡುವುದು ಎಂದರ್ಥ. ಸ್ವಾತಂತ್ರ್ಯ ವೀರ ಸಾವರ್ಕರ್ ಅವರನ್ನು ದ್ವೇಷ ಮಾಡುತ್ತಾರೆಂದರೆ ಅವರು ಭಾರತದಲ್ಲಿ ಇರಲು ನಾಲಾಯಕ್ ಎಂದು ಕಿಡಿಕಾರಿದರು.

ಕನಿಷ್ಠ ಸಂಖ್ಯೆಯಲ್ಲಿಯಾದರೂ ತರುಣರು ಇಲ್ಲಿ ಸೇರಿದ್ದಾರೆ ಎಂದರೆ ಸಾವರ್ಕರ್ ಅವರನ್ನು ಸ್ಮರಿಸುವವರೂ ದೇಶದಲ್ಲಿದ್ದಾರೆ. ಸಾವರ್ಕರ್ ಅವರದು ಸಾಧಾರಣ ಕುಟುಂಬ. ಅವರು ಬಾಲಕರಾಗಿದ್ದಾಗ ಒಂದು ದಿನ ದೇವರ ಕೋಣೆಯಲ್ಲಿ ಕುಳಿತು ಪ್ರಾರ್ಥನೆ ಮಾಡುತ್ತಾ, 'ಚಾಪೇಕರ್ ಬಂಧುಗಳೇ, ನಿಮ್ಮ ತ್ಯಾಗ ಬಲಿದಾನ ವ್ಯರ್ಥವಾಗಲು ಬಿಡುವುದಿಲ್ಲ' ಎಂದು ಶಪಥ ಮಾಡಿದ್ದರು ಎಂದರು.

ಮೂವರು ಸಹೋದರರಾದ ವಾಸುದೇವ ಚಾಪೇಕರ್, ದಾಮೋದರ ಚಾಪೇಕರ್, ಬಾಲಕೃಷ್ಣ ಚಾಪೇಕರ್ ದೇಶಕ್ಕಾಗಿ ನೇಣಿನ ಉರುಳಿಗೆ ಕೊರಳು ಕೊಟ್ಟವರು. ಪುಣೆಯಲ್ಲಿ ಬ್ರಿಟಿಷ್ ಅಧಿಕಾರಿಗಳ ದಾಂಧಲೆಯಿಂದ ಬೇಸತ್ತು ಬ್ರಿಟಿಷ್ ಅಧಿಕಾರಿ ರ‍್ಯಾಂಡ್ ಎಂಬಾತನನ್ನು ಕೊಂದ ಆರೋಪದಡಿ ಈ ಸಹೋದರರಿಗೆ ಗಲ್ಲು ಶಿಕ್ಷೆಯಾಯಿತು ಎಂದು ವಿವರಿಸಿದರು.

ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ನೂರಾರು ತರುಣರನ್ನು ಸಾವರ್ಕರ್ ತಯಾರು ಮಾಡಿದ್ದರು. 1857ರ ಮೇ 10ರಲ್ಲಿ ನಡೆದಿದ್ದು ಸಿಪಾಯಿ ದಂಗೆಯಲ್ಲ, ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ತೋರಿಸಿಕೊಟ್ಟವರು ಸಾವರ್ಕರ್. ಅದಕ್ಕೂ ಪೂರ್ವದಲ್ಲಿ ಬ್ರಿಟಿಷರು ಇದಕ್ಕೆ ಸಿಪಾಯಿ ದಂಗೆ ಎಂದು ಕರೆದು ದಿಕ್ಕು ತಪ್ಪಿಸಿದ್ದರು. ಈ ಸಂಗ್ರಾಮದ ಬಗ್ಗೆ ಪುಸ್ತಕ ಕೂಡ ಸಾವರ್ಕರ್ ಬರೆದು, ಅದಕ್ಕೆ ನಿರ್ಬಂಧ ವಿಧಿಸಿದಾಗ, ತಂತ್ರಗಳನ್ನು ರೂಪಿಸಿ ಸಾಕಷ್ಟು ಕ್ರಾಂತಿಕಾರಿಗಳ ಕೈಗೆ ಆ ಪುಸ್ತಕ ದೊರೆಯುವಂತೆಯೂ ಮಾಡಿದರು ಎಂದು ತಿಳಿಸಿದರು.

ಗಾಂಧಿಯವರೇ ನಿಮ್ಮ ಅಹಿಂಸಾತ್ಮಕ ಹೋರಾಟಕ್ಕೆ ಬ್ರಿಟಿಷರು ಬಗ್ಗುವುದಿಲ್ಲ ಎಂದೂ ಹೇಳಿದ್ದರು. ಆದರೆ ಗಾಂಧಿಯವರು ಅದಕ್ಕೆ ಕಿವಿಗೊಡಲಿಲ್ಲ. ಉಪ್ಪಿನ ಸತ್ಯಾಗ್ರಹಕ್ಕೆ ಹೋಗುವುದಕ್ಕೆ ಮುನ್ನ ಗಾಂಧಿಯವರು ಬ್ರಿಟಿಷ್ ವೈಸ್‌ರಾಯ್‌ಗೆ ಒಂದು ಪತ್ರ ಬರೆದು, ದೇಶದ ಕೂಲಿ ಕಾರ್ಮಿಕರ ವೇತನ ಹೆಚ್ಚಿಸುವಂತೆ ಕೋರಿದ್ದರು. ನಮ್ಮ ಜನರ ತೆರಿಗೆ ಹಣದಲ್ಲಿ ನಿಮ್ಮ ಅಧಿಕಾರಿಗಳ ಹೊಟ್ಟೆ ತುಂಬುತ್ತಿದ್ದೀರಿ. ನಮ್ಮ ಕಾರ್ಮಿಕರಿಗೆ ಸಂಬಳ ಹೆಚ್ಚು ಮಾಡಬೇಕೆಂದು ಪತ್ರ ಬರೆದಿದ್ದರು. ಆದರೆ ಅವರ ಪತ್ರ ತಿರಸ್ಕೃತಗೊಂಡಿತು ಎಂದು ಹೇಳಿದರು.

ಈ ಬಗ್ಗೆ ಗಾಂಧಿ ಅವರೇ 'ಮೊಣಕಾಲೂರಿ ರೊಟ್ಟಿ ಬೇಡಿದೆ, ಸಿಕ್ಕಿದ್ದು ಕಲ್ಲು' ಎಂದು ಬರೆದುಕೊಂಡಿದ್ದು, ಶಾಂತಿಯುತ, ಅಹಿಂಸಾತ್ಮಕ ಚಳುವಳಿಗೆ ಸಿಕ್ಕಿದ್ದು ಕಲ್ಲು. ಅಂತಹ ಸಂದರ್ಭದಲ್ಲಿ ಮುನ್ನುಗ್ಗಿದವರು ವೀರ ಸಾವರ್ಕರ್ ಎಂದರು.

ಆದಿತ್ಯ ಅಧಿಕಾರಿ ಆಸ್ಪತ್ರೆ ವೈದ್ಯ ಡಾ.ಚಂದ್ರಶೇಖರ್, ಪ್ರತಿಷ್ಠಾನದ ಅಧ್ಯಕ್ಷೆ ಡಾ.ಯಶಸ್ವಿನಿ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ. ಮಂಜುನಾಥ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮೈಸೂರು ಹನುಮಂತೋತ್ಸವ ಸಮಿತಿ ಸಂಚಾಲಕ ಸಂಜಯ್, ಮುಖಂಡರಾದ ರಾಕೇಶ್ ಭಟ್, ಶಿವಕುಮಾರ್, ಕುಮಾರ್, ವೀರ ಸಾವರ್ಕರ್ ಬಳಗದ ವಿಕ್ರಮ್ ಅಯ್ಯಂಗಾರ್, ಸಂದೇಶ ಪವಾರ್, ಜಯಸಿಂಹ, ನಿಶಾಂತ್, ಟಿ.ಎಸ್. ಅರುಣ್, ಮಧುಸೂದನ್, ರಂಗನಾಥ್, ಪ್ರತಾಪ್, ತ್ಯಾಗರಾಜ್, ಮಹಿಳಾ ಮುಖಂಡರಾದ ರಾಜಮಣಿ, ವಿನುತಾ, ಬಿಜೆಪಿ ಮುಖಂಡರಾದ ರಾ.ಪರಮೇಶ್ ಗೌಡ, ಹಿರಿಯಣ್ಣ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನಲ್ಲಿ ಸೋಮವಾರ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಸ್ವಾತಂತ್ರ ವೀರ ಸಾವರ್ಕರ್ ಸ್ಮೃತಿ ದಿನದ ಅಂಗವಾಗಿ ಪಂಜಿನ ಮೆರವಣಿಗೆ ನಡೆಸಲಾಯಿತು.

ನಾನು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಪುಷ್ಪಾ ಅಮರನಾಥ್ ಮಾತನಾಡಿದರು.

ಮೈಸೂರು, ಫೆ.26(ಜಿಎ)–ತಾವು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಆ ಕ್ಷೇತ್ರದಿಂದ ಟಿಕೆಟ್ ಕೇಳಿದ್ದು, ಅಲ್ಲಿ ಸ್ಪರ್ಧಿಸಿದರೆ ಗೆಲುವು ನಿಶ್ಚಿತ ಎಂಬುದರ ಬಗ್ಗೆ ಪಕ್ಷದ ವರಿಷ್ಠರಿಗೆ ಮನವರಿಕೆ ಮಾಡಿದ್ದೇನೆ ಎಂದರು.

ವಿಧಾನಸಭಾ ಚುನಾವಣೆ ವೇಳೆಯೂ ತಾವು ಟಿಕೆಟ್ ಆಕಾಂಕ್ಷಿಯಾಗಿದ್ದುದಾಗಿ ತಿಳಿಸಿದ ಅವರು, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ನನಗೆ ಆಗ ಟಿಕೆಟ್ ಸಿಗಲಿಲ್ಲ. ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕಾಗಿ ನಾವೇನು ಪಕ್ಷದ ವಿರುದ್ಧ ಹೋಗಿಲ್ಲ ಎಂದು ಹೇಳಿದ ಅವರು, ಚಾಮರಾಜನಗರ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್‌ಗೆ ಒಳ್ಳೆಯ ವಾತಾವರಣವಿದೆ. ತಾವು ಟಿಕೆಟ್ ಆಕಾಂಕ್ಷಿಯಾಗಿದ್ದರೂ ಪಕ್ಷ ಯಾರಿಗೇ ಟಿಕೆಟ್ ನೀಡಿದರೂ ಗೆಲುವೊಂದೇ ನಮಗೆ ಮಾನದಂಡ ಎಂಬ ಧೋರಣೆಯಲ್ಲಿ ಅವರ ಗೆಲುವಿಗಾಗಿ ಶ್ರಮಿಸುವುದಾಗಿ ಸ್ಪಷ್ಟಪಡಿಸಿದರು.

ಪ್ರಧಾನ ಮಂತ್ರಿ ಮೋದಿ ಅವರ ಗ್ಯಾರಂಟಿಗಳಲ್ಲಿ ಬೆಲೆ ಏರಿಕೆಯ ಗ್ಯಾರಂಟಿಗಳು ಮಾತ್ರ ಜನರಿಗೆ ತಲುಪುತ್ತಿದ್ದು, ಅಕ್ಕಿ, ಗೋಧಿ, ಬೇಳೆ ಸೇರಿದಂತೆ ಎಲ್ಲದರ ಬೆಲೆ ಹೆಚ್ಚಾಗಿದೆ. ಆದ್ದರಿಂದ ದಿನಬಳಕೆ ವಸ್ತುಗಳ ಮೇಲೆ ಕೇಂದ್ರ ಸರ್ಕಾರ ಸಬ್ಸಿಡಿ ನೀಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳು ಜನರ ಕೈ ಹಿಡಿದಿದೆ. ಆದರೆ, ಮಹಿಳೆಯರಿಗೆ ಕಾಂಗ್ರೆಸ್ ನೀಡುತ್ತಿರುವ ಗ್ಯಾರಂಟಿ ಹಣವನ್ನು ಬಿಜೆಪಿಯವರು ಟೀಕೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಮಹಾನುಭಾವರಿಗೆ ಜನರಿಗೆ ಒಳ್ಳೆಯ ಕೆಲಸ ಮಾಡುವ ಮನಸ್ಸಿಲ್ಲ. ರೈತರಿಗೆ ಕೇಂದ್ರ ಸರ್ಕಾರ ಅನ್ಯಾಯ ಮಾಡಿದ್ದನ್ನು ನಾವು ನೋಡಿದ್ದೇವೆ. ಕೇಂದ್ರ ಸರ್ಕಾರ ರಾಜ್ಯದಲ್ಲಿರುವ ಬರ ಪರಿಸ್ಥಿತಿಯನ್ನು ಸಹ ನೋಡದೇ ರೈತರ ಕ್ಷೇಮಾಭಿವೃದ್ಧಿ ಕಾಣದೇ ಹಣವನ್ನು ಕೊಡದೇ ಅನ್ಯಾಯ ಮಾಡಿದೆ ಎಂದರು.

ಕಳೆದ 10 ವರ್ಷದ ಅವಧಿಯಲ್ಲಿ ಮೋದಿಯವರು ಮಾಡಿದ ಒಂದು ಅಭಿವೃದ್ಧಿ ವಿಚಾರ ತಿಳಿಸಿ ಎಂದು ಪ್ರಶ್ನಿಸಿದ ಅವರು, ಕೇವಲ ರಾಮಮಂದಿರ ಕಟ್ಟುವುದೇ ಸಾಧನೆಯೇ, ಕಳೆದ ಬಾರಿ ಪುಲ್ವಾಮಾ ದಾಳಿ ವಿಚಾರ ಇಟ್ಕೊಂಡು ಗೆದ್ದರು. ಈ ಬಾರಿ ರಾಮಮಂದಿರ ವಿಚಾರ ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದೀರಿ. ಈ ರೀತಿ ಭಾವನಾತ್ಮಕ ವಿಷಯ ಇಟ್ಟುಕೊಂಡು ರಾಜಕೀಯ ಮಾಡುವುದು ಬಿಜೆಪಿ ಮಾತ್ರ ಎಂದು ವ್ಯಂಗ್ಯ ಮಾಡಿದರು. ಸುದ್ದಿಗೋಷ್ಠಿಯಲ್ಲಿ ವೇದವಲ್ಲಿ, ಲತಾ ಸಿದ್ದಶೆಟ್ಟಿ ಉಪಸ್ಥಿತರಿದ್ದರು.

ಮಾ.1ಕ್ಕೆ ಛಾಯಾ ಚಲನಚಿತ್ರ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಜಗ್ಗು ಮಾತನಾಡಿದರು.

ಮೈಸೂರು, ಫೆ.26(ಜಿಎ)–ಜೂ ಪುನೀತ್ ರಾಜ್‌ಕುಮಾರ್ ಅಭಿನಯದ 'ಛಾಯಾ' ಚಲನಚಿತ್ರವು ಮಾ.1ರಂದು ರಾಜ್ಯಾದ್ಯಂತ 40ಕ್ಕೂ ಅಧಿಕ ಚಿತ್ರಮಂದಿರದಲ್ಲಿ ತೆರೆಕಾಣಲಿದೆ ಎಂದು ಚಿತ್ರದ ನಿರ್ಮಾಪಕಿ ಎಂ.ಆರ್.ನಂದಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದಲ್ಲಿ ಹೊಸದಾಗಿ ಮದುವೆಯಾದ ದಂಪತಿ ಒಂದು ಮನೆಗೆ ಬಂದ ನಂತರ ಸಂಭವಿಸಲಿರುವ ಕೆಲವೊಂದು ವಿಚಿತ್ರ ಸಂಭವಿಸಲಿರುವ ಘಟನೆಗಳನ್ನು ಹಾರರ್ ಮೂಲಕ ತೋರಿಸಲಾಗಿದ್ದು, ಸಂಗೀತ ನಿರ್ದೇಶಕ ಮಂಜುಕವಿ ಅವರು 4 ಗೀತೆಗಳನ್ನು ನೀಡಿದ್ದಾರೆ. ಅದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಈ ವೇಳೆ ಚಿತ್ರದ ನಟ ಆನಂದ್ ಆರ್ಯ ಮಾತನಾಡಿ, ಚಿತ್ರವು ಉತ್ತಮ ಕಥೆಯಿಂದ ಕೂಡಿದ್ದು, ಬೆಂಗಳೂರು, ರಾಮನಗರ ಸೇರಿದಂತೆ ರಾಜ್ಯದ ವಿವಿಧ ಭಾಗದಲ್ಲಿ ಚಿತ್ರೀಕರಣ ಮಾಡಿ ಅದ್ಭುತವಾಗಿ ಮೂಡಿ ಬಂದಿದೆ ಕುಟುಂಬ ಸಮೇತ ಎಲ್ಲರೂ ಬಂದು ಚಿತ್ರ ವೀಕ್ಷಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಜಗ್ಗು, ಸಂಗೀತ ನಿರ್ದೇಶಕ ಮಂಜುಕವಿ, ರಾಜ್ ಪ್ರಭು ಉಪಸ್ಥಿತರಿದ್ದರು.

ದೆಹಲಿ ಚಲೋ ರೈತರ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರಲ್ಲಿ ರೈತರ ಪಂಜಿನ ಮೆರವಣಿಗೆ



ಮೈಸೂರು, ಫೆ26(ಎಸ್‌ಪಿಎನ್)– ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ದೆಹಲಿ ಗಡಿಯಲ್ಲಿ ಪ್ರತಿಭಟನೆಯಲ್ಲಿ ಭಾಗಿಯಾಗಿರುವ ರೈತರ ಮೇಲೆ ದೌರ್ಜನ್ಯ ನಡೆಸುತ್ತಿರುವ ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿ ಸಂಯುಕ್ತಕಿಸಾನ್ ಮೋರ್ಚಾ ಮೈಸೂರು ಘಟಕದ ಪದಾಧಿಕಾರಿಗಳು ಮೈಸೂರು ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಿಂದ ಗಾಂಧಿಚೌಕದವರೆಗೆ ಸೋಮವಾರ ರಾತ್ರಿ ಪಂಜಿನ ಮೆರವಣಿಗೆ ನಡೆಸಿದರು.

ಈ ಪಂಜಿನ ಮೆರವಣಿಗೆ ನೇತೃತ್ವವನ್ನು ಸಂಚಾಲಕ, ರೈತ ಮುಖಂಡ ಹೊಸಕೋಟೆ ಬಸವರಾಜು ವಹಿಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ಹೊರಹಾಕಿದರು. ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಭಾರತದ ರೈತರಿಗೆ ಮಾರಕವಾಗಿರುವ ಡಬ್ಲ್ಯೂಟಿಒ ಅಂತರರಾಷ್ಟ್ರೀಯ ಒಪ್ಪಂದದಿಂದ ಹೊರಬೇಕು. ರೈತ ವಿರೋಧಿ ನೀತಿಗಳನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

2020ರಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವೇಳೆ ರೈತ ಮುಖಂಡರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ಹಿಂಪಡೆಯಬೇಕು. ರೈತರು ಬೆಳೆದ ಬೆಳೆಗಳಿಗೆ ಬೆಂಬಲ ನಿಗದಿಗೊಳಿಸುವ ಎಂಎಸ್‌ಪಿ ಕಾನೂನು ಜಾರಿಯಾಗಬೇಕು. 60 ವರ್ಷ ದಾಟಿದ ರೈತರಿಗೆ ಮಾಸಾಶನ ನೀಡಬೇಕು. ಈ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಮೇಲೆ ದೌರ್ಜನ್ಯವೆಸಗುತ್ತಿರುವ ಕೇಂದ್ರ ಸರ್ಕಾರದ ಧೋರಣೆಯನ್ನು ಬಲವಾಗಿ ಖಂಡಿಸಿದರು.

ಈ ಮೆರವಣಿಗೆಯಲ್ಲಿ ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ರೈತ ಮುಖಂಡರಾದ ಉಗ್ರ ನರಸಿಂಹೇಗೌಡ ಮರಂಕಯ್ಯ, ಜಗದೀಶ್ ಸೂರ್ಯ, ಕಾರ್ಮಿಕ ಮುಖಂಡ ರಾಜೇಂದ್ರ, ದ್ಯಾವಪ್ಪ ನಾಯಕ, ಸಿಐಟಿಯು ಜಯರಾಮ್, ಅನಿಲ್ ಕುಮಾರ್, ಕಲ್ಲಹಳ್ಳಿ ಕುಮಾರ್ ಸೇರಿದಂತೆ ಇತರೆ ಮುಖಂಡರಿದ್ದರು.

ಮೈಸೂರು–ವೆಲಂಕಣಿ ರೈಲು ಸಂಪರ್ಕಕ್ಕೆ ಸಂಸದ ಪ್ರತಾಪ ಸಿಂಹರಿಗೆ ಕ್ರೈಸ್ತ ಬಾಂಧವರ ಮನವಿ



ಮೈಸೂರು, ಫೆ.26(ಎಸ್‌ಪಿಎನ್)– ಕ್ರೈಸ್ತ ಸಮುದಾಯದ ಪುಣ್ಯಕ್ಷೇತ್ರವಾದ ತಮಿಳುನಾಡಿನ ನಾಗಪಟ್ಟಣಂ ಜಿಲ್ಲೆ ವೆಲಂಕಣಿಗೆ ಮೈಸೂರಿಂದ ನೇರ ರೈಲು ಸಂಪರ್ಕ(ಮೈಸೂರು–ವೆಲಂಕಣಿಗೆ) ಕಲ್ಪಿಸುವಂತೆ ಮೈಸೂರು ವಿಭಾಗದ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಹಾಗೂ ಮೈಸೂರು ಧರ್ಮ ಪ್ರಾಂತ್ಯ ಕ್ರೈಸ್ತಜನರ ಅಭಿವೃದ್ಧಿ ಸಂಘದ ಪದಾಧಿಕಾರಿಗಳು ಸಂಸದ ಪ್ರತಾಪ ಸಿಂಹ ಕಚೇರಿಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ.

ಮೈಸೂರು ವಿಭಾಗದ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಸಂಘದ ಅಧ್ಯಕ್ಷ ಜೆ.ಸ್ಟೀಫನ್ ಸುಜೀತ್ ನೇತೃತ್ವದಲ್ಲಿ ಸಂಸದರ ಕಚೇರಿಗೆ ಸಲ್ಲಿಸಿರುವ ಮನವಿಯಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ವೆಲಂಕಣಿ ಪ್ರಾಂತ್ಯ ಕ್ಯಾಥೋಲಿಕ್ ಕ್ರೈಸ್ತ ಸಮುದಾಯದವರಿಗೆ ಪುಣ್ಯಕ್ಷೇತ್ರವಾಗಿದ್ದು, ಇಲ್ಲಿಗೆ ನೇರ ರೈಲು ಸಂಪರ್ಕ ಕಲ್ಪಿಸಲು ಕೇಂದ್ರ ರೈಲ್ವೆ ಇಲಾಖೆಯೊಂದಿಗೆ ಮಾತುಕತೆ ನಡೆಸುವಂತೆ ಕೋರಿದ್ದಾರೆ.

ಈ ವೇಳೆ ಮೈಸೂರು ವಿಭಾಗದ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್‌ನ ಪದಾಧಿಕಾರಿಗಳಾದ ಎಲ್ವಿನ್, ಜಾನ್ ಫರ್ನಾಂಡಿಸ್ ಬೆನ್ನಿ, ಅಂಬ್ರುಸ್ ಜಾರ್ಜ್, ಮರಿಯಾ ಫ್ರಾನ್ಸಿಸ್, ಸ್ಟಾಲಿನ ಜಿಗ್ಲೆರ್, ಪ್ರಶಾಂತ್ ಆರೋಗ್ಯ ರಾಜ್, ಸಂತೋಷ್ ಮತ್ತು ಹಿರಿಯ ಮುಖಂಡರಾದ ಸವರಿದಾಸ್ ಡಾಮಿನಿಕ್, ಮರಿ ಜೋಸೆಫ್, ಚಿನ್ನಪ್ಪ, ಫೇಡ್ರಿಕ್ ಡಿಸೋಜಾ, ಸೈಮನ್ ಉಪಸ್ಥಿತರಿದ್ದರು.

ಬಿರು ಬೇಸಿಗೆಯಲ್ಲಿ ನೀರಿಗೆ ಹಾಹಾಕಾರ

ಪ್ರಾಣಿ ಪಕ್ಷಿಗಳ ಸಂರಕ್ಷಿಸಲು 'ಮೂಕ ಸ್ಪಂದನೆ' ಅಭಿಯಾನ



ಮೈಸೂರಿನ ಚಾಮುಂಡಿಪುರಂನಲ್ಲಿ ತಗಡೂರು ರಾಮಚಂದ್ರರಾವ್ ಉದ್ಯಾನದಲ್ಲಿ ಪಕ್ಷಿಗಳಿಗಾಗಿ ಕುಡಿಯುವ ನೀರು ಪೂರೈಸುವ ಅಭಿಯಾನಕ್ಕೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ ನೀಡಿದರು

ಮೈಸೂರು,ಫೆ.26(ಎಂಟಿವೈ)– ಬೇಸಿಗೆಯಲ್ಲಿ ಪ್ರಾಣಿ–ಪಕ್ಷಿ ಸಂಕುಲಕ್ಕೆ ಕುಡಿಯಲು ನೀರು ಹಾಗೂ ಆಹಾರ ಪೂರೈಸಲು ನಾಗರಿಕರು ನೆರವಾಗಬೇಕು ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸಲಹೆ ನೀಡಿದ್ದಾರೆ.

ಮೈಸೂರಿನ ಚಾಮುಂಡಿಪುರಂನಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನದಲ್ಲಿ 'ಮೂಕ ಸ್ಪಂದನೆ' ಪಕ್ಷಿ ಸಂಕುಲಕ್ಕೆ ನೀರುಣಿಸುವ ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಣಿ–ಪಕ್ಷಿಗಳು ಮನುಷ್ಯನ ಒಡನಾಡಿಯಾಗಿವೆ. ಮನುಷ್ಯನದು ಇವುಗಳೊಂದಿಗೆ ಸಹಬಾಳ್ವೆ, ಬೇಸಿಗೆ ಹಾಗೂ ಬರಗಾಲದ ಹಿನ್ನೆಲೆಯಲ್ಲಿ ಪ್ರಾಣಿ–ಪಕ್ಷಿಗಳಿಗೆ ಕುಡಿಯುವ ನೀರು ಹಾಗೂ ಆಹಾರದಲ್ಲಿ ವ್ಯತ್ಯಯ ಉಂಟಾಗುತ್ತದೆ. ಅದರಲ್ಲೂ ನಗರ ಪ್ರದೇಶದಲ್ಲೇ ನೆಲೆ ಕಂಡುಕೊಂಡಿರುವ ಪ್ರಾಣಿ–ಪಕ್ಷಿ ಸಂಕುಲಕ್ಕೆ ಕುಡಿಯುವ ನೀರಿನ ಅಭಾವ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಆಯೋಜಿಸಿರುವ ಎರಡು ತಿಂಗಳ ಮೂಕಸ್ಪಂದನೆ ಅಭಿಯಾನ ಮಹತ್ವಪೂರ್ಣದ್ದಾಗಿದ್ದು, ಈ ಅಭಿಯಾನಕ್ಕೆ ಸಾರ್ವಜನಿಕರು ಕೈ ಜೋಡಿಸಿ, ತಮ್ಮ ಮನೆಗಳ ಮುಂದೆ, ಮೇಲ್ಚಾವಣಿಯಲ್ಲಿ ಪ್ರಾಣಿ – ಪಕ್ಷಿಗಳಿಗೆ ಆಹಾರ–ಕುಡಿಯಲು ನೀರಿಡಬೇಕು. ಆಗ ಮಾತ್ರ ಅವುಗಳು ಉಳಿಯಲು ಸಾಧ್ಯ ಎಂದರು.

ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್ ಮಾತನಾಡಿ, ಪಕ್ಷಿಗಳಿಗೆ ಕುಡಿಯಲು ನೀರುಣಿಸುವ ಅಭಿಯಾನಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ. ಸಾರ್ವಜನಿಕರು ಪ್ರಾಣಿ ಮತ್ತು ಪಕ್ಷಿಗಳಿಗೆ ನೀರು ಪೂರೈಸಲು ನೀರಿನ ತೊಟ್ಟಿ ಇಡುವುದು, ಮರಗಳಿಗೆ ನೀರಿನ ಹಾಗೂ ಆಹಾರದ ತಟ್ಟೆ ನೇತು ಹಾಕುವುದು ಒಳ್ಳೆಯದು ಎಂದು ಮನವಿ ಮಾಡಿದರು.

ಇದೇ ವೇಳೆ ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ ಮಾತನಾಡಿ, ಎಲ್ಲರೂ ತಮ್ಮ ಮನೆಗಳ ತಾರಸಿಯ ಮೇಲೆ, ಮರಗಳ ಕೆಳಗೆ, ಮನೆಯ ಮುಂದಿನ ರಸ್ತೆಯ ಬದಿ ಮರಗಳಿಗೆ ಪ್ರಾಣಿ ಪಕ್ಷಿಗಳ ಬಾಯಿಗೆ ಎಟುಕುವಂತೆ ಮಣ್ಣಿನ ಬಟ್ಟಲು ಅಥವಾ ಸಣ್ಣ ಸಿಮೆಂಟ್ ತೊಟ್ಟಿಗಳನ್ನಿಟ್ಟು ಅದರಲ್ಲಿ ಶುದ್ಧ ನೀರನ್ನು ತುಂಬಿಡಬೇಕು. ಆಹಾರ ಧಾನ್ಯ ಮಿತವಾಗಿಟ್ಟು ಅವುಗಳಿಗೆ ನೆರವಾಗಬೇಕು ಎಂದರು.

ಅಭಿಯಾನದಲ್ಲಿ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮ್ ಪ್ರಸಾದ್, ಅಪೂರ್ವ ಸುರೇಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಮೃಗಾಲಯ ಪ್ರಾಧಿಕಾರದ ಮಾಜಿ ಸದಸ್ಯೆ ಜ್ಯೋತಿ ರೇಚಣ್ಣ, ಮುಖಂಡರಾದ ಕಹೊಳ ಜಗದೀಶ್, ಅಖಿಲ ಭಾರತೀಯ ಗ್ರಾಹಕ ಪಂಚಾಯಿತಿ ಮೈಸೂರು ಘಟಕದ ಅಧ್ಯಕ್ಷ ಚಂದ್ರಶೇಖರ್, ರಾಕೇಶ್, ಮಿರ್ಲೆ ಫಣೀಶ್, ಸುಚೇಂದ್ರ, ವಿದ್ಯಾ, ನಾಗಶ್ರೀ, ದಯಾನಂದ, ಮೈಲಾ ವಿಜಯ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಚೆನ್ನೈ, ಹೈದರಾಬಾದ್‌ಗೆ ಮಾತ್ರ ಮೈಸೂರಿಂದ ವಿಮಾನ ಹಾರಾಟ

ಕೊಚ್ಚಿನ್, ಗೋವಾ, ಬೆಳಗಾವಿ, ಹುಬ್ಬಳ್ಳಿ, ಕಲಬುರ್ಗಿ ಫ್ಲೈಟ್‌ಗಳು ರದ್ದು



ಮೈಸೂರು, ಫೆ. 26(ಆರ್‌ಕೆ)– ಮೈಸೂರಿನಿಂದ ಹೈದರಾಬಾದ್ ಮತ್ತು ಚೆನ್ನೈ ನಗರಗಳಿಗೆ ಮಾತ್ರ ಇಂಡಿಗೋ ವಿಮಾನಗಳು ಹಾರಾಟ ನಡೆಸುತ್ತಿವೆ.

ಮಧ್ಯಾಹ್ನ 12.30 ಗಂಟೆಗೆ ಹೈದರಾಬಾದ್‌ನಿಂದ ಮೈಸೂರಿಗೆ ಬರುವ ಇಂಡಿಗೋ ವಿಮಾನ, ಮಧ್ಯಾಹ್ನ 1.15 ಗಂಟೆಗೆ ಮೈಸೂರಿನಿಂದ ಹೈದರಾಬಾದ್‌ಗೆ ತೆರಳಲಿದೆ. ಅದೇ ರೀತಿ ಸಂಜೆ 6.30 ಗಂಟೆಗೆ ಚೆನ್ನೈನಿಂದ ಬರುವ ವಿಮಾನವು ರಾತ್ರಿ 7.40 ಗಂಟೆಗೆ ಮತ್ತೆ ಚೆನ್ನೈಗೆ ಪ್ರಯಾಣ ಬೆಳೆಸಲಿದೆ.

ಸದ್ಯ ಇಂಡಿಗೋ ಮಾತ್ರ ಚೆನ್ನೈ ಮತ್ತು ಹೈದರಾಬಾದ್ ನಗರಗಳಿಗೆ ಮೈಸೂರಿನಿಂದ ಕಾರ್ಯಾಚರಣೆ ಮಾಡುತ್ತಿದ್ದು, ಈ ಹಿಂದೆ ಸೇವೆ ಒದಗಿಸುತ್ತಿದ್ದ ಅಲಯನ್ಸ್ ಏರ್ ಸಂಸ್ಥೆಯು ತನ್ನ ಫ್ಲೈಟ್‌ಗಳ ಸೇವೆಯನ್ನು ರದ್ದುಗೊಳಿಸಿದೆ ಎಂದು ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಜೆಆರ್.ಅನೂಪ್ ತಿಳಿಸಿದ್ದಾರೆ.

ಮೈಸೂರಿನಿಂದ ಕೊಚ್ಚಿ ಮತ್ತು ಗೋವಾ ಹಾರಾಟ ಹಿಂದೆಯೇ ಸ್ಥಗಿತಗೊಂಡಿದ್ದು, ಬೆಳಗಾವಿ, ಹುಬ್ಬಳ್ಳಿ ಮತ್ತು ಕಲಬುರಗಿ ನಗರಗಳ ಹಾರಾಟ ವಾರದ ಹಿಂದಷ್ಟೇ ಸ್ಥಗಿತಗೊಂಡಿದೆ. ಇದೀಗ ನಾವು ಕೊಚ್ಚಿ, ಗೋವಾ ಮತ್ತು ಬೆಳಗಾವಿ ನಗರಗಳಿಗೆ ಸಂಪರ್ಕ ಸೇವೆ ಕಲ್ಪಿಸಲು ಎಟಿಆರ್ ವಿಮಾನ ಹೊಂದಿರುವ ಸಂಸ್ಥೆಗಳೊಂದಿಗೆ ಚರ್ಚಿಸುತ್ತಿದ್ದೇವೆ ಎಂದು ಅನೂಪ್ ತಿಳಿಸಿದರು.

ಒಂದು ಸಮಯದಲ್ಲಿ ಮೈಸೂರಿಂದ ಬೆಂಗಳೂರು, ಚೆನ್ನೈ, ಹೈದರಾಬಾದ್, ಕೊಚ್ಚಿ, ಗೋವಾ, ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ ನಗರಗಳಿಗೆ ಇಂಡಿಗೋ, ಅಲಯನ್ಸ್ ಏರ್ ಸಂಸ್ಥೆಗಳು ವಿಮಾನ ಸೇವೆ ಕಲ್ಪಿಸಿದ್ದು, ಬಹುತೇಕ ಆಸನಗಳು ಭರ್ತಿಯಾಗುತ್ತಿದ್ದವು. ಪ್ರವಾಸೋದ್ಯಮ, ಕೈಗಾರಿಕೆ, ವಾಣಿಜ್ಯ, ಹೋಟೆಲ್ ಉದ್ಯಮಗಳ ಅಭಿವೃದ್ಧಿಗೆ ವಿಮಾನ ಸಂಪರ್ಕ ಪೂರಕವಾಗಿತ್ತು. ಆದರೆ, ಈಗ ಎರಡು ನಗರಗಳಿಗೆ ಮಾತ್ರ ವಿಮಾನ ಸೇವೆ ಸೀಮಿತವಾಗಿರುವುದರಿಂದ ಉದ್ಯಮಿಗಳಿಗೆ ಅನಾನುಕೂಲವಾಗುತ್ತಿದೆ.

ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ

ಹೆದ್ದಾರಿ ಟೋಲ್ ಸೇರಿದಂತೆ ವಿವಿಧೆಡೆ ಟ್ರಾನ್ಸಿಟ್ ಬೂತ್ ವ್ಯವಸ್ಥೆ

ಮೈಸೂರು, ಫೆ.26(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಹೆದ್ದಾರಿ ಟೋಲ್‌ಗಳು ಸೇರಿದಂತೆ ವಿವಿಧೆಡೆ ಸಂಚಾರಿ ಟ್ರಾನ್ಸಿಟ್ ಬೂತ್(Transit Booth) ವ್ಯವಸ್ಥೆ ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ದೇಶಾದ್ಯಂತ ಮಾರ್ಚ್ 3ರಿಂದ ನಾಲ್ಕು ದಿನ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಯಲಿದ್ದು, ಮೈಸೂರು ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಮೈಸೂರು–ನಂಜನಗೂಡು ಹಾಗೂ ಮೈಸೂರು–ತಿ.ನರಸೀಪುರ ಹೆದ್ದಾರಿಗಳ ಟೋಲ್‌ಗಳಲ್ಲೂ ಲಸಿಕಾ ಬೂತ್ ಆರಂಭಿಸಲು ನಿರ್ಧರಿಸಲಾಗಿದೆ. ಜೊತೆಗೆ ಪ್ರಯಾಣ ಹಾಗೂ ಪ್ರವಾಸದ ಕಾರಣದಿಂದ ಮಕ್ಕಳು ಲಸಿಕೆಯಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ, ನಗರ ಬಸ್ ನಿಲ್ದಾಣ, ರೈಲು ನಿಲ್ದಾಣ, ಖಾಸಗಿ ಬಸ್ ನಿಲ್ದಾಣ, ಚಾಮುಂಡಿಬೆಟ್ಟ, ಅರಮನೆ, ಮೃಗಾಲಯ ಸೇರಿದಂತೆ



ಪ್ರವಾಸಿ ಸ್ಥಳಗಳಲ್ಲಿ ಟ್ರಾನ್ಸಿಟ್ ಬೂತ್‌ಗಳನ್ನು ತೆರೆಯಲಾಗುತ್ತಿದೆ.

ಈ ಬಾರಿಯ ಗುರಿ: ಮೈಸೂರು ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ಈ ಬಾರಿ ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಒಟ್ಟು 2,31,354 ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಈ ನಿಟ್ಟಿನಲ್ಲಿ ಸದ್ಯ ನಗರ ವ್ಯಾಪ್ತಿಯಲ್ಲಿ 88,844, ಮೈಸೂರು ಗ್ರಾಮಾಂತರದಲ್ಲಿ 27,112, ತಿ.ನರಸೀಪುರದಲ್ಲಿ 19,080, ನಂಜನಗೂಡು 23,813, ಹೆಚ್.ಡಿ.ಕೋಟೆ 19,309, ಹುಣಸೂರು 18,286, ಪಿರಿಯಾಪಟ್ಟಣ 17,878 ಹಾಗೂ ಕೆ.ಆರ್.ನಗರ ತಾಲೂಕಿನಲ್ಲಿ 17,032 ಮಕ್ಕಳನ್ನು ಗುರುತಿಸಲಾಗಿದೆ.

ಜಿಲ್ಲೆಯಲ್ಲಿ 1,612 ಬೂತ್: ಟ್ರಾನ್ಸಿಟ್

> **ಜಿಲ್ಲೆಯಲ್ಲಿ ಪೋಲಿಯೋ ಲಸಿಕೆ ಕಾರ್ಯಕ್ರಮ**
> - ಮಾ.3ಕ್ಕೆ 1,612 ಬೂತ್‌ಗಳಲ್ಲಿ ಲಸಿಕೆ ಲಭ್ಯ
> - ಮಾ.4–6ರವರೆಗೆ ಮನೆ ಮನೆ ಅಭಿಯಾನ
> - ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಕಡ್ಡಾಯ
> - 2,31,354 ಮಕ್ಕಳಿಗೆ ಲಸಿಕೆ ನೀಡುವ ಗುರಿ
> - 6,564 ಲಸಿಕಾ ಕಾರ್ಯಕರ್ತರು ಸಜ್ಜು
> - ಟೋಲ್‌ಗಳಲ್ಲೂ ಲಸಿಕೆ ಬೂತ್

ಬೂತ್‌ಗಳು ಸೇರಿದಂತೆ ಮೈಸೂರು ನಗರದಲ್ಲಿ 330, ಗ್ರಾಮಾಂತರದಲ್ಲಿ 147, ತಿ.ನರಸೀಪುರದಲ್ಲಿ 181, ನಂಜನಗೂಡು 216, ಹೆಚ್.ಡಿ.ಕೋಟೆ 198, ಹುಣಸೂರು 208, ಪಿರಿಯಾಪಟ್ಟಣ 156 ಹಾಗೂ ಕೆ.ಆರ್.ನಗರ ತಾಲೂಕಿನಲ್ಲಿ 176 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 1,612 ಪೋಲಿಯೊ ಲಸಿಕಾ ಬೂತ್‌ಗಳನ್ನು ತೆರೆಯಲಾಗುತ್ತದೆ. ಮೈಸೂರು ನಗರದಲ್ಲಿ 1344 ಮಂದಿ ಸೇರಿ ಜಿಲ್ಲೆಯಾದ್ಯಂತ ಒಟ್ಟು 6,564 ಲಸಿಕಾ ಕಾರ್ಯಕರ್ತರು ಕಾರ್ಯ ನಿರ್ವಹಿಸಲಿದ್ದಾರೆ.

ಬೂತ್‌ನಲ್ಲಿ ಒಂದೇ ದಿನ: ಪೋಲಿಯೊ ಲಸಿಕೆ ಕಾರ್ಯಕ್ರಮ ನಾಲ್ಕು ದಿನಗಳ ಕಾಲ ನಡೆದರೂ ನಿಗದಿತ ಬೂತ್‌ಗಳು ಕಾರ್ಯ ನಿರ್ವಹಿಸುವುದು ಮಾ.3ರಂದು ಮಾತ್ರ. ಲಸಿಕೆ ನೀಡಿದ ಮಕ್ಕಳ ಎಡಗೈ ಕಿರುಬೆರಳಿಗೆ ಶಾಯಿ ಹಾಕಲಾಗುತ್ತದೆ. ನಂತರ ಮಾ.4, 5 ಮತ್ತು 6 ರಂದು ಲಸಿಕಾ ಕಾರ್ಯಕರ್ತರು ಮನೆ ಮನೆಗೆ ತೆರಳಿ ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಲಿದ್ದಾರೆ. ಮನೆಯಲ್ಲಿರುವ ಮಕ್ಕಳ ವಯಸ್ಸು ಕೇಳಿ, ಅವರ ಎಡಗೈ ಕಿರುಬೆರಳನ್ನು ಪರಿಶೀಲಿಸುತ್ತಾರೆ. ಶಾಯಿ ಇಲ್ಲದ ಮಕ್ಕಳಿಗೆ ಸ್ಥಳದಲ್ಲೇ ಲಸಿಕೆ ಹಾಕಿ, ಮನೆ ಮುಂಭಾಗ ಲಸಿಕೆ ನೀಡಲಾಗಿದೆ ಎಂಬ ಸೂಚ್ಯಕ ಗುರುತು ಹಾಕಲಾಗುತ್ತದೆ. ಐದು ವರ್ಷದೊಳಗಿನ ಮಕ್ಕಳಿರುವ ಮನೆಯಲ್ಲಿ ಬೀಗ ಹಾಕಿದ್ದರೂ ನೆರೆಹೊರೆಯವರ ಬಳಿ ಪೋಷಕರ ಮೊಬೈಲ್ ಸಂಖ್ಯೆ ಪಡೆದು ಲಸಿಕೆ ಬಗ್ಗೆ ಮಾಹಿತಿ ನೀಡುತ್ತಾರೆ.

ಶೇ.100ರಷ್ಟು ಸಾಧನೆ ಗುರಿ: ಜಿಲ್ಲೆಯಲ್ಲಿರುವ ಐದು ವರ್ಷದೊಳಗಿನ ಪ್ರತಿ ಮಗುವಿಗೂ ಪೋಲಿಯೊ ಲಸಿಕೆ ನೀಡಬೇಕೆಂಬ ಗುರಿಯೊಂದಿಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳ ಮಾರ್ಗದರ್ಶನದಲ್ಲಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಮಾ.3ರಂದು ಶಾಲೆ ಇನ್ನಿತರ ಸ್ಥಳಗಳಲ್ಲಿ ತೆರೆಯಲಾಗುವ ನಿಗದಿತ ಬೂತ್‌ಗಳಲ್ಲಿ ಲಸಿಕೆ ನೀಡಲಾಗುತ್ತದೆ. ಮಕ್ಕಳಿಗೆ ಎಲ್ಲಾದರೂ ಲಸಿಕೆ ಲಭ್ಯವಾಗುವಂತೆ ಈ ಬಾರಿ ಎರಡು ಟೋಲ್‌ಗಳು ಹಾಗೂ ಬಸ್–ರೈಲ್ವೆ ನಿಲ್ದಾಣಗಳು, ಪ್ರವಾಸಿ ಸ್ಥಳಗಳಲ್ಲೂ ಟ್ರಾನ್ಸಿಟ್ ಬೂತ್ ತೆರೆಯಲಾಗುತ್ತಿದೆ. ನಂತರ ಮೂರು ದಿನ ಮನೆ ಮನೆಗೆ ತೆರಳಿ ಲಸಿಕೆ ನೀಡಲು ಕಾರ್ಯಕರ್ತರನ್ನು ಸಜ್ಜುಗೊಳಿಸಲಾಗಿದೆ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಎಂ.ಎಸ್. ಜಯಂತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬಟ್ಟೆ ಗಲೀಜಾದ ರೈತನಿಗೆ ಮೆಟ್ರೋ ಹತ್ತಿಸಲು ನಿರಾಕರಣೆ

ನಮ್ಮ ಮೆಟ್ರೋ ಸಿಬ್ಬಂದಿ ವಜಾ



ನಿರಾಕರಿಸಲ್ಪಟ್ಟ ರೈತ

ಬೆಂಗಳೂರು: ಬಟ್ಟೆ ಕ್ಲೀನ್ ಇಲ್ಲವೆಂದು ರೈತನನ್ನು ಒಳಗೆ ಬಿಡದ ಮೆಟ್ರೋ ಸಿಬ್ಬಂದಿಯನ್ನು ವಜಾಗೊಳಿಸಲಾಗಿದೆ ಎಂದು ಎಂಡಿ ಮಹೇಶ್ವರನ್ ಹೇಳಿದ್ದಾರೆ.

ಹಾಕಿಕೊಂಡಿರುವ ಬಟ್ಟೆ ಕ್ಲೀನ್ ಇಲ್ಲ ಎಂಬ ಕಾರಣಕ್ಕಾಗಿ ರೈತರೊಬ್ಬರನ್ನು ಮೆಟ್ರೋ ಪ್ರವೇಶಿಸಲು ಅವಕಾಶ ನೀಡದೆ ಅಪಮಾನ ಮಾಡಿದ ಘಟನೆ ಬೆಂಗಳೂರಿನಲ್ಲಿ ನಡೆದಿದ್ದು, ಜಾಲತಾಣದಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿತ್ತು.

ನಮ್ಮ ಮೆಟ್ರೋ ಸಿಬ್ಬಂದಿ ಮಾನವೀಯತೆಯನ್ನೇ ಮರೆತು ದೇಶದ ಬೆನ್ನೆಲುಬಾಗಿರುವ ರೈತನಿಗೆ ಅಪಮಾನ ಮಾಡಿದ್ದಾರೆ ಎಂಬ ಆಕ್ರೋಶ ಈಗ ಭುಗಿಲೆದ್ದಿದೆ. ಬೆಂಗಳೂರಿನ ರಾಜಾಜಿನಗರದ ಮೆಟ್ರೋ ಸ್ಟೇಷನ್‌ನಲ್ಲಿ ಮೆಟ್ರೋ ಸಿಬ್ಬಂದಿ ನಡೆಸಿರುವ ಈ ಅತಿರೇಕದ ವರ್ತನೆ ಸಹಪ್ರಯಾಣಿಕರೊಬ್ಬರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಬಳಿಕ ಸಹಪ್ರಯಾಣಿಕರು ಸಿಬ್ಬಂದಿ ಬಗ್ಗೆ ತಲೆಕೆಡಿಸಿಕೊಳ್ಳದೆ, ವ್ಯಕ್ತಿಯನ್ನು ಮೆಟ್ರೋದಲ್ಲಿ ಕರೆದೊಯ್ದಿದ್ದಾರೆ. ಅಲ್ಲದೇ ಮೆಟ್ರೋ ಸಿಬ್ಬಂದಿ ವಿರುದ್ಧ ಸಹ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಲೆಯ ಮೇಲೆ ಬಟ್ಟೆಯ ಮೂಟೆಯೊಂದನ್ನು ಹೊತ್ತುಕೊಂಡು ಬಂದ ವ್ಯಕ್ತಿಯೊಬ್ಬರನ್ನು ಮೆಟ್ರೋ ಸುರಕ್ಷತಾ ತಪಾಸಣೆ ಸಿಬ್ಬಂದಿ ತಡೆದಿದ್ದಾರೆ. ಆಗ ಅದನ್ನು ನೋಡಿದ ಸಹಪ್ರಯಾಣಿಕರೊಬ್ಬರು ಅವರನ್ನು ಯಾಕೆ ಒಳಗೆ ಬಿಡುತ್ತಿಲ್ಲ ಎಂದು ಕೇಳಿದ್ದಾರೆ. ಆಗ ಸಿಬ್ಬಂದಿ ಅವರ ಬಟ್ಟೆ ಗಲೀಜಾಗಿದೆ, ಹೀಗಿದ್ದರೆ ಸಹ ಪ್ರಯಾಣಿಕರಿಗೆ ಅಸಹ್ಯವಾಗುತ್ತದೆ. ಆ ಕಾರಣಕ್ಕಾಗಿ ಒಳಗೆ ಬಿಡಲಾಗುತ್ತಿಲ್ಲ ಎಂದು ಹೇಳಿದರು.

ಇದಕ್ಕೆ ಸಹಪ್ರಯಾಣಿಕರು ಭದ್ರತಾ ಸಿಬ್ಬಂದಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಮೆಟ್ರೋ ಪ್ರಯಾಣಿಕರು ಯಾವ ರೀತಿಯ ಬಟ್ಟೆ ಧರಿಸಬೇಕು ಎಂದು ಎಲ್ಲಾದರೂ ನಿಯಮವಿದೆಯಾ ಎಂದು ಕೇಳಿದ ಸಹಪ್ರಯಾಣಿಕರು ರೈತರಿಗೆ ಈ ರೀತಿ ಅಪಮಾನ ಮಾಡಿದ್ದು ಸರಿಯಾ ಎಂದು ಪ್ರಶ್ನಿಸಿದ್ದಾರೆ.

ಐಶ್ವರ್ಯಕ್ಕಿಂತ ಆರೋಗ್ಯವೇ ಅತ್ಯಮೂಲ್ಯ

ಗ್ರಾಪಂ ಪಿಡಿಓ ಶಶಿಕಲಾ ಅಭಿಮತ



ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವತಿಯಿಂದ ಹೊಸಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಮೈಸೂರು,ಫೆ.26(ಎಂಟಿವೈ)– ಐಶ್ವರ್ಯ, ಸಂಪತ್ತಿಗಿಂತಲೂ ಅಮೂಲ್ಯವಾಗಿರುವ ಆರೋಗ್ಯ ಕಾಪಾಡಿಕೊಳ್ಳಲು ಎಲ್ಲರೂ ಗಮನ ಹರಿಸಬೇಕು. ಕಾಲಕ್ಕೆ ಅನುಗುಣವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕೆಂದು ಹೊಸಹಳ್ಳಿ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಎಸ್.ಡಿ. ಶಶಿಕಲಾ ಸಲಹೆ ನೀಡಿದ್ದಾರೆ.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ರಾಷ್ಟ್ರೀಯ ಸೇವಾ ಯೋಜನೆ, ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ಹೊಸಹಳ್ಳಿ ಗ್ರಾಪಂ ಸಹಯೋಗದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಹೊಸಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸೋಮವಾರ ನಡೆದ ವಾರ್ಷಿಕ ವಿಶೇಷ ಶಿಬಿರದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೋವಿಡ್ ಸಂದರ್ಭದಲ್ಲಿ ಜನ ತತ್ತರಿಸಿ ಹೋಗಿದ್ದರು. ಎಷ್ಟೇ ಹಣ ಇದ್ದರೂ ದೇಶದಲ್ಲಿ ಲಕ್ಷಾಂತರ ಜನರನ್ನು ನಾವು ಕಳೆದುಕೊಳ್ಳಬೇಕಾಯಿತು. ಸರ್ಕಾರ ಹಲವಾರು ಯೋಜನೆಗಳನ್ನು ನಿಮ್ಮ ಮನೆ ಬಾಗಿಲಿಗೆ ತಲುಪಿಸುತ್ತಿದೆ. ಅದರಂತೆ ಜೆ.ಎಸ್.ಎಸ್. ಸಂಸ್ಥೆಯವರು ಕೂಡ ನಿಮ್ಮ ಮನೆ ಬಾಗಿಲಿಗೆ ಆರೋಗ್ಯ ತಪಾಸಣೆ ಮಾಡಲು ಬಂದಿದ್ದಾರೆ. ಹೊಸಹಳ್ಳಿ, ಮೊಗರಹಳ್ಳಿ, ಕಾರೇಕುರದಲ್ಲಿ ಸುಮಾರು 3500 ಕುಟುಂಬಗಳಿದ್ದು, 6500 ಜನಸಂಖ್ಯೆಯನ್ನು ಹೊಂದಿದೆ. ಎಲ್ಲರೂ ಬಂದು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಆರ್. ದಾಕ್ಷಾಯಣಿ ಮಾತನಾಡಿ, ದಂತ ತಪಾಸಣೆಯೊಂದಿಗೆ ಸಾಮಾನ್ಯ ಆರೋಗ್ಯ ಸಮಸ್ಯೆಗಳನ್ನು ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಅನಾರೋಗ್ಯ ಸಮಸ್ಯೆ ಇದ್ದರೆ, ಅವುಗಳಿಗೆ ಪರಿಹಾರ ಕಂಡು ಹಿಡಿಯಬಹುದು. ಸಕಾಲಕ್ಕೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲು ಸಹಾಯವಾಗುತ್ತದೆ ಎಂದರು.

ಗ್ರಾ.ಪಂ ಅಧ್ಯಕ್ಷ ಚೆಲುವರಾಜು ಮಾತನಾಡಿ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ವ್ಯಾಪಾರೀಕರಣವಾಗುತ್ತಿರುವ ಸಂದರ್ಭದಲ್ಲಿ ಜೆ.ಎಸ್.ಎಸ್. ಸಂಸ್ಥೆಯವರು ನಮ್ಮ ಮನೆ ಬಾಗಿಲಿಗೆ ಬಂದು ಆರೋಗ್ಯ ತಪಾಸಣೆ ಮಾಡುತ್ತಿದ್ದಾರೆ. ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಶಿಬಿರಾಧಿಕಾರಿ ಡಾ.ಹೆಚ್.ಎಂ.ತಿಪ್ಪೇಸ್ವಾಮಿ, ಡಾ.ಸತೀಶ್ ಚಂದ್ರ, ಡಾ.ಪ್ರವೀಣ್ ಕುಲಕರ್ಣಿ, ಡಾ.ಕೃಷ್ಣಾ, ಅನುಶ್ರೀ, ಗ್ರಾಪಂ ಸದಸ್ಯರಾದ ಶ್ರೀಕಂತ, ಉಮಾ, ಯೋಗೇಶ್ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರಲ್ಲಿ ಡ್ರಮ್‌ನಲ್ಲಿ ತುಂಡು, ತುಂಡಾಗಿದ್ದ ವೃದ್ಧೆಯ ದೇಹ ಪತ್ತೆ

ಬೆಂಗಳೂರು: ನಗರದಲ್ಲಿ ವೃದ್ಧೆಯೊಬ್ಬರವನ್ನು ಭೀಕರವಾಗಿ ಹತ್ಯೆ ಮಾಡಲಾಗಿದೆ. ಶವವನ್ನು ಐದು ತುಂಡುಗಳಾಗಿ ಕತ್ತರಿಸಿ ಪ್ಲಾಸ್ಟಿಕ್ ಡ್ರಮ್‌ನಲ್ಲಿ ತುಂಬಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕೆಆರ್ ಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ಈ ಪ್ರಕರಣ ವರದಿಯಾಗಿದೆ. ಮೃತರನ್ನು ಸುಶೀಲಮ್ಮ (65) ಎಂದು ಗುರುತಿಸಲಾಗಿದೆ. ಸಂಜೆ 5 ಗಂಟೆ ಸುಮಾರಿಗೆ ಡ್ರಮ್‌ನಿಂದ ದುರ್ವಾಸನೆ ಬರಲಾರಂಭಿಸಿದ ಹಿನ್ನೆಲೆಯಲ್ಲಿ ಸಮೀಪದ ನಿವಾಸಿಗಳು ಅದನ್ನು ಪರಿಶೀಲಿಸಿದಾಗ ದೇಹದ ಮೇಲ್ಭಾಗವು ಹಾಗೇ ಇದ್ದು, ಕೈಗಳು ಮತ್ತು ಕಾಲುಗಳನ್ನು ನಿಖರವಾಗಿ ಕತ್ತರಿಸಲ್ಪಟ್ಟಿದ್ದವು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶನಿವಾರ ಸಂಜೆ ಮತ್ತು ಮಧ್ಯರಾತ್ರಿಯ ನಡುವೆ ಮಹಿಳೆಯನ್ನು ಕೊಲೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ಶಂಕೆ ವ್ಯಕ್ತಪಡಿಸಿವೆ. ಮೃತ ಮಹಿಳೆ ಹತ್ಯೆ ಸಂಬಂಧ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಭಾರತದ ಒತ್ತಡಕ್ಕೆ ಮಣಿದ ರಷ್ಯಾ: ಸೇನೆಯಿಂದ ಹಲವು ಭಾರತೀಯರ ಬಿಡುಗಡೆ

ನವದೆಹಲಿ: ಭಾರತದ ಒತ್ತಾಯದ ನಂತರ ರಷ್ಯಾದ ಸೇನೆಯಲ್ಲಿ ಸಹಾಯಕ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಭಾರತೀಯರನ್ನು ಬಿಡುಗಡೆ ಮಾಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ರಷ್ಯಾದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ರಷ್ಯಾದ ಸೈನ್ಯದಿಂದ ಭಾರತೀಯ ಪ್ರಜೆಗಳನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಎಲ್ಲಾ ಸಂಬಂಧಿತ ವಿಷಯಗಳನ್ನು ಮುಂದುವರಿಸಲು ಭಾರತವು ಬದ್ಧವಾಗಿದೆ. ಈ ವಿಷಯಗಳಿಗೆ ಹೆಚ್ಚಿನ ಆದ್ಯತೆಯನ್ನು ಲಗತ್ತಿಸುತ್ತದೆ ಎಂದು ಅದು ಹೇಳಿದೆ.

ಈ ವಿಷಯವನ್ನು ಪ್ರಸ್ತಾಪಿಸಿದ ನಂತರ ಹಲವಾರು ಭಾರತೀಯರನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿಕೆ ತಿಳಿಸಿದೆ. ಆದರೆ, ಈಗ ರಷ್ಯಾದ ಸೇನೆಯಲ್ಲಿ ಎಷ್ಟು ಭಾರತೀಯರು ಸೇವೆ ಸಲ್ಲಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ. ರಷ್ಯಾದ ಸೇನೆಯಲ್ಲಿ ಕೆಲಸ ಮಾಡುತ್ತಿರುವ ಭಾರತೀಯರ ಸಂಖ್ಯೆ ಸುಮಾರು 100 ಇರಬಹುದು ಎಂದು ವರದಿಗಳು ಹೇಳುತ್ತಿವೆ. ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಸಂಘರ್ಷದಿಂದ ದೂರವಿರಲು ಭಾರತ ತನ್ನ ನಾಗರಿಕರನ್ನು ಕೇಳಿಕೊಂಡಿತ್ತು.

ಸದ್ಯ ಹಲವಾರು ಭಾರತೀಯರು ಈಗಾಗಲೇ ನಿರಾಳರಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ರಷ್ಯಾದ ಸೇನೆಯಲ್ಲಿ ಸಹಾಯಕ ಸಿಬ್ಬಂದಿಯಾಗಿ ಸೇವೆ ಸಲ್ಲಿಸುತ್ತಿರುವ ಭಾರತೀಯರ ಬಿಡುಗಡೆಯನ್ನು ತ್ವರಿತಗೊಳಿಸಲು ಸಚಿವಾಲಯವು ಯೋಜಿಸುತ್ತಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಕಳೆದ ವಾರ ಹೇಳಿದ್ದರು.

ಬಿಜೆಪಿ ಐಟಿ ಸೆಲ್‌ಗೆ ಸಂಬಂಧಿಸಿದ ವಿಡಿಯೊ ರಿಟ್ವೀಟ್ ಮಾಡಿ ತಪ್ಪು ಮಾಡಿದೆ

'ಸುಪ್ರೀಂ'ಗೆ ದೆಹಲಿ ಸಿಎಂ ಕೇಜ್ರಿವಾಲ್ ಹೇಳಿಕೆ

ನವದೆಹಲಿ: ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಬಿಜೆಪಿ ಐಟಿ ಸೆಲ್‌ಗೆ ಸಂಬಂಧಿಸಿದ ಮಾನಹಾನಿಕರ ವಿಡಿಯೊವನ್ನು ಮರು ಟ್ವೀಟ್ ಮಾಡುವ ಮೂಲಕ ತಪ್ಪು ಮಾಡಿದ್ದೇನೆ ಎಂದು ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.



ಬಿಜೆಪಿ ಐಟಿ ಸೆಲ್‌ಗೆ ಸಂಬಂಧಿಸಿದ ಯೂಟ್ಯೂಬರ್ ಧ್ರುವ ರಥೀ ಅವರು ಪ್ರಸಾರ ಮಾಡಿದ್ದ ಮಾನಹಾನಿಕರ ವೀಡಿಯೊವನ್ನು ಮರುಟ್ವೀಟ್ ಮಾಡುವ ಮೂಲಕ ತಪ್ಪು ಮಾಡಿದ್ದೇನೆ ಎಂದು ಕೇಜ್ರಿವಾಲ್ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ. ಕೇಜ್ರಿವಾಲ್ ತಪ್ಪೊಪ್ಪಿಕೊಂಡ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಕೇಜ್ರಿವಾಲ್ ವಿರುದ್ಧ ದೆಹಲಿ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಮಾನನಷ್ಟ ಕೇಸ್ ಅರ್ಜಿಯ ವಿಚಾರಣೆಗೆ ತಡೆ ನಡೆದಿದೆ.

ನ್ಯಾ. ಸಂಜೀವ್ ಖನ್ನಾ ಮತ್ತು ನ್ಯಾ. ದೀಪಂಕರ್ ದತ್ತಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಅರ್ಜಿ ವಿಚಾರಣೆಗೆ ತಡೆ ನೀಡಿ ಮುಂದಿನ ವಿಚಾರಣೆಯನ್ನು ಮಾರ್ಚ್ 11ಕ್ಕೆ ಮುಂದೂಡಿದೆ. ಕೇಜ್ರಿವಾಲ್ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ನ್ಯಾಯಾಲಯಕ್ಕೆ ಹಾಜರಾಗಿದ್ದರು.

ಏನಿದು ಪ್ರಕರಣ: ಯೂಟ್ಯೂಬರ್ ಧ್ರುವ್ ರಥೀ ಅವರು 2018ರಲ್ಲಿ ಬಿಜೆಪಿ ಐಟಿ ಸೆಲ್‌ಗೆ ಸಂಬಂಧಿಸಿದಂತೆ, 'ಐ ಸಪೋರ್ಟ್ ನರೇಂದ್ರ ಮೋದಿ' ಎಂಬ ಪೇಜ್ ಅಡ್ಮಿನ್ 'ಬಿಜೆಪಿ ಐಟಿ ಸೆಲ್ ಭಾಗ–2' ನಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿ ರಥೀ ಟ್ವೀಟ್ ಮಾಡಿದ್ದರು. ಈ ಟ್ವೀಟ್ ಅನ್ನು ಕೇಜ್ರಿವಾಲ್ ಟ್ವೀಟ್ ಮಾಡಿದ್ದರು. ಕೇಜ್ರಿವಾಲ್ ತನ್ನ ವಿರುದ್ಧ ಸುಳ್ಳು ಪ್ರಚಾರ ಮಾಡಿದ್ದಾರೆ ಎಂದು ಆರೋಪಿಸಿ ಐ ಸಪೋರ್ಟ್ ನರೇಂದ್ರ ಮೋದಿ ಪೇಜ್ ಅಡ್ಮಿನ್ ಮಾನನಷ್ಟ ಕೇಸ್ ದಾಖಲಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್ ವಿಚಾರಣೆಗೆ ಹಾಜರಾಗುವಂತೆ ದೆಹಲಿಯ ನ್ಯಾಯಾಲಯ 2019ರಲ್ಲಿ ಸಮನ್ಸ್ ಜಾರಿ ಮಾಡಿತ್ತು ಈ ಸಮನ್ಸ್ ರದ್ದು ಪಡಿಸುವಂತೆ ಕೋರಿ ಕೇಜ್ರಿವಾಲ್ ನಂತರ ಸೆಷನ್ಸ್ ಕೋರ್ಟ್ ಮತ್ತು ಹೈಕೋರ್ಟ್ ಮೊರೆ ಹೋಗಿದ್ದು

'ನಿಮ್ಮ ಕೈಲಾಗದಿದ್ದರೆ ಹೇಳಿ...': ನೌಕಾಪಡೆಯಲ್ಲಿ ಮಹಿಳೆಯರ ಶಾಶ್ವತ ಆಯೋಗ ಕುರಿತು ಕೇಂದ್ರಕ್ಕೆ 'ಸುಪ್ರೀಂ' ಚಾಟಿ

ನವದೆಹಲಿ: ನೌಕಾಪಡೆಯಲ್ಲಿ ಮಹಿಳೆಯರಿಗೆ ಶಾಶ್ವತ ಆಯೋಗ ಸಿಗುವುದನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ಕೈಲಾಗದಿದ್ದರೆ ಹೇಳಿ.. ಅದನ್ನು ನಾವು ಮಾಡುತ್ತೇವೆ ಎಂದು ಸುಪ್ರೀಂಕೋರ್ಟ್ ಸೋಮವಾರ ಕೇಂದ್ರ ಸರ್ಕಾರದ ವಿರುದ್ಧ ಚಾಟಿ ಬೀಸಿದೆ.



ಭಾರತೀಯ ಕೋಸ್ಟ್ ಗಾರ್ಡ್‌ನಲ್ಲಿ ಮಹಿಳೆಯರಿಗೆ ಶಾಶ್ವತ ಆಯೋಗದ ನೀಡಿಕೆ ವಿಚಾರದಲ್ಲಿ 'ಪುರುಷ ಪ್ರಧಾನ' ಧೋರಣೆ ಅನುಸರಿಸುತ್ತಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂಕೋರ್ಟ್, ಮಹಿಳೆಯರು ಗಡಿಗಳನ್ನು ರಕ್ಷಿಸಬಲ್ಲರಾದರೆ, ಅವರು ಕರಾವಳಿಯನ್ನೂ ರಕ್ಷಿಸಬಲ್ಲರು. ಸೇನೆ ಮತ್ತು ನೌಕಾಪಡೆ ಈಗಾಗಲೇ ಈ ನೀತಿಯನ್ನು ಜಾರಿಗೆ ತಂದಿರುವಾಗ ಕೋಸ್ಟ್ ಗಾರ್ಡ್ ಏಕೆ ವಿಭಿನ್ನವಾಗಿರಬೇಕು? ಎಂದು ಪ್ರಶ್ನಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ ಬಿ ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠವು ಅಟಾರ್ನಿ ಜನರಲ್ ಆರ್ ವೆಂಕಟರಮಣಿ ಅವರು ಕಿರು ಸೇವಾ ಆಯೋಗದ ಅಧಿಕಾರಿಗಳಿಗೆ (ಎಸ್‌ಎಸ್‌ಸಿಒ) ಶಾಶ್ವತ ಆಯೋಗಗಳನ್ನು ನೀಡುವಲ್ಲಿ ಕೆಲವು ಕ್ರಿಯಾತ್ಮಕ ಮತ್ತು ಕಾರ್ಯಾಚರಣೆಯ ತೊಂದರೆಗಳಿವೆ ಎಂದು ಸಲ್ಲಿಸಿದ ಸಲ್ಲಿಕೆಗಳನ್ನು ಗಮನಿಸಿ ಹೀಗೆ ಹೇಳಿದೆ.

ಮಹಿಳೆಯರನ್ನು ಹೊರಗಿಡಲು ಸಾಧ್ಯವಿಲ್ಲ ಎಂದು ಘೋಷಿಸಿದ ಸುಪ್ರೀಂ ಕೋರ್ಟ್, ಭಾರತೀಯ ಕೋಸ್ಟ್ ಗಾರ್ಡ್‌ನಲ್ಲಿ ಮಹಿಳೆಯರಿಗೆ ಶಾಶ್ವತ ಆಯೋಗವನ್ನು ನೀಡುವುದನ್ನು ಖಚಿತಪಡಿಸಿಕೊಳ್ಳುವಂತೆ ಕೇಂದ್ರಕ್ಕೆ ಸೋಮವಾರ ಸೂಚಿಸಿದೆ. ಅಲ್ಲದೆ ಈ ಕೆಲಸವನ್ನು ಕೇಂದ್ರ ಸರ್ಕಾರ ಮಾಡದಿದ್ದರೆ ನ್ಯಾಯಾಲಯವು ಅದನ್ನು ಮಾಡುತ್ತದೆ ಎಂದು ಹೇಳಿದೆ.

ಮೂರು ಸಶಸ್ತ್ರ ಪಡೆಗಳಲ್ಲಿ ಸೇನೆ, ವಾಯುಪಡೆ ಮತ್ತು ನೌಕಾಪಡೆಯ ಮಹಿಳಾ ಅಧಿಕಾರಿಗಳಿಗೆ ಶಾಶ್ವ ಆಯೋಗದ ಮಂಜೂರಾತಿಗೆ ಸಂಬಂಧಿಸಿದಂತೆ ಉನ್ನತ ನ್ಯಾಯಾಲಯದ ತೀರ್ಪುಗಳ ಹೊರತಾಗಿಯೂ ಒಕ್ಕೂಟವು ಇನ್ನೂ "ಪಿತೃಪ್ರಭುತ್ವದ ವಿಧಾನವನ್ನು" ಅನುಸರಿಸುತ್ತಿದೆಯೇ?.. "ನೀವು ಯಾಕೆ ಇಷ್ಟೊಂದು ಪುರುಷಪ್ರಧಾನರಾಗಿದ್ದೀರಿ? ನೀವು ಕೋಸ್ಟ್ ಗಾರ್ಡ್‌ನಲ್ಲಿ ಮಹಿಳೆಯರ ಮುಖವನ್ನು ನೋಡಲು ಬಯಸುವುದಿಲ್ಲ. ಖಾಯಂ ಆಯೋಗವನ್ನು ಆಯ್ಕೆ ಮಾಡಿಕೊಂಡಿರುವ ಏಕೈಕ ಕಿರು ಸೇವಾ ಆಯೋಗದ ಮಹಿಳಾ ಅಧಿಕಾರಿ ಅರ್ಜಿದಾರರಾಗಿದ್ದು, ಅವರ ಪ್ರಕರಣವನ್ನು ಏಕೆ ಪರಿಗಣಿಸಲಿಲ್ಲ ಎಂದು ಪೀಠ ಹೇಳಿದೆ.

ಈ ವೇಳೆ ಸಮಸ್ಯೆಗಳನ್ನು ಪರಿಶೀಲಿಸಲು ಭಾರತೀಯ ಕೋಸ್ಟ್ ಗಾರ್ಡ್ (ಐಸಿಜಿ) ಮಂಡಳಿಯನ್ನು ಸ್ಥಾಪಿಸಲಾಗಿದೆ ಎಂದು ಅಟಾರ್ನಿ ಜನರಲ್ ಪೀಠಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ನೀವು ಮಂಡಳಿಯಲ್ಲಿ ಮಹಿಳೆಯರನ್ನು ಹೊಂದಿರಬೇಕು. ಈ ಹಿಂದೆ, ನೌಕಾಪಡೆಯು ಮಹಿಳೆಯರನ್ನು "ನ್ಯಾಯಯುತವಾಗಿ" ಪರಿಗಣಿಸುವ ನೀತಿಯೊಂದಿಗೆ ಬರಬೇಕು. 'ನಾರಿ ಶಕ್ತಿ' (ಸ್ತ್ರೀ ಶಕ್ತಿ) ಬಗ್ಗೆ ನೀವು ಮಾತನಾಡುತ್ತಿದ್ದೀರಿ. ಈಗ ಅದನ್ನು ಇಲ್ಲಿ ತೋರಿಸಿ, ಈ ವಿಷಯದಲ್ಲಿ ನೀವು ಸಮುದ್ರದ ಆಳದಲ್ಲಿದ್ದೀರಿ. ಮಹಿಳೆಯರನ್ನು ನ್ಯಾಯಯುತವಾಗಿ ಪರಿಗಣಿಸುವ ನೀತಿಯನ್ನು ನೀವು ರೂಪಿಸಬೇಕು ಎಂದು ನ್ಯಾಯಮೂರ್ತಿಗಳು ಹೇಳಿದರು

ಪೊಲೀಸ್ ಸಿಬ್ಬಂದಿಯ ಅಂತರ ಜಿಲ್ಲಾ ವರ್ಗಾವಣೆಗೆ ರಾಜ್ಯ ಸರ್ಕಾರ ಅಸ್ತು



ಬೆಂಗಳೂರು, ಫೆ. 26: ಪೊಲೀಸ್ ಸಿಬ್ಬಂದಿ ಅಂತರ ಜಿಲ್ಲಾ ವರ್ಗಾವಣೆಗೆ ರಾಜ್ಯ ಸರ್ಕಾರ ಅಸ್ತು ಎಂದಿದೆ. ಪತಿ–ಪತ್ನಿ ಪ್ರಕರಣಗಳಲ್ಲಿ ಅಂತರ ಜಿಲ್ಲಾ ವರ್ಗಾವಣೆಗೆ ಗೃಹ ಸಚಿವ ಪರಮೇಶ್ವರ್, ಡಿಜಿ&ಐಜಿಪಿ ಅಲೋಕ್ ಮೋಹನ್‌ಗೆ ಸೂಚಿಸಿದ್ದರು. ಅರ್ಹ ಪತಿ–ಪತ್ನಿ ಪೊಲೀಸ್ ಸಿಬ್ಬಂದಿ ಅಂತರ ಜಿಲ್ಲಾ ವರ್ಗಾವಣೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಹಲವು ತಿಂಗಳಿಂದ ಪತಿ–ಪತ್ನಿ ಪೊಲೀಸರ ವರ್ಗಾವಣೆಗೆ ಆಗ್ರಹ ಕೇಳಿ ಬಂದಿತ್ತು. ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸುಮಾರು ಮೂರು ವರ್ಷಗಳಿಂದ ಪತಿ–ಪತ್ನಿ ಯಾವುದೇ ಅಂತರ ಜಿಲ್ಲಾ ವರ್ಗಾವಣೆಯಾಗಿಲ್ಲ.

ಕರ್ನಾಟಕ ಪೊಲೀಸ್ ಇಲಾಖೆ ಸಿಬ್ಬಂದಿಗೆ ನಿರ್ಬಂಧಿತವಾಗಿದ್ದ ಈ ಅಂತರ್ ಜಿಲ್ಲಾ ವರ್ಗಾವಣೆಗೆ ಇತ್ತೀಚೆಗೆ ಅವಕಾಶ ನೀಡಲಾಗಿದೆ. 2022ರಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟದಲ್ಲಿ ಪೊಲೀಸ್ ಸಿಬ್ಬಂದಿ ಅಂತರ ಜಿಲ್ಲಾ ವರ್ಗಾವಣೆಗೆ ಅವಕಾಶ ನೀಡಲು ತೀರ್ಮಾನಿಸಲಾಗಿತ್ತು ಆದರೆ ಕೆಲ ಷರತ್ತುಗಳೊಂದಿಗೆ ಪೊಲೀಸ್ ಸಿಬ್ಬಂದಿ ವರ್ಗಾವಣೆಗೆ ಅವಕಾಶ ನೀಡಲಾಗಿತ್ತು.

ಪೊಲೀಸ್ ಇಲಾಖೆಗೆ ನೇಮಕವಾಗಿ ಕನಿಷ್ಠ 3 ವರ್ಷ ಸೇವೆ ಸಲ್ಲಿಸಿರಬೇಕು. ಮಾಜಿ ಯೋಧರು ಸಹ ಬೇರೆ ಜಿಲ್ಲೆಗಳಿಗೆ ವರ್ಗಾವಣೆ ಆಗಬಹುದು. ಯಾವುದೇ ಒಂದು ಜಿಲ್ಲೆಯಲ್ಲಿ, ನೇಮಕಾತಿ ಹೊಂದಿದ ಹಾಗೂ ಅದೇ ಜಿಲ್ಲೆಯಲ್ಲಿ ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದ ಯಾವುದೇ ಸಿಬ್ಬಂದಿ ಇತರೆ ಜಿಲ್ಲೆಗಳು ಅಥವಾ ತಮ್ಮ ಸ್ವಂತ ಜಿಲ್ಲೆಗೆ ವರ್ಗಾವಣೆ ಹೊಂದಲು ಅರ್ಹತೆ ಹೊಂದಿರುತ್ತಾರೆ.

ದಯಾಮರಣ ಕೋರಿ ಸಿಎಂಗೆ ಪತ್ರ: ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಸುಮಾರು ಮೂರು ವರ್ಷಗಳಿಂದ ಪತಿ–ಪತ್ನಿ ಯಾವುದೇ ಅಂತರ ಜಿಲ್ಲಾ ವರ್ಗಾವಣೆ ಆಗಿಲ್ಲ. ಇದರಿಂದ ನಮಗೆ ನೆಮ್ಮದಿಯಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಪೊಲೀಸ್ ಸಿಬ್ಬಂದಿಯೊಬ್ಬರು ಇತ್ತೀಚೆಗೆ ದಯಾಮರಣ ಕೋರಿ ಸಿಎಂ ಸಿದ್ದರಾಮಯ್ಯ ಮತ್ತು ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದರು.

ಉತ್ತರಕನ್ನಡದಲ್ಲಿ ಮಂಗನ ಕಾಯಿಲೆಗೆ ಮತ್ತೋರ್ವ ಮಹಿಳೆ ಸಾವು

ಮೃತರ ಸಂಖ್ಯೆ ನಾಲ್ಕಕ್ಕೆ ಏರಿಕೆ

ಉತ್ತರಕನ್ನಡ: ಮಲೆನಾಡಿಗರನ್ನು ಕಂಗೆಡಿಸಿರುವ ಮಂಗನ ಕಾಯಿಲೆಗೆ (ಕ್ಯಾಸನೂರು ಫಾರೆಸ್ಟ್ ಡಿಸೀಸ್–ಕೆಎಫ್‌ಡಿ) ಉತ್ತರ ಕನ್ನಡ ಜಿಲ್ಲೆಯ ವೃದ್ಧೆಯೊಬ್ಬರು ಸಾವಿಗೀಡಾಗಿದ್ದು, ರಾಜ್ಯದಲ್ಲಿ ಈ ಕಾಯಿಲೆಯಿಂದ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

ಮೃತರನ್ನು ಸಿದ್ದಾಪುರ ತಾಲೂಕಿನ ಕೂರ್ಲಕೈ ಗ್ರಾಮದ 60 ವರ್ಷದ ಮಹಿಳೆ ಎಂದು ಗುರುತಿಸಲಾಗಿದೆ. ಸಂತ್ರಸ್ತೆ ಮೂರು ದಿನಗಳಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ. ಅವರಿಗೆ 20 ದಿನಗಳ ಹಿಂದೆ ಮಂಗನ ಜ್ವರ ಕಾಣಿಸಿಕೊಂಡಿದ್ದು, ತೀವ್ರ ಜ್ವರದಿಂದ ಬಳಲುತ್ತಿದ್ದರು. ಸಿದ್ದಾಪುರ ತಾಲ್ಲೂಕಿನಲ್ಲಿಯೇ ಮಂಗನ ಕಾಯಿಲೆ ಪ್ರಕರಣಗಳ ಸಂಖ್ಯೆ 43ಕ್ಕೆ ಏರಿಕೆಯಾಗಿದೆ.

103 ಸಕ್ರಿಯ ಮಂಗನ ಕಾಯಿಲೆ ಪ್ರಕರಣಗಳನ್ನು ಹೊಂದಿರುವ ರಾಜ್ಯದಲ್ಲಿ ಇದುವರೆಗೆ ಮೂವರು ಸಾವಿಗೀಡಾಗಿದ್ದಾರೆ. ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ ಒಬ್ಬರು ರೋಗದಿಂದ ಮೃತಪಟ್ಟಿದ್ದಾರೆ.

ಸಂಸದ ಪ್ರತಾಪ ಸಿಂಹ ಕಚೇರಿ ಮುಂದೆ ರೈತರ ಪ್ರತಿಭಟನೆ



ರೈತರ ಮೇಲಿನ ದಬ್ಬಾಳಿಕೆ ನಿಲ್ಲಿಸುವಂತೆ ಆಗ್ರಹಿಸಿ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಸೋಮವಾರ ಸಂಸದ ಪ್ರತಾಪ ಸಿಂಹ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ಫೆ.26(ಎಂಟಿವೈ)– ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಪಂಜಾಬ್, ಹರಿಯಾಣದ ರೈತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ, ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಸಂಸದ ಪ್ರತಾಪ ಸಿಂಹ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಲದರ್ಶಿನಿ ಆವರಣದಲ್ಲಿರುವ ಸಂಸದ ಪ್ರತಾಪ ಸಿಂಹ ಕಚೇರಿ ಮುಂದೆ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಹಾಗೂ ರೈತರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಸಂಸದ ಪ್ರತಾಪ ಸಿಂಹ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರಿಗೆ ತಡೆಯೊಡ್ಡಿದ್ದರು. ಈ ವೇಳೆ ರೈತರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಇದರಿಂದ ಕೆಲಕಾಲ ಗೊಂದಲ ಉಂಟಾಯಿತು. ಸಂಸದರು ಕಾಣೆಯಾಗಿದ್ದಾರೆ. ಬೇಕಂತಲೇ ಕಚೇರಿಗೆ ಬರದೆ ನಿರ್ಲಕ್ಷಿಸಿದ್ದಾರೆ ಎಂದು ಆರೋಪಿಸಿ ಘೋಷಣೆ ಕೂಗಲಾರಂಭಿಸಿದರು. ಈ ವೇಳೆ ಸಂಸದರ ಆಪ್ತ ಸಹಾಯಕರು ಪೊಲೀಸರೊಂದಿಗೆ ಪ್ರತಿಭಟನಾಕಾರರ ಬಳಿ ಬಂದು ಮನವಿ ಸ್ವೀಕರಿಸಿ, ಸಂಸದರಿಗೆ ನೀಡುವುದಾಗಿ ಭರವಸೆ ನೀಡಿದರು. ಬಳಿಕ ಗೊಂದಲ ನಿವಾರಣೆಯಾಗಿ, ರೈತರು ಕೆಲಕಾಲ ಪ್ರತಿಭಟನೆ ಮುಂದುವರೆಸಿದರು.

ಪಂಜಾಬ್, ಹರಿಯಾಣ ರಾಜ್ಯಗಳ ರೈತರ ಮೇಲೆ ಪೊಲೀಸರು ನಡೆಸುತ್ತಿರುವ ದೌರ್ಜನ್ಯ ನಿಲ್ಲಿಸಬೇಕು. ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗೊಳಿಸಬೇಕು. ದೇಶದ ರೈತರ ಪರವಾಗಿ ಹೋರಾಟ ಮಾಡುತ್ತಿರುವ ಪಂಜಾಬ್, ಹರಿಯಾಣ ರಾಜ್ಯಗಳ ರೈತರು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ರೈತರ ಮೇಲೆ ಕೇಂದ್ರ ಸರ್ಕಾರ ಪೊಲೀಸ್ ದೌರ್ಜನ್ಯ ನಡೆಸಿ ರೈತರ ಕೊಲೆ ಮಾಡುತ್ತಿದೆ. ಮಾನವ ಹಕ್ಕು ದಮನ ಮಾಡುತ್ತಿದೆ. ಪ್ರಜಾಸತ್ತಾತ್ಮಕವಾಗಿ ಚಳುವಳಿ ಮಾಡಲು ದೆಹಲಿಗೆ ಬರುತ್ತಿದ್ದ ರೈತರನ್ನು ದೆಹಲಿ ಗಡಿಭಾಗದಲ್ಲಿ ಉಗ್ರಗಾಮಿಗಳಂತೆ ತಡೆದು ನಿಲ್ಲಿಸಲಾಗಿದೆ. ರೈತರ ಚಳುವಳಿಯನ್ನು ಹತ್ತಿಕ್ಕಿ, ಅವಮಾನಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಮುಖಂಡರಾದ ಕಿರಗಸೂರು ಶಂಕರ್, ಲಕ್ಷ್ಮಿಪುರ ವೆಂಕಟೇಶ್, ಕುರುಬೂರು ಸಿದ್ದೇಶ್, ಹೆಗ್ಗೂರು ರಂಗರಾಜ್, ಅಂಬಳೆ ಮಂಜುನಾಥ್, ಕಾಟೂರು ಮಾದೇವಸ್ವಾಮಿ, ಶ್ರೀಕಂಠ, ಚುಂಚುರಾಯನಹುಂಡಿ ಗಿರೀಶ್, ಸಿದ್ದರಾಮ, ಕೂಡನಹಳ್ಳಿ ಸೋಮಣ್ಣ, ಗಣೇಶ್, ಮಾರ್ಬಳ್ಳಿ ಬಸವರಾಜು, ಹಿರೇನಂದಿ ಮಹಾದೇವಪ್ಪ, ಆದಿ ಬೆಟ್ಟಳ್ಳಿ ನಂಜುಂಡಸ್ವಾಮಿ, ಮಹೇಶ್, ಕರುವಟ್ಟಿ ಉಮೇಶ್, ಯಾಕನೂರು ಚಂದ್ರ, ಮಲ್ಲೇಶ್, ಕುಪ್ಪೆ ಮಾದೇವ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ತಿ.ನರಸೀಪುರ: ರಸ್ತೆ ಅಭಿವೃದ್ಧಿ ಕಾಮಗಾರಿ ನನೆಗುದಿಗೆ

▸ ಸಂಪೂರ್ಣ ಗುಂಡಿಗಳಿಂದ ಕೂಡಿರುವ 21, 22ನೇ ವಾರ್ಡ್ ರಸ್ತೆಗಳು ▸ ಮಳೆಗಾಲದಲ್ಲಿ ಕೆಸರು ಮಯ, ಬೇಸಿಗೆಯಲ್ಲಿ ಧೂಳುಮಯ ▸ ರಸ್ತೆ, ಚರಂಡಿ ಅಭಿವೃದ್ಧಿಗೆ ಸ್ಥಳೀಯ ನಾಗರಿಕರ ಒತ್ತಾಯ





ತಿ.ನರಸೀಪುರ ಪುರಸಭೆ ವ್ಯಾಪ್ತಿಗೆ ಒಳಪಡುವ ನಂಜನಗೂಡು ಹಾಗೂ ಕೊಳ್ಳೇಗಾಲ ಮುಖ್ಯರಸ್ತೆಗೆ ಸೇರುವ ಹಳೆ ಕುರುಬಗೇರಿ ಶ್ರೀರಾಮ ಮಂದಿರ ಬೀದಿ ರಸ್ತೆ ಗುಂಡಿಮಯವಾಗಿರುವುದು.

● ಎಸ್.ಕುಮಾರ್

ತಿ.ನರಸೀಪುರ, ಫೆ.26– ಪಟ್ಟಣದ ಪುರಸಭಾ ವ್ಯಾಪ್ತಿಯ ತಾಲೂಕು ಹಾಗೂ ಪುರಸಭಾ ಕಚೇರಿ ಮುಂಭಾಗದ ರಸ್ತೆಗಳು ಹಲವು ವರ್ಷಗಳಿಂದ ಅಭಿವೃದ್ಧಿ ಕಾಣದೇ ನನೆಗುದಿಗೆ ಬಿದ್ದಿದೆ.

ಪಟ್ಟಣದ ಪುರಸಭೆಯ 21 ಹಾಗೂ 22ನೇ ವಾರ್ಡ್‌ನ ಕಡಲೆ ರಂಗಮ್ಮನ ಬೀದಿ, ಹಳೇ ಕುರುಬಗೇರಿ, ಶ್ರೀರಾಮ ಮಂದಿರ ಬೀದಿ, ಹಳೆ ಕೆನರಾ ಬ್ಯಾಂಕ್ ರಸ್ತೆ ಹಾಗೂ ಕೊಳ್ಳೇಗಾಲ ಮುಖ್ಯ ರಸ್ತೆಗೆ ಹೋಗುವ ರಸ್ತೆಗಳು ಗುಂಡಿಮಯವಾಗಿದ್ದು, ಹಲವು ವರ್ಷಗಳಿಂದ ಈ ರಸ್ತೆಗಳು ಅಭಿವೃದ್ಧಿ ಕಾಣದೇ ನಿತ್ಯ ಇಲ್ಲಿನ ನಿವಾಸಿಗಳು ನರಕ ಯಾತನೆ ಅನುಭವಿಸುವಂತಾಗಿದೆ.

ಮಳೆಗಾಲ ಬಂದರೆ ಈ ರಸ್ತೆಗಳು ಸಂಪೂರ್ಣ ಕೆಸರುಮಯವಾಗಲಿದ್ದು, ಬೇಸಿಗೆ ಬಂದರೆ ವಿಪರೀತ ಧೂಳು ಆವರಿಸಿಕೊಳ್ಳುತ್ತದೆ. ಹೀಗಾಗಿ ರಸ್ತೆ ಅಭಿವೃದ್ಧಿಗೊಳಿಸುವಂತೆ ಈ ಎರಡೂ ವಾರ್ಡ್‌ನ ನಿವಾಸಿಗಳು ಸ್ಥಳೀಯ ಜನಪ್ರತಿನಿಧಿಗಳು ಇಲ್ಲಿನ ಪುರಸಭೆಗೆ ಮನವಿ ಮಾಡಿ ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ರಸ್ತೆಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ ಅಡಿ ಪೈಪ್ ಅಳವಡಿಸಲು ಒಂದೆಡೆ ರಸ್ತೆ ಅಗೆದು ಹಾಗೇ ಮಣ್ಣು ಮುಚ್ಚಲಾಗಿದೆ. ಮತ್ತೊಂದೆಡೆ ರಸ್ತೆಯ ಎರಡೂ ಬದಿಯಲ್ಲಿ ಚರಂಡಿ ವ್ಯವಸ್ಥೆ ಕಲ್ಪಿಸಿಲ್ಲ. ಹೀಗಾಗಿ ಮಳೆ ಬಂದರೆ ನೀರು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗುತ್ತದೆ. ಇಷ್ಟಿದ್ದರೂ, ಸಂಬಂಧಪಟ್ಟ ಪುರಸಭೆ ಅಧಿಕಾರಿಗಳು, ಜನಪ್ರತಿನಿಧಿಗಳು ಇದರ ಬಗ್ಗೆ ಗಮನಹರಿಸಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈ ರಸ್ತೆಗಳಲ್ಲಿ ಬೈಕ್‌ಗಳು, ಕಾರುಗಳು, ಲಾರಿ ಸೇರಿದಂತೆ ಭಾರಿ ವಾಹನಗಳು ಸಂಚರಿಸುತ್ತವೆ. ಹೀಗಾಗಿ ಈ ರಸ್ತೆಗಳನ್ನು ಆದಷ್ಟು ಬೇಗ ಅಭಿವೃದ್ಧಿಗೊಳಿಸಬೇಕು. ಅಲ್ಲದೇ ದ್ವಿಚಕ್ರ ವಾಹನ ಸೇರಿದಂತೆ ಲಘು ವಾಹನಗಳನ್ನು ಹೊರತುಪಡಿಸಿ ಈ ರಸ್ತೆಯಲ್ಲಿ ಭಾರಿ ವಾಹನ ಸಂಚಾರ ನಿಷೇಧಿಸಬೇಕು. ಅಲ್ಲದೇ ಈ ವಾರ್ಡ್‌ಗಳಿಗೆ ಸಂಬಂಧಪಟ್ಟ ಎಲ್ಲಾ ಬಡಾವಣೆಗಳಲ್ಲಿ ಸರಿಯಾಗಿ ನೀರು ಹರಿದು ಹೋಗಲು ಚರಂಡಿ ವ್ಯವಸ್ಥೆ ಕಲ್ಪಿಸಬೇಕು ಎಂದು ಸ್ಥಳೀಯ ನಾಗರಿಕರು ಒತ್ತಾಯಿಸಿದ್ದಾರೆ.

ನಿತ್ಯ ಜನಪ್ರತಿನಿಧಿಗಳು ಸಂಚರಿಸುವ ಪುರಸಭೆ ಮುಂಭಾಗದ ರಸ್ತೆಗೆ ಡಾಂಬರ್ ಹಾಕಿ ಅದೆಷ್ಟೋ ದಿನವಾಗಿದೆ. ಹೀಗಾಗಿ ಶೀಘ್ರ ರಸ್ತೆ ಅಭಿವೃದ್ಧಿಗೊಳಿಸಬೇಕು. ಇನ್ನು ಭಗವಾನ್ ಚಿತ್ರಮಂದಿರ ವೃತ್ತ ಹಳೇ ಸರ್ಕಾರಿ ಶಾಲೆ ಮುಂಭಾಗದ ರಸ್ತೆಗಳು ಗುಂಡಿಮಯವಾಗಿದೆ. ತಿ.ನರಸೀಪುರ 23 ವಾರ್ಡ್‌ಗಳನ್ನು ಒಳಗೊಂಡ ಪುರಸಭೆಯಾಗಿದ್ದರೂ, ಅಭಿವೃದ್ಧಿ ಮಾತ್ರ ಶೂನ್ಯ. ಪುರಸಭೆ ಅಧಿಕಾರಿಗಳು ಪ್ರತಿ ತಿಂಗಳು ಕಂದಾಯ ಸೇರಿದಂತೆ ಇನ್ನಿತರ ಕರಗಳಿಂದ ಕೋಟ್ಯಾಂತರ ರೂ. ವಸೂಲಿ ಮಾಡಿದರೂ ಪಟ್ಟಣದ ಅಭಿವೃದ್ಧಿಯಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ. ರಾಜ್ಯದ ಮುಖ್ಯಮಂತ್ರಿ, ಪ್ರಭಾವಿ ಸಚಿವರಿದ್ದರೂ, ತ್ರಿವೇಣಿ ಸಂಗಮ ಖ್ಯಾತಿಯ ತಿ.ನರಸೀಪುರ ಅಭಿವೃದ್ಧಿ ಮರೀಚಿಕೆಯಾಗಿದೆ. ಒಟ್ಟಾರೆ ಪಟ್ಟಣದ ಪುರಸಭೆಯ 21 ಹಾಗೂ 22ನೇ ವಾರ್ಡ್‌ನ ಎಲ್ಲಾ ಬಡಾವಣೆಗಳ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ಜೊತೆಗೆ ಮೂಲ ಸೌಕರ್ಯ ಕಲ್ಪಿಸುವಂತೆ ಇಲ್ಲಿನ ನಿವಾಸಿಗಳು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನು ಒತ್ತಾಯಿಸಿದ್ದಾರೆ.



▶ ಈ ಹಿಂದೆ ಇದ್ದ ಗುತ್ತಿಗೆದಾರರು ಲಿಂಕ್ ರಸ್ತೆ ಹಾಗೂ ಕೆಲವು ಬಡಾವಣೆ ರಸ್ತೆ ಅಭಿವೃದ್ಧಿಗೆ ಹಣ ಬಿಡುಗಡೆಯಾದ ವೇಳೆ ಕೆಲವು ರಸ್ತೆಗಳನ್ನು ಅಭಿವೃದ್ಧಿ ಮಾಡಿ ಈ ವ್ಯಾಪ್ತಿಗೆ ಒಳಪಡುವ ರಸ್ತೆಯನ್ನು ಅಭಿವೃದ್ಧಿಗೊಳಿಸದೇ ಬಿಟ್ಟು ಹೋಗಿದ್ದಾರೆ. ಹೀಗಾಗಿ ಈ ರಸ್ತೆ ಅಭಿವೃದ್ಧಿಯಾಗದೆ ಉಳಿದಿದೆ. ಇದುವರೆಗೂ ಈ ಸಂಬಂಧ ಅವರ ವಿರುದ್ಧ ಕ್ರಮ ಜರುಗಿಸಿಲ್ಲ. ಈ ಬಗ್ಗೆ ಪುರಸಭೆ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ.

- ನಾಗರತ್ನ, ಪುರಸಭೆ 21ನೇ ವಾರ್ಡ್ ಸದಸ್ಯೆ.



▶ ತಾಲೂಕು ಕಚೇರಿ ಮುಂಭಾಗ ಹಾಗೂ ಕಡ್ಲೇ ರಂಗಮ್ಮನ ಬೀದಿ ಮತ್ತು ಶ್ರೀರಾಮ ಮಂದಿರ ಬೀದಿ, ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಕೆಲವು ಬಡಾವಣೆ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಒಂದೂವರೆ ಕೋಟಿ ರೂಗಳಿಗೂ ಹೆಚ್ಚು ಅನುದಾನ ಬಿಡುಗಡೆಯಾಗಿದ್ದು, ಇದಕ್ಕೆ ಸಂಬಂಧಪಟ್ಟ ಗುತ್ತಿಗೆದಾರ ಕೆಲಸ ಮಾಡದೆ ನಿಲ್ಲಿಸಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ನಾವು ಮನವಿ ಸಲ್ಲಿಸಿದ್ದು, ಸರ್ಕಾರದ ಮಟ್ಟದಲ್ಲಿ ಈ ಕಾಮಗಾರಿ ಆಗಬೇಕು. ಏಕೆಂದರೆ ಇದು ನಗರೋತ್ಥಾನ ಯೋಜನೆ ಅಡಿ ಕಾಮಗಾರಿಗೆ ಹಣ ಬಿಡುಗಡೆಯಾಗಿರುವುದರಿಂದ ನಮ್ಮ ಮೇಲಧಿಕಾರಿಗಳ ಗಮನಕ್ಕೆ ತಂದು ಚರ್ಚಿಸಿ ಕ್ರಮ ವಹಿಸುತ್ತೇವೆ.

- ವಸಂತ ಕುಮಾರಿ, ಪುರಸಭಾ ಮುಖ್ಯಾಧಿಕಾರಿ.



▶ ವಾರ್ಡ್‌ಗೆ ಸಂಬಂಧಪಟ್ಟ ಅಭಿವೃದ್ಧಿ ಬಗ್ಗೆ ಈಗಾಗಲೇ ಸಚಿವ ಡಾ.ಮಹದೇವಪ್ಪ ಅವರಿಗೆ ಮನವಿ ನೀಡಿದ್ದೇನೆ ಮತ್ತು ಗುಂಡಿ ಬಿದ್ದಿರುವ ರಸ್ತೆ ಅಭಿವೃದ್ಧಿಪಡಿಸುವ ಬಗ್ಗೆ ಸಚಿವರ ಗಮನಕ್ಕೆ ತಂದಿದ್ದು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಕ್ರಮ ವಹಿಸುವ ಭರವಸೆ ನೀಡಿದ್ದಾರೆ

- ಬಾದಾಮಿ ಮಂಜು, ಪುರಸಭಾ ಸದಸ್ಯರು.

ಹೆಗ್ಗೆರೆಯಲ್ಲಿ ಹೇಮಾದ್ರಂಭ ದೇವಿ ತೆಪ್ಪೋತ್ಸವ



ಬನ್ನೂರಿನ ಗ್ರಾಮದೇವತೆ ಹೇಮಾದ್ರಂಭ ದೇವಿ ತೆಪ್ಪೋತ್ಸವ ಮಾಕನಹಳ್ಳಿ ಗ್ರಾಮದ ಹೆಗ್ಗೆರೆಯಲ್ಲಿ ಸೋಮವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ಇಂದು ಗೋಣಹಳ್ಳಿ ಮಾರಮ್ಮ ಪೂಜಾ ಮಹೋತ್ಸವ



ಕಂಪಲಾಪುರ, ಫೆ.26– ಗ್ರಾಮದ ಮಡಿವಾಳ ಬೀದಿಯಲ್ಲಿರುವ ಗೋಣಹಳ್ಳಿ ಮಾರಮ್ಮ ಪೂಜಾ ಮಹೋತ್ಸವ ಫೆ.27ರಂದು ನಡೆಯಲಿದೆ. ಮುಂಜಾನೆಯೇ ಹೆಗ್ಗೆರೆ ಕೆರೆಯಿಂದ ಕಳಸ ತಂದು ನಂತರ ದೇವಾಲಯದಲ್ಲಿ ಪೂಜಾ ವಿಧಿ ವಿಧಾನಗಳನ್ನು ನಡೆಸಲಾಗುವುದು. ಮಧ್ಯಾಹ್ನ ಮಹಾಮಂಗಳಾರತಿ ಬಳಿಕ ಭಕ್ತರಿಗೆ ಅನ್ನಸಂತರ್ಪಣೆ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ವೀರ ಮಡಿವಾಳ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯಾರ್ಥಿ ಮುತ್ತುರಾಜ್ ಸಾವಿನ ಪ್ರಕರಣ

ದಾಸನಪುರಕ್ಕೆ ಕೋಟ ಶ್ರೀನಿವಾಸ್ ಪೂಜಾರಿ ಭೇಟಿ, ಸಾಂತ್ವನ

ಹುಣಸೂರು, ಫೆ.26– ತಾಲೂಕಿನ ದಾಸನಪುರಕ್ಕೆ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಕೋಟ ಶ್ರೀನಿವಾಸ ಪೂಜಾರಿ ಭೇಟಿ ನೀಡಿ, ಮೃತ ವಿದ್ಯಾರ್ಥಿ ಮುತ್ತುರಾಜ್ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಅವರು, ವಿದ್ಯಾರ್ಥಿ ಮುತ್ತುರಾಜ್ ಸಾವಿನ ಪ್ರಕರಣದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿ ನೊಂದ ಕುಟುಂಬಕ್ಕೆ ನ್ಯಾಯ ಕೊಡಿಸಲಾಗುವುದು. ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ಇಂತಹ ಘಟನೆ ನಡೆದಿರುವುದು ಖಂಡನೀಯ. ಮೈಸೂರು ಜಿಲ್ಲೆಯಲ್ಲಿ ಈ ಹಿಂದೆ ನಡೆದ ಕ್ಯಾತಮಾರನಹಳ್ಳಿ ರಾಜು, ರುದ್ರೇಶ್ ಪ್ರಕರಣ ಸಾಲಿಗೆ ಈ ಘಟನೆಯೂ ಸೇರಲಿದೆ. ಘಟನೆ ನಡೆದು ಇಷ್ಟು ದಿನವಾದರೂ ಈವರೆಗೂ ಆರೋಪಿಗಳನ್ನು ಬಂಧಿಸಲು ಮುಂದಾಗಿಲ್ಲ. ಹೀಗಾಗಿ ಈ ಪ್ರಕರಣದಲ್ಲಿ ಸಾಕ್ಷ್ಯ ನಾಶವಾಗುವ ಮೊದಲೇ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಹಾಲಿ ಸಂಸದ ಪ್ರತಾಪ್ ಸಿಂಹ ಅವರ ಬದಲಿಗೆ ಜೆಡಿಎಸ್‌ನ ಮಾಜಿ ಸಚಿವ ಸಾ.ರಾ. ಮಹೇಶ್ ಅವರಿಗೆ ಟಿಕೆಟ್ ನೀಡಲಾಗುವುದು ಎಂಬ ಸುದ್ದಿ ಹರಿದಾಡುತ್ತಿರುವ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಪೂಜಾರಿ, ಟಿಕೆಟ್ ಹಂಚಿಕೆ ವಿಚಾರವಾಗಿ ಪ್ರಧಾನಿ ಮೋದಿ ಹಾಗೂ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರದೇ ಅಂತಿಮ ತೀರ್ಮಾನ. ಅವರ ತೀರ್ಮಾನಕ್ಕೆ ನಾವೆಲ್ಲಾ ಬದ್ಧ ಎಂದರು.



ವಿಧಾನಪರಿಷತ್ ಪ್ರತಿಪಕ್ಷ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರು ಮೃತ ವಿದ್ಯಾರ್ಥಿ ಮುತ್ತುರಾಜ್ ನಿವಾಸಕ್ಕೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮುಖಂಡರಾದ ಮಹದೇವಸ್ವಾಮಿ, ಪಾಪಣ್ಣ, ಹಿಂದೂ ಜಾಗರಣ ವೇದಿಕೆ ರಾಜ್ಯ ಸಂಚಾಲಕ ಲೋಹಿತ್ ಅರಸ್, ಜಿಲ್ಲಾ ಸಂಚಾಲಕ ಲಕ್ಷ್ಮಿನಾರಾಯಣ್, ತಾಲೂಕು ಅಧ್ಯಕ್ಷ ನಾಗಣ್ಣಗೌಡ, ರೈತ ಮೋರ್ಚಾ ಅಧ್ಯಕ್ಷ ಪರಮೇಶ್, ರಮೇಶ್ ಕುಮಾರ್, ಗಣೇಶ್ ಕುಮಾರಸ್ವಾಮಿ, ಈಡಿಗ ಸಮುದಾಯದ ಅಧ್ಯಕ್ಷ ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ಗಿರೀಶ್, ಗ್ರಾಪಂ ಸದಸ್ಯ ರಾಘವೇಂದ್ರ, ಶ್ರೀಕಾಂತ್ ಸೇರಿದಂತೆ ಇನ್ನಿತರರಿದ್ದರು.

ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಿ

ಸಚಿವ ಕೆ.ವೆಂಕಟೇಶ್ ಸಲಹೆ



ಪಿರಿಯಾಪಟ್ಟಣ, ಫೆ.26– ಈಗಾಗಲೇ ನಮ್ಮ ಸರ್ಕಾರ ನುಡಿದಂತೆ ನಡೆದು ಅನೇಕ ಯೋಜನೆಗಳ ಮೂಲಕ ಮಾದರಿಯಾಗಿದ್ದು, ಮುಂಬರುವ ದಿನಗಳಲ್ಲೂ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಲಿದೆ. ಹೀಗಾಗಿ ಸಾರ್ವಜನಿಕರು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ಹಾಗೂ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ತಾಲೂಕಿನ ಬಿಪಿಎಲ್ ಮಹಿಳಾ ಕಾರ್ಡುದಾರರಿಗೆ 20 ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಚುನಾವಣೆಗೂ ಮುನ್ನಾ ನಾವು ನೀಡಿದ್ದ ಭರವಸೆಯಂತೆ ಐದು ಗ್ಯಾರಂಟಿ ಯೋಜನೆಗಳನ್ನು ರಾಜ್ಯದಲ್ಲಿ ಜಾರಿಗೊಳಿಸಿ ನುಡಿದಂತೆ ನಡೆದಿದ್ದೇವೆ. ಆದರೆ ವಿರೋಧ ಪಕ್ಷದವರು ಅಂದಿನಿಂದ ಇಂದಿನವರೆಗೂ ಟೀಕೆ ನಡೆಸುತ್ತಿದ್ದಾರೆ. ಆದರೆ ನಾವು ಬಡವರ ಅನುಕೂಲಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲಾ ಸಮುದಾಯಗಳಿಗೂ ಅನುಕೂಲವಾಗುವ ಯೋಜನೆಗಳನ್ನು ಜಾರಿಗೊಳಿಸುತ್ತೇವೆ ಎಂದ ಅವರು, ವಿಪಕ್ಷಗಳು ಲೋಕಸಭಾ ಚುನಾವಣೆ ನಂತರ ಐದು ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳುತ್ತವೆ ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಈ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಬಾರದು ಎಂದರು. ಈ ವೇಳೆ ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ರೆಹಮತ್ ಜಾನ್ ಬಾಬು, ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ.ನಾಗರಾಜ್, ಪಿರಿಯಾಪಟ್ಟಣ ಸಹಾಯಕ ನಿರ್ದೇಶಕ ಡಾ.ಸೋಮಯ್ಯ, ಕುಕ್ಕುಟ ಮಹಾಮಂಡಳದ ನಿರ್ದೇಶಕ ಸಿದ್ದೇಗೌಡ ಸೇರಿದಂತೆ ಇನ್ನಿತರರಿದ್ದರು.

ಹೆಚ್.ಡಿ.ಕೋಟೆ: ಬೆಳಗನಹಳ್ಳಿ ದೇವಾಲಯದಲ್ಲಿ ಕಳ್ಳತನ

ಹೆಚ್.ಡಿ.ಕೋಟೆ, ಫೆ.26– ದೇವಾಲಯದ ಬಾಗಿಲು ಮುರಿದು ಒಳನುಗ್ಗಿರುವ ದುಷ್ಕರ್ಮಿಗಳು ದೇವರ ಚಿನ್ನದ 2 ತಾಳಿ ಹಾಗೂ ಗೋಲಕದಲ್ಲಿದ್ದ 10 ಸಾವಿರ ರೂ. ಕಳವು ಮಾಡಿ ಪರಾರಿಯಾಗಿರುವ ಘಟನೆ ತಾಲೂಕಿನ ಬೆಳಗನಹಳ್ಳಿ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ಮಾರಮ್ಮನ ದೇವಾಲಯದಲ್ಲಿ ಕಳ್ಳತನ ನಡೆದಿದ್ದು, ಎಂದಿನಂತೆ ಸೋಮವಾರ ಬೆಳಗ್ಗೆ 10 ಗಂಟೆ ವೇಳೆ ರೈತರೊಬ್ಬರು ಜಮೀನಿಗೆ ತೆರಳುತ್ತಿದ್ದ ವೇಳೆ ದೇವಾಲಯದ ಬಾಗಿಲು ಒಡೆದಿರುವುದು ಗಮನಿಸಿ ಊರಿನ ಯಜಮಾನರಿಗೆ ತಿಳಿಸಿದ್ದಾರೆ. ಬಳಿಕ ದೇವಾಲಯಕ್ಕೆ ಆಗಮಿಸಿದ ಗ್ರಾಮದ ಯಜಮಾನರು ಹಾಗೂ ಗ್ರಾಮಸ್ಥರು ವೀಕ್ಷಿಸಿದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ. ನಂತರ ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮತ್ಸ್ಯಗಂಧ (ಕ)2 ಪ್ರದರ್ಶನಗಳು, ಪ್ರೇತ (ಕ) 2 ಪ್ರದರ್ಶನಗಳು	
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮತ್ಸ್ಯಗಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಟಿಕಲ್ 370 (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಧೈರ್ಯಂ ಸರ್ವತ್ರ ಸಾಧನಂ	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್ ಸಲಾಮ್ (ತ)	4 ಪ್ರದರ್ಶನಗಳು
ಪ್ರಭಾ	
ಕ್ರಾಕ್(ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9.10ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಕ್ರಕ್ ಜೀತೇಗಾ ತೋ ಜಿಯೇಗಾ (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.50ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡೆಮೋನ್ ಸ್ಲೇಯರ್ (ಇಂ): ಬೆ.11.35ಕ್ಕೆ, ಮ.2ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಫೈಟರ್ (2ಡಿ)(ಹಿಂ): ಬೆ.10.15ಕ್ಕೆ, ಆಲ್ ಇಂಡಿಯಾ ರ್‍ಯಾಂಕ್ (ಹಿಂ): ಮ.1ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.6.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.35ಕ್ಕೆ, ಸಂ.6.35ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ, ಪ್ರೇಮಲು (ಮ): ಮ.3.20ಕ್ಕೆ, ರಾ.9.15ಕ್ಕೆ, ಮತ್ಸ್ಯಗಂಧ (ಕ): ರಾ.9.30ಕ್ಕೆ, ಒಂದು ಸರಳ ಪ್ರೇಮ ಕಥೆ (ಕ): ಮ.12.05ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚಾಣಕ್ಯ ಪಬ್ಲಿಕ್ ಶಾಲೆಯಲ್ಲಿ ವಾರ್ಷಿಕೋತ್ಸವ

ಬೆಟ್ಟದಪುರ, ಫೆ.26– ಮನುಷ್ಯರಲ್ಲಿ ಪರಿಪೂರ್ಣತೆ ಹಿಗ್ಗಿಸುವುದೇ ಶಿಕ್ಷಣ. ವಿದ್ಯಾರ್ಥಿಗಳು ಪಠ್ಯದ ಜೊತೆ ಸಂಸ್ಕಾರ ಕಲಿಯುವುದು ಅತಿ ಮುಖ್ಯ ಎಂದು ಕಿತ್ತೂರು ಕ್ಲಸ್ಟರ್ ಸಿಆರ್‌ಪಿ ಕವಿತಾ ತಿಳಿಸಿದರು.

ಇಲ್ಲಿಗೆ ಸಮೀಪದ ಕಿತ್ತೂರು ಗ್ರಾಮದ ನಿಂಗಮ್ಮ ಚೆನ್ನಿಗೆಗೌಡ ಕಲ್ಯಾಣ ಮಂಟಪದಲ್ಲಿ ನಡೆದ ಚಾಣಕ್ಯ ಪಬ್ಲಿಕ್ ಶಾಲೆಯ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಕಾರ ಕಲಿತ ಮಕ್ಕಳು ಸಮಾಜದಲ್ಲಿ ಉನ್ನತ ಸ್ಥಾನಕ್ಕೇರುತ್ತಾರೆ. ತಂದೆ ತಾಯಿಗಳು ಮಕ್ಕಳಿಗೆ ಸಂಸ್ಕಾರ ಕಲಿಸಿ, ಆಗ ವಿದ್ಯೆ ತಾನಾಗಿಯೇ ಒಲಿಯುತ್ತದೆ ಎಂದರು. ಈ ವೇಳೆ ಮುಖಂಡರಾದ ನಿಂಗೇಗೌಡ, ವೀರೇಶ್, ಅರ್ಚಕ ಪ್ರಸನ್ನ, ಚಾಣಕ್ಯ ಪಬ್ಲಿಕ್ ಶಾಲೆ ಅಧ್ಯಕ್ಷ ಸಂತೋಷ್, ಕಾರ್ಯದರ್ಶಿ ಟಿ.ಬಿ.ಲೋಕೇಶ್, ಉಪಾಧ್ಯಕ್ಷ ಮಹೇಶ್, ಆಡಳಿತ ವರ್ಗದ ಫಣೀಶ್, ಶಿಕ್ಷಕ ಮಂಜುನಾಥ್, ಶಿಕ್ಷಕಿ ತಾರಾ, ಸಹ ಶಿಕ್ಷಕರಾದ ಚೇತನ್, ಸಂಜಯ್, ಬಿಂದು, ಕಾವ್ಯ, ಅಖಿಲ ಮತ್ತು ಜನನಿ ಇದ್ದರು.



ಕಿತ್ತೂರು ಗ್ರಾಮದಲ್ಲಿ ಚಾಣಕ್ಯ ಪಬ್ಲಿಕ್ ಶಾಲೆ ವಾರ್ಷಿಕೋತ್ಸವ ನಡೆಯಿತು.

ಇಂದು ಪ್ರಾಧ್ಯಾಪಕರಿಗೆ ಒಂದು ದಿನದ ಕಾರ್ಯಾಗಾರ

ಮೈಸೂರು, ಫೆ.26– 'ಅಂಗವೈಕಲ್ಯ ಮತ್ತು ಅಂತರ್ಗತ ಶಿಕ್ಷಣದ ಕುರಿತು ಕಾಲೇಜು ಅಧ್ಯಾಪಕರ ಸಾಮರ್ಥ್ಯ ನಿರ್ಮಾಣ' ವಿಚಾರ ಕುರಿತು ಮೈಸೂರು ವಿಭಾಗದ ಪ್ರಾಧ್ಯಾಪಕರಿಗೆ ಒಂದು ದಿನದ ಕಾರ್ಯಾಗಾರವನ್ನು ಮಹಾರಾಣಿ ವಾಣಿಜ್ಯ ಕಾಲೇಜು ಸಭಾಂಗಣದಲ್ಲಿ ಮಂಗಳವಾರ (ಫೆ.27) ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಂಜನಗೂಡಲ್ಲಿ ಅಂಚೆ ನೌಕರರ ದ್ವೈವಾರ್ಷಿಕ ಜಂಟಿ ಅಧಿವೇಶನ



ನಂಜನಗೂಡಿನ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಅಂಚೆ ನೌಕರರಾದ ಚಿನ್ನಮ್ಮ, ಬಸವರಾಜಪ್ಪ, ಪ್ರಸನ್ನರಾವ್ ಮತ್ತು ಬಡ್ತಿ ಪಡೆದ ಮಹೇಶ್ ಅವರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಫೆ.26– ಅಖಿಲ ಭಾರತ ಅಂಚೆ ನೌಕರರ ಸಂಘಟನೆ ಎನ್‌ಪಿಎಸ್ ಪಿಂಚಣಿ ಪದ್ಧತಿ ರದ್ದತಿಗೊಳಿಸಿ ಹಳೇ ಪಿಂಚಣಿ ಪದ್ಧತಿ ಜಾರಿಗೆ ತರುವಂತೆ ಒತ್ತಾಯಿಸುವ ಮೂಲಕ ನೌಕರರ ಹಿತಾಸಕ್ತಿ ಕಾಪಾಡಲು ಶ್ರಮಿಸುತ್ತಿದೆ ಎಂದು ಅಖಿಲ ಭಾರತ ಅಂಚೆ ನೌಕರರ ಸಂಘದ ವಲಯ ಕಾರ್ಯದರ್ಶಿ ಜಾನಕಿರಾಂ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಅಖಿಲ ಭಾರತ ಅಂಚೆ ನೌಕರರ ಸಂಘದ ವಿಭಾಗೀಯ ದ್ವೈವಾರ್ಷಿಕ ಜಂಟಿ ಅಧಿವೇಶನ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಂಘಟನೆ ಹೋರಾಟದ ಫಲವಾಗಿ ಇಲಾಖೆಯಲ್ಲಿ ಖಾಲಿ ಇದ್ದ 1800 ಪೋಸ್ಟ್‌ಮನ್ ಹುದ್ದೆಗಳನ್ನು ಕೇಂದ್ರ ಸರ್ಕಾರ ಭರ್ತಿ ಮಾಡಿದೆ. ಅಲ್ಲದೇ ಇಲಾಖೆ ನೌಕರರ ಕ್ಷೇಮಾಭ್ಯುದಯಕ್ಕಾಗಿ ಹಣರಹಿತವಾಗಿ ವಿಮೆ ಸೌಲಭ್ಯ ಕಲ್ಪಿಸಬೇಕು ಎಂಬುದು ನಮ್ಮ ಸಂಘಟನೆಯ ಬಲವಾದ ಒತ್ತಾಯವಾಗಿದ್ದು, ಅದು ಶೀಘ್ರದಲ್ಲೇ ಈಡೇರುವ ವಿಶ್ವಾಸವಿದೆ ಎಂದರು.

ಎಲ್ಲವನ್ನೂ ಖಾಸಗೀಕರಣಗೊಳಿಸುತ್ತಿರುವ ಈ ಸಂದರ್ಭ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಸಂಸ್ಥೆಗಳಲ್ಲಿ ಅಂಚೆ ಇಲಾಖೆಯೂ ಒಂದಾಗಿದ್ದು, ಜನರ ವಿಶ್ವಾಸಗಳಿಸಿ ಸೇವೆ ಒದಗಿಸುತ್ತಿದೆ. ಯಾವುದೇ ಕಾರಣಕ್ಕೂ ಅಂಚೆ ಇಲಾಖೆ ಖಾಸಗೀಕರಣಗೊಳಿಸದಂತೆ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲೇ ಉಳಿಸಿಕೊಳ್ಳುವ ಜವಾಬ್ದಾರಿ ಎಲ್ಲಾ ಅಂಚೆ ನೌಕರರ ಮೇಲಿದೆ. ಈ ನಿಟ್ಟಿನಲ್ಲಿ ಅಂಚೆ ನೌಕರರು ಹುರುಪಿನಿಂದ ಕೆಲಸ ನಿರ್ವಹಿಸಿ ಜನರಿಗೆ ಉತ್ತಮ ಸೇವೆ ಒದಗಿಸಬೇಕು ಎಂದರು.

ನಂಜನಗೂಡು ವಿಭಾಗದ ವಿಭಾಗೀಯ ಕಾರ್ಯದರ್ಶಿ ಆರ್.ಮಂಜುನಾಥ್ ಮಾತನಾಡಿ, ನಮ್ಮ ಸಂಘಟನೆ ನೌಕರರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಅಂಚೆ ನೌಕರರಾದ ಚಿನ್ನಮ್ಮ, ಬಸವರಾಜಪ್ಪ, ಪ್ರಸನ್ನರಾವ್ ಮತ್ತು ಬಡ್ತಿ ಪಡೆದ ಅಂಚೆ ನೌಕರರನ್ನು ಸನ್ಮಾನಿಸಲಾಯಿತು. ಈ ವೇಳೆ ವಿಭಾಗೀಯ ಅಧ್ಯಕ್ಷ ಡಿ.ಶ್ರೀನಿವಾಸ್, ಪ್ರಭಾವತಿ, ಕೆ.ಜಿ.ನಾಯಕ್, ಮಹೇಶ್, ಲಕ್ಷ್ಮಣ್, ರೇಣುಕಾಂಬೆ, ತೇಜಸ್ವಿನಿ, ಚಂದ್ರಶೇಖರ್, ಮಹೇಂದ್ರ ಮಹೇಶ್ ಸೇರಿದಂತೆ ಹಲವರಿದ್ದರು.

ಕಾಡಬೇಗೂರು ಡೈರಿಗೆ ಜ್ಯೋತಿ ಅಧ್ಯಕ್ಷೆ



ಕಾಡಬೇಗೂರು ಡೈರಿ ಅಧ್ಯಕ್ಷೆಯಾಗಿ ಜ್ಯೋತಿ, ಉಪಾಧ್ಯಕ್ಷೆಯಾಗಿ ಭಾನುಮತಿ ಆಯ್ಕೆಯಾದರು.

ಸರಗೂರು, ಫೆ.26– ತಾಲೂಕಿನ ಕಾಡಬೇಗೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಹೆಚ್.ಎಸ್.ಜ್ಯೋತಿ, ಉಪಾಧ್ಯಕ್ಷೆಯಾಗಿ ಭಾನುಮತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಹೆಚ್.ಎಸ್.ಜ್ಯೋತಿ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಭಾನುಮತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಣುಕಾ ಘೋಷಿಸಿದರು.

ಚುನಾವಣೆಯಲ್ಲಿ ಸದಸ್ಯರಾದ ರಾಮು, ಕೃಷ್ಣ, ರತ್ನಯ್ಯ, ವಿಠಲ, ರಮೇಶ್, ಮಂಜುಳಾ, ಸುಜಾತ, ಅನಿತಾ, ಡೈರಿ ಕಾರ್ಯದರ್ಶಿ ಕೆ.ಪಿ.ಆರತಿ, ಬಿ.ಮಟಕೆರೆ ಗ್ರಾಪಂ ಅಧ್ಯಕ್ಷ ಅಜಿತ್ ಕುಮಾರ್, ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ವಿನೋದ್ ಪ್ರಸಾದ್, ಗ್ರಾಪಂ ಸದಸ್ಯರಾದ ಬೆಟ್ಟಸ್ವಾಮಿ, ವಕೀಲರಾದ ಕೆ.ಎಸ್. ಮೋಹನ್ ಹಾಗೂ ಮಹದೇವಪ್ರಸಾದ್, ಕೆ.ಪಿ.ಮಹದೇವಪ್ಪ, ನಾಗೇಂದ್ರ, ಬಸವಣ್ಣ, ಇಂದ್ರಪ್ಪ, ಸೋಮಣ್ಣ, ಮಹಾವೀರ, ಗುರುಸ್ವಾಮಿ, ಪ್ರಕಾಶ್, ಹರೀಶ್, ರಾಜಪ್ಪ, ರಮೇಶ್, ರೇವಣ್ಣ, ವಿಠಲ್, ವಸಂತ್, ಜಯಶಂಕರ್ ಸೇರಿದಂತೆ ಇನ್ನಿತರರಿದ್ದರು.

ಸೇವಾ ಭದ್ರತೆಗೆ ಆಗ್ರಹಿಸಿ ಗ್ರಾಮ ಸಹಾಯಕರ ಪ್ರತಿಭಟನೆ



ಮೈಸೂರು ಜಿಲ್ಲೆ ಸರ್ಕಾರಿ ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಯಿತು.

ಮೈಸೂರು, ಫೆ.26(ಜಿಎ)–ರಾಜ್ಯ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ 10,450 ಗ್ರಾಮ ಸಹಾಯಕರನ್ನು ಡಿ ದರ್ಜೆ ನೌಕರರೆಂದು ಪರಿಗಣಿಸಿ ಸೇವಾ ಭದ್ರತೆ ನೀಡಬೇಕೆಂದು ಒತ್ತಾಯಿಸಿ ಮೈಸೂರು ಜಿಲ್ಲೆ ಸರ್ಕಾರಿ ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಕಂದಾಯ ಇಲಾಖೆಯಲ್ಲಿ ಸುಮಾರು 45 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ 10,450 ಗ್ರಾಮ ಸಹಾಯಕರ ಹುದ್ದೆಯನ್ನು 1978ರಲ್ಲಿ ಮಿತ ವೇತನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಯಿತು. 2007ರಲ್ಲಿ ಗ್ರಾಮ ಸಹಾಯಕರ ಹುದ್ದೆ ಖಾಯಂ ಆಗಿದೆ. ಆದರೆ, ಯಾವ ಸರ್ಕಾರಗಳೂ ಗ್ರಾಮ ಸಹಾಯಕರಿಗೆ ಸೌಲಭ್ಯ ನೀಡಿಲ್ಲ. 2014ರಲ್ಲಿ ಅಡ್ವೋಕೇಟ್ ಜನರಲ್ ಗ್ರಾಮ ಸಹಾಯಕರನ್ನು ಡಿ ಗ್ರೂಪ್ ನೌಕರರನ್ನಾಗಿ ಮಾಡಲು ಯಾವುದೇ ಕಾನೂನು ತೊಡಕಿಲ್ಲ ಎಂದು ವರದಿ ನೀಡಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಬೆಳಗಾವಿಯ ಸುವರ್ಣಸೌಧದವರೆಗೆ ಪಾದಯಾತ್ರೆ ಮಾಡಿದ್ದ ಸಂದರ್ಭದಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಶೀಘ್ರದಲ್ಲೇ ಡಿ ಗ್ರೂಪ್ ಸೌಲಭ್ಯ ನೀಡುವ ಭರವಸೆ ನೀಡಿದ್ದರು.

2024–25ರ ಬಜೆಟ್‌ನಲ್ಲಿ ನಮ್ಮ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ಹೀಗಾಗಿ ನಮಗೆ ಆಗಿರುವ ಅನ್ಯಾಯ ಖಂಡಿಸಿ ಸಿದ್ದರಾಮನಹುಂಡಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿ ಮನವಿ ಸಲ್ಲಿಸಲಾಗಿದೆ. ಫೆ.28ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ. ಸರ್ಕಾರ ಕೂಡಲೇ ಗ್ರಾಮ ಸಹಾಯಕರನ್ನು ಡಿ ಗ್ರೂಪ್ ನೌಕರರನ್ನಾಗಿ ಪರಿಗಣಿಸಿ ಸೌಲಭ್ಯ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಎಂ.ಡಿ. ಬಸವರಾಜು, ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್. ಎಸ್, ವಿಜಯ, ರಾಮು ಸೇರಿದಂತೆ ಹಲವರು ಭಾಗವಹಿಸಿದ್ದರು.

ರೈತರಿಗೆ ಮೂರು ದಿನಗಳ ತರಬೇತಿ

ಮೈಸೂರು,ಫೆ.26–ಜಿಲ್ಲಾ ಕೃಷಿ ತರಬೇತಿ ಕೇಂದ್ರ ನಾಗನಹಳ್ಳಿಯಲ್ಲಿ ಫೆ.28ರಿಂದ ಮಾ.1ರವರೆಗೆ "ತೆಂಗು, ಅಡಿಕೆ ಹಾಗೂ ಪ್ರಮುಖ ತರಕಾರಿ ಬೆಳೆಗಳ ನರ್ಸರಿ ತಯಾರಿಕೆ ಮತ್ತು ನಿರ್ವಹಣೆ" ಎಂಬ ವಿಷಯದ ಬಗ್ಗೆ ರೈತರು ಅಥವಾ ರೈತ ಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತರು, ರೈತ ಮಹಿಳೆಯರಿಗೆ ಊಟದ ವ್ಯವಸ್ಥೆ ಒದಗಿಸಲಾಗಿದ್ದು, ಆಸಕ್ತ ರೈತರು ಅಥವಾ ರೈತ ಮಹಿಳೆಯರು ತರಬೇತಿ ಕೇಂದ್ರದ ಕೃಷಿ ಅಧಿಕಾರಿಗಳ ದೂ.ಸಂ. 8277933116 ಗೆ ಕರೆಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ಮೈಸೂರು ಜಿಲ್ಲೆಯ 30 ರೈತರು ಅಥವಾ ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮಿಳುನಾಡಲ್ಲಿ ರಾಜಕೀಯ ಮೈತ್ರಿಗೆ ಆದ್ಯತೆ ನೀಡಿದ ಪರಿಣಾಮ ಬೆಂಗಳೂರಲ್ಲಿ ನೀರಿನ ಬಿಕ್ಕಟ್ಟು

ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ವಾಗ್ದಾಳಿ



ಬೆಂಗಳೂರು: ಬೆಂಗಳೂರು ಹಾಗೂ ರಾಜ್ಯದ ಉಳಿದ ಭಾಗಗಳಲ್ಲಿನ ನೀರಿನ ಸಮಸ್ಯೆ ಕುರಿತು ಕರ್ನಾಟಕ ಬಿಜೆಪಿ ಮುಖ್ಯಸ್ಥ ಮತ್ತು ಶಾಸಕ ಬಿವೈ ವಿಜಯೇಂದ್ರ ಸೋಮವಾರ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬೆಂಗಳೂರಿನ ನೀರಿನ ಬಿಕ್ಕಟ್ಟನ್ನು ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರಿಯಾಗಿ ನಿಭಾಯಿಸಿಲ್ಲದಿರುವುದು ಅವರ ಅಸಮರ್ಥತೆ ಮತ್ತು ಜನರ ಬಗೆಗಿನ ಅವರ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ತಮಿಳುನಾಡಿನಲ್ಲಿ ತಮ್ಮ ರಾಜಕೀಯ ಮೈತ್ರಿಗಳಿಗೆ ಆದ್ಯತೆ ನೀಡುವ ಮೂಲಕ ಕರ್ನಾಟಕದ ನಾಗರಿಕರನ್ನು ಅಸಹನೀಯ ದುಃಖಕ್ಕೆ ದೂಡಿದ್ದಾರೆ. ಕಾವೇರಿ ನಿರ್ವಹಣಾ ಮಂಡಳಿ ಮುಂದೆ ಮೊದಲು ನಮ್ಮ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರ ವೈಫಲ್ಯವಾಗಿದ್ದು, ಈಗಾಗಲೇ ಪರಿಸ್ಥಿತಿಯನ್ನು ಉಲ್ಬಣಗೊಳಿಸಿದೆ. ಇದುವೇ ಬೆಂಗಳೂರಿನಲ್ಲಿ ಭಾರಿ ನೀರಿನ ಕೊರತೆಗೆ ಕಾರಣವಾಯಿತು ಎಂದರು.

ತಾವೇ ಸೃಷ್ಟಿಸಿರುವ ಬಿಕ್ಕಟ್ಟಿನ ವಾಸ್ತವವನ್ನು ಅರಿತುಕೊಂಡು ಬೆಂಗಳೂರಿನ ನಾಗರಿಕರಿಗೆ ಪರಿಹಾರ ನೀಡಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ನಾನು ಸಿಎಂ ಮತ್ತು ಸರ್ಕಾರವನ್ನು ಒತ್ತಾಯಿಸುತ್ತೇನೆ. ಜೀವಗಳು ಅಪಾಯದಲ್ಲಿದೆ ಮತ್ತು ಅವರ ನಿರ್ಲಕ್ಷ್ಯವನ್ನು ಇನ್ನು ಮುಂದೆ ಸಹಿಸಲಾಗುವುದಿಲ್ಲ ಎಂದು ಹೇಳಿದರು.

ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ ವಾರ್ಷಿಕೋತ್ಸವ



ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್‌ನಲ್ಲಿ ಶಾಲಾ ವಾರ್ಷಿಕೋತ್ಸವ (ಕಲಾ ಸೌರಭ) ಹಾಗೂ 10ನೇ ಚಾಮರಾಜ ಒಡೆಯರ್ 161ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮೈಸೂರು,ಫೆ.26–ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್‌ನಲ್ಲಿ ಶಾಲಾ ವಾರ್ಷಿಕೋತ್ಸವ (ಕಲಾ ಸೌರಭ) ಹಾಗೂ 10ನೇ ಚಾಮರಾಜ ಒಡೆಯರ್ 161ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಕಲಾಶ್ರೀ ಡಾ.ಕೆ.ಕುಮಾರ್ ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಇದೊಂದು ಉತ್ತಮ ವೇದಿಕೆ ಎಂಬುವುದರಲ್ಲಿ ಎರಡು ಮಾತಿಲ್ಲ. ಭಗವದ್ಗೀತೆ ಪಠಣ, ಯೋಗ ಪ್ರದರ್ಶನ ಅದ್ಭುತವಾಗಿ ಮೂಡಿಬಂದಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಲೆ ಸಹ ಕಾರ್ಯದರ್ಶಿ ಡಾ.ಭಾರತಿ ಶ್ರೀಧರ್‌ರಾಜ್ ಅರಸ್ ಮಾತನಾಡಿ, ಮೊದಲ ವರ್ಷದ ವಾರ್ಷಿಕೋತ್ಸವವಾದರೂ ಹಳೆಯ ವಿದ್ಯಾರ್ಥಿ, ಮಕ್ಕಳು, ಶಿಕ್ಷಕರೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮ ಅರ್ಥಪೂರ್ಣವಾಗಿತ್ತು ಎಂದರು. ಶಾಲೆಯ ಕಾರ್ಯದರ್ಶಿ ಮಹೇಶ್ ಎನ್.ಅರಸ್ ಮಾತನಾಡಿ, ಚಾಮರಾಜ ಒಡೆಯರ್, ಮೈಸೂರಿನ ಜನತೆಗೆ ಕೊಟ್ಟ ಕೊಡುಗೆಯನ್ನು ಸ್ಮರಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಬಹುಮಾನ ವಿತರಿಸಲಾಯಿತು.



ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರು ಜಿಲ್ಲಾ ಕಡಕೊಳ ರೈಲ್ವೆ ನಿಲ್ದಾಣ ಸಮೀಪ ಫ್ಲೈ ಓವರ್ ಅಂಡರ್ ಪಾಸ್ ಅನ್ನು ವರ್ಚ್ಯುಯಲ್ ಮೂಲಕ ಉದ್ಘಾಟಿಸಿದರು. ಈ ವೇಳೆ ಇದಕ್ಕೆಲ್ಲಾ ಕಾರಣಕರ್ತರಾದ ಸಂಸದ ಪ್ರತಾಪ್ ಸಿಂಹ ಅವರನ್ನು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಲ್ಲಾ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಡಿ.ಮಹೇಶ್ ನಾಯಕ, ನಗರ ಪ್ರಧಾನ ಕಾರ್ಯದರ್ಶಿ ರಘು, ಮಹಿಳಾ ಘಟಕದ ಪ್ರಮುಖರಾದ ಶ್ರೀಮತಿ ಮಂಜುಳಾ, ಶ್ರೀಮತಿ ಸೌಭಾಗ್ಯ ಅಭಿನಂದಿಸಿದರು.

ದೇಶದಲ್ಲಿ ಸ್ಥಾಪನೆಯಾಗಲಿದೆ 18 ಹೊಸ ಪರಮಾಣು ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಪ್ಲಾನ್



ಹೊಸದಿಲ್ಲಿ: ದೇಶವು 18 ಹೊಸ ಪರಮಾಣು ರಿಯಾಕ್ಟರ್‌ಗಳ ಸ್ಥಾಪನೆಯೊಂದಿಗೆ 13,400 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಿದೆ. ಇದರೊಂದಿಗೆ 2032ರ ವೇಳೆಗೆ ದೇಶದ ವಿದ್ಯುತ್ ಕ್ಷೇತ್ರಕ್ಕೆ ಪರಮಾಣು ವಿದ್ಯುತ್ ಕೊಡುಗೆ 22,480 ಮೆಗಾವ್ಯಾಟ್‌ಗೆ ಹೆಚ್ಚಲಿದೆ.

ಇತ್ತೀಚೆಗಷ್ಟೆ ಗುಜರಾತ್‌ನ ಕಾಕ್ರಾಪುರದಲ್ಲಿ 700 ಮೆಗಾವ್ಯಾಟ್ ಸಾಮರ್ಥ್ಯದ ಪರಮಾಣು ರಿಯಾಕ್ಟರ್ ಉದ್ಘಾಟಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಈ ಘೋಷಣೆ ಮಾಡಿದ್ದರು.

ಸದ್ಯ ದೇಶದಲ್ಲಿ ಭಾರತೀಯ ಅಣುಶಕ್ತಿ ಇಂಧನ ನಿಗಮ (ಎನ್‌ಪಿಸಿಐಎಲ್) 24 ರಿಯಾಕ್ಟರ್‌ಗಳ ಮೂಲಕ 8,180 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿದೆ. ರಷ್ಯಾದ ಸಹಯೋಗದಲ್ಲಿ ತಮಿಳುನಾಡಿನ ಕೂಡಂಕುಳಂನಲ್ಲಿ 1,000 ಮೆಗಾ ವ್ಯಾಟ್ ಸಾಮರ್ಥ್ಯದ 4 ಪರಮಾಣು ಘಟಕಗಳು ನಿರ್ಮಾಣ ಹಂತದಲ್ಲಿವೆ. ಇದಲ್ಲದೆ 700 ಮೆಗಾ ವ್ಯಾಟ್ ಸಾಮರ್ಥ್ಯದ 4 ಸ್ವದೇಶಿ ನಿರ್ಮಿತ ಪರಮಾಣು ಘಟಕಗಳು ರಾಜಸ್ಥಾನದ ರಾವತ್‌ಭಾತಾದಲ್ಲಿ ತಲೆ ಎತ್ತಲಿದೆ.

ಹರಿಯಾಣದ ಗೋರಖ್‌ಪುರ, ಕರ್ನಾಟಕದ ಕಾರವಾರ ಬಳಿಯ ಕೈಗಾ ಅಣು ವಿದ್ಯುತ್ ಸ್ಥಾವರ ಹಾಗೂ ಮಧ್ಯ ಪ್ರದೇಶದ ಛುಟ್ಕಾ ಅಣು ವಿದ್ಯುತ್ ಸ್ಥಾವರಗಳಲ್ಲಿ 700 ಮೆಗಾವ್ಯಾಟ್ ಸಾಮರ್ಥ್ಯದ 10 ಘಟಕಗಳು ಮುಂದಿನ ದಿನಗಳಲ್ಲಿ ತಲೆ ಎತ್ತಲಿವೆ. ಈ ಮೂಲಕ ಹೊಸ ದಾಗಿ 18 ಪರಮಾಣು ರಿಯಾ ಕ್ಟರ್‌ಗಳು ಸ್ಥಾಪನೆಯಾಗಲಿದ್ದು, ವಿದ್ಯುತ್ ಕೊರತೆ ನಿವಾರಿಸಲಿವೆ.

ಡಾ.ಆರ್.ಎಸ್.ಉಮಾಕಾಂತ್‌ಗೆ 'ರಿಸರ್ಚ್ ಎಕ್ಸಲೆನ್ಸಿ ಅವಾರ್ಡ್ 2023'



ಡಾ.ಉಮಾಕಾಂತ್


ಮೈಸೂರು,ಫೆ.26–ಮೈಸೂರು ವಿಶ್ವ ವಿದ್ಯಾನಿಲಯದ ಮಾನಸ ಗಂಗೋತ್ರಿಯ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ.ಆರ್.ಎಸ್. ಉಮಾಕಾಂತ್ ಅವರು 'ಬಯೋಕೆಮಿಕಲ್ ಜೆನೆಟಿಕ್ಸ್' ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಬೋಧನೆಗೆ ನೀಡಿರುವ ಕೊಡುಗೆಗಳಿಗಾಗಿ ಪ್ರತಿಷ್ಠಿತ 'ರಿಸರ್ಚ್ ಎಕ್ಸಲೆನ್ಸಿ ಅವಾರ್ಡ್ 2023' ಸ್ವೀಕರಿಸಿದ್ದಾರೆ. ಸೊಸೈಟಿ ಫಾರ್ ಬಯೋಟಿಕ್ ಅಂಡ್ ಎನ್ವಿರಾನ್‌ಮೆಂಟಲ್ ರಿಸರ್ಚ್ ವಿಷಯವಾಗಿ ಪಶ್ಚಿಮ ಬಂಗಾಳದ ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾನಿಲಯದಲ್ಲಿ ನಡೆದ 3ನೇ ಬಯೋಟಿಕ್ ಸೈನ್ಸ್ ಕಾಂಗ್ರೆಸ್ (ಬಯೋ ಸ್ಕ್ಯಾನ್ 23) ಮತ್ತು ಸಸ್ಯ ಆರೋಗ್ಯ ಸಂಶೋಧನೆಯಲ್ಲಿನ ಪ್ರಗತಿಯ ಕುರಿತು ನಡೆದ ಅಂತರರಾಷ್ಟ್ರೀಯ ಸಮ್ಮೇಳನ–2023 ರಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ಸ್ಮರಣಿಕೆ ಮತ್ತು ಪ್ರಶಂಸಾ ಪ್ರಮಾಣ ಪತ್ರವನ್ನು ಹೊಂದಿದೆ. ಡಾ. ಉಮಾಕಾಂತ್ ಅವರು ಪ್ರಸ್ತುತ ಮಾಹಿತಿ ಮತ್ತು ಸಂವಹನ ವಿಭಾಗದ (ಐಸಿಡಿ) ನಿರ್ದೇಶಕರಾಗಿ, ಇ–ಪ್ರೊಕ್ಯೂರ್‌ಮೆಂಟ್ ಸೆಲ್‌ನ ಸಂಯೋಜಕರಾಗಿ ಮತ್ತು ಮೈಸೂರು ವಿವಿ ಪರೀಕ್ಷಾ ಶಾಖೆಯ ನೋಡಲ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ನಾಳೆಗೆ ವಿಧಾನಮಂಡಲ ಅಧಿವೇಶನ ಮುಂದೂಡಿಕೆ

ಬೆಂಗಳೂರು, ಫೆ.26 (ಕೆಎಂಶಿ)– ವಿಧಾನಮಂಡಲದ ಅಧಿವೇಶನವನ್ನು ಮತ್ತೆ ಒಂದು ದಿನಕ್ಕೆ ವಿಸ್ತರಣೆ ಮಾಡ ಲಾಗಿದೆ. ಫೆ.23ರ ಶುಕ್ರವಾರದಂದು ಮುಗಿಯಬೇಕಾಗಿದ್ದ ಅಧಿವೇಶನವನ್ನು ಒಂದು ದಿನ ವಿಸ್ತರಣೆ ಮಾಡಿ ಇಂದಿಗೆ ಮುಂದೂಡಲಾಗಿತ್ತು, ಆದರೆ, ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ನಿನ್ನೆ ನಿಧನರಾದ ಹಿನ್ನೆಲೆಯಲ್ಲಿ ಇಂದು ವಿಧಾನಸಭೆಯಲ್ಲಿ ಮೃತರಿಗೆ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಸಲ್ಲಿಸಿದ ನಂತರ ಬೇರೆ ಯಾವುದೇ ಕಾರ್ಯಕಲಾಪಗಳನ್ನು ನಡೆಸದೆ ಅಧಿವೇಶನವನ್ನು ಬುಧವಾರಕ್ಕೆ ಮುಂದೂಡಲಾಯಿತು. ಅಧಿವೇಶನ ಮುಂದೂಡುವ ಮುನ್ನ ಮಾತನಾಡಿದ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಬುಧವಾರ ಬೆಳಗ್ಗೆ 9.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2024–25ನೇ ಸಾಲಿನ ಆಯ ವ್ಯಯದ ಮೇಲೆ ನಡೆದ ಚರ್ಚೆಗೆ ಸದನದಲ್ಲಿ ಉತ್ತರ ನೀಡಲಿದ್ದಾರೆ ಎಂದು ಪ್ರಕಟಿಸಿದರು.

ನಂತರ ಬುಧವಾರ ಬೆಳಗ್ಗೆ 9.15ಕ್ಕೆ ಸೇರುವಂತೆ ಪ್ರಕಟಿಸಿ, ಸದನವನ್ನು ಮುಂದೂಡಿದರು.

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಗೆ ಭೂಮಿಪೂಜೆ



ಗಂಗೋತ್ರಿ ಬಡಾವಣೆಯಲ್ಲಿ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಶಂಕುಸ್ಥಾಪನಾ ಸಮಾರಂಭದಲ್ಲಿ ನಡೆಯಿತು.

ಮೈಸೂರು,ಫೆ.26–ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಅಪ್ಪಟ ಗಾಂಧೀವಾದಿ ದಿವಂಗತ ಹೆಚ್.ಸಿ.ದಾಸಪ್ಪನವರ ಸ್ಮರಣಾರ್ಥ ನಿರ್ಮಾಣವಾಗುತ್ತಿರುವ 'ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ'ಯ ಶಂಕುಸ್ಥಾಪನಾ ಸಮಾರಂಭ ಗಂಗೋತ್ರಿ ಬಡಾವಣೆಯ ಮಾರುತಿ ದೇವಸ್ಥಾನದ ರಸ್ತೆಯಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ. ನಿರ್ಮಲನಂದನಾಥ ಮಹಾಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ಇದೇ ವೇಳೆ ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, ದಾಸಪ್ಪನವರು ಅಪ್ಪಟ ಗಾಂಧೀವಾದಿಗಳಾಗಿದ್ದು, ಅಂದಿನ ಕಾಲದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ನೆಹರೂ ಕುಟುಂಬದೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಕೇಂದ್ರ ಹಾಗೂ ರಾಜ್ಯ ಸಂಪುಟದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿ ಸಮಾಜಕ್ಕೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಅವರ ವಿಚಾರಧಾರೆ ಹಾಗೂ ಆದರ್ಶಗಳನ್ನು ಇಂದಿನ ಪೀಳಿಗೆಗೆ ತಲುಪಿಸಬೇಕು. ನಿವೇಶನ ಹಂಚಿಕೆಯಾಗಿ ಸುಮಾರು 50 ವರ್ಷಗಳೇ ಕಳೆದರೂ ಕಟ್ಟಡ ನಿರ್ಮಾಣ ಕಾರ್ಯವಾಗಿಲ್ಲ. ಸಮಾಜದ ಸಹೃದಯರು ದೇಣಿಗೆ ನೀಡಿ ಪ್ರೋತ್ಸಾಹಿಸಬೇಕೆಂದು ಕೇಳಿಕೊಂಡರು.

ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ದಾಸಪ್ಪ ಹಾಗೂ ಅವರ ಮಡದಿ ಯಶೋಧರಮ್ಮ ದಾಸಪ್ಪನವರ ಸಮಾಜಮುಖಿ ಕಾರ್ಯಗಳನ್ನು ನೆನಪಿಸುತ್ತಾ, ಸಚಿವೆಯಾಗಿದ್ದ ಸಂದರ್ಭದಲ್ಲಿ ಮದ್ಯಪಾನ ನಿಷೇಧ ಕಾನೂನು ಜಾರಿ ವಿಷಯದಲ್ಲಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಧೀಮಂತ ನಾಯಕಿಯಾಗಿದ್ದರು. ಗಾಂಧಿ ತತ್ವಗಳ ಅಡಿ ಕೆಲಸ ಮಾಡುತ್ತ, ಮೈಸೂರಿನ ತಮ್ಮ ಭವ್ಯ ಬಂಗಲೆಯನ್ನು ಒಕ್ಕಲಿಗ ಸಮಾಜದ ವಿದ್ಯಾರ್ಥಿನಿಯರ ನಿಲಯವನ್ನಾಗಿ ಮಾಡಿ ತಮ್ಮ ಕೊನೆ ದಿನಗಳವರೆಗೂ ಸಮಾಜಕ್ಕೆ ಕೊಡುಗೈ ದಾನಿಯಾಗಿದ್ದರು. ಹಣಕಾಸಿನ ಮುಗ್ಗಟ್ಟಿನ ಸ್ಥಿತಿಯಲ್ಲಿ ತಮ್ಮ ಕೈಯ್ಯಲ್ಲಿ ಇದ್ದ ಚಿನ್ನದ ಬಳೆಗಳನ್ನು ಅಡವಿಟ್ಟು ಸಂಸ್ಥೆಯನ್ನು ನಡೆಸಿದ ಉದಾತ್ತ ಮಹಿಳೆಯಾಗಿದ್ದರು ಎಂದು ಅವರ ಕೊಡುಗೆಗಳನ್ನು ಸ್ಮರಿಸಿದರು.

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಅಧ್ಯಕ್ಷ ಮಾಜಿ ಶಾಸಕ ವಾಸು ಅನುಪಸ್ಥಿತಿಯಲ್ಲಿ, ಉಪಾಧ್ಯಕ್ಷ ಜಿ.ಬಿ.ಶಿವರಾಜು, ಕಾರ್ಯದರ್ಶಿಗಳಾದ ದಾಸಪ್ಪನವರ ಸೊಸೆ ಸರೋಜ ತುಳಸಿದಾಸ್, ಖಜಾಂಚಿ ಮಾಜಿ ಮೇಯರ್ ಪಿ.ವಿಶ್ವನಾಥ್ ಹಾಗೂ ಸಂಸ್ಥೆಯ ಸದಸ್ಯರಾದ ನಿವೃತ್ತ ಅಧಿಕಾರಿಗಳಾದ ಪಿ.ಬೋರೇಗೌಡ, ಕೆಂಪರಾಜೇಗೌಡ ಮತ್ತಿತರರು ಉಪಸ್ಥಿತರಿದ್ದರು.